ಜನಶಕ್ತಿ



ಕನ್ನಡ ವಾರಪತ್ರಿಕೆ

Blog : janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 25
ಜೂನ್ 17, 2012

ಪುಟ 16 ರೂ. 5/-





ವಿಶ್ವ ಬಂಡವಾಳಗಾರರ ಸಮಾವೇಶ-12

ಲೂಟಿ ಮತ್ತು ಅನೈತಿಕತೆ ಮರೆ ಮಾಚುವ ವೇದಿಕೆ

ಬಿಡುವುದಿಲ್ಲ ರೈತಾಪಿ ಕೃಷಿ ನಾಶಕ್ಕೆ ಕೃಷಿಯ ಕಂಪನೀಕರಣಕ್ಕೆ

ಬಳ್ಳಾರಿಯಲ್ಲಿ ಬಯಲಾದ ವಿಶ್ವ ಬಂಡವಾಳಗಾರರ ಬಣ್ಣ



ಖಾಸಗಿ ಲೂಟಿಗೆ ಅವಕಾಶ
'ಆಹಾರ ಭದ್ರತೆ'
ಎಂಬ ಪೊಳ್ಳು ಘೋಷಣೆ



ಅಧಿಕಾರದ ಭ್ರಮೆ : ಕಾಲೆಳೆಯುವ ಕಸರತ್ತಿನಲ್ಲಿ ಕಾಂಗ್ರೆಸ್



ಬೀಡಿ ಕಾರ್ಮಿಕರ ಹೋರಾಟಕ್ಕೆ ಜಯ



ಹಿರಿಯ ಕಮ್ಯೂನಿಸ್ಟ್ ನಾಯಕರಾದ ಬಿ.ವಿ. ಕಕ್ಕಿಲ್ಲಾಯರು ಇನ್ನಿಲ್ಲ

ಖಾಸಗಿ ವಲಯಕ್ಕೆ ಸಹಾಯಧನ, ಲಾಭಕೋರ ರಫ್ತುದಾರ ಕಂಪನಿಗಳ ಲೂಟಿಗೆ ಅವಕಾಶ

'ಆಹಾರ ಭದ್ರತೆ' ಎಂಬ ಪೊಳ್ಳು ಘೋಷಣೆ

ಬೃಂದಾ ಕಾರಟ್

ಎಪಿಎಲ್, ಬಿಪಿಎಲ್ ಎಂಬ ಗುರಿ ನಿರ್ದೇಶಿತ ಪಡಿತರ ವ್ಯವಸ್ಥೆಯನ್ನೇ ರದ್ದುಪಡಿಸಿ ದೇಶದ ಆಹಾರದ ಭದ್ರತೆಯನ್ನು ಖಾತ್ರಿಪಡಿಸಲು ಎಲ್ಲರಿಗೂ ಆಹಾರ ಧಾನ್ಯ ಒದಗಿಸುವ ಸಾರ್ವಜನಿಕ ಪಡಿತರ ವ್ಯವಸ್ಥೆಗಾಗಿ ಆಗ್ರಹಿಸಿ ಎಡಪಕ್ಷಗಳು ರಾಷ್ಟ್ರವ್ಯಾಪಿ ಹೋರಾಟಕ್ಕೆ ನೀಡಿರುವ ಕರೆಯು ಅತ್ಯಂತ ಸಕಾಲಿಕವಾಗಿದೆ.

ಎರಡು ವರ್ಷಗಳಲ್ಲಿ ದೇಶದ ಆಹಾರೋತ್ಪಾದನೆಯಲ್ಲಿ ಹೆಚ್ಚಳವಾಗಿದೆ. ಹಾಗೂ ಉತ್ತಮ ಸಂಗ್ರಹವೂ ಆಗಿದೆ. ದೇಶದ ಆಹಾರ ಗೋದಾಮುಗಳಲ್ಲೂ ಕಾಪು ದಾಸ್ತಾನು ಸಾಕಷ್ಟು ಕಾದುಕೊಂಡು ಎಪಿಎಲ್, ಬಿಪಿಎಲ್ ಎಂದು ಗುರಿಯಾಗಿಸಿಕೊಳ್ಳದೆ, ಸಾರ್ವತ್ರಿಕ ಪಡಿತರ ವಿತರಣಾ ವ್ಯವಸ್ಥೆ ಮೂಲಕ ಎಲ್ಲರಿಗೂ ಆಹಾರವನ್ನು ಒದಗಿಸಬಹುದಾಗಿದೆ.

'ಸಮಸ್ಯೆ'

ಆಹಾರೋತ್ಪಾದನೆಯಲ್ಲಿ ಶೇ.3ರಷ್ಟು ಹೆಚ್ಚಳವಾಗಿದ್ದರೂ ಕೂಡ ನವ-ಉದಾರೀಕರಣ ಧೋರಣೆಗಳ ಚೌಕಟ್ಟಿನಡಿಯ ನೀತಿಗಳ ಪರಿಣಾಮವಾಗಿ ಆಹಾರೋತ್ಪಾದನೆ ಹೆಚ್ಚಳವನ್ನು ಅಪೌಷ್ಟಿಕತೆಯನ್ನು ನಿಭಾಯಿಸಲು ಇರುವ ಅವಕಾಶ ಎಂದು ಆಳುವ ಸರ್ಕಾರಗಳು ಪರಿಗಣಿಸುವ ಬದಲಿಗೆ ಇದನ್ನು ಒಂದು 'ಸಮಸ್ಯೆ'ಯಾಗಿ ಮತ್ತು ಉತ್ಪಾದನೆ ಹಾಗೂ ಸಂಗ್ರಹಾಗಾರಗಳ ಸಾಮರ್ಥ್ಯಗಳ ಹೊಂದಾಣಿಕೆಗಳ ನ್ಯೂನತೆ ಎಂಬಂತೆ 'ನೋಡ'ಲಾಯಿತು. ದೇಶದ ಕೋಟ್ಯಂತರ ಜನರು ಹಸಿವು ಮತ್ತು ಅಪೌಷ್ಟಿಕತೆಯಲ್ಲಿ ನರಳುತ್ತಿರುವ ಅತ್ಯಂತ ಲಜ್ಜಾಸ್ಪದವಾದ ದೃಶ್ಯಗಳನ್ನು ನೋಡುತ್ತಿರುವಾಗಲೇ ಸಚಿವರು ಬಯಲುಗಳಲ್ಲಿ ಆಹಾರ ಕೊಳೆಯುವುದನ್ನು ತಡೆಯುವ ಕುರಿತು ಚರ್ಚಿಸುತ್ತಿದ್ದಾರೆ! ಏಕೆಂದರೆ ಆಹಾರ ಸಂಗ್ರಹಾಗಾರಗಳ ಕೊರತೆ. ಏಪ್ರಿಲ್ 30, 2012 ರಂದು ಮಾನ್ಯ ಪ್ರಧಾನ ಮಂತ್ರಿಗಳು ಕೃಷಿ, ಹಣಕಾಸು, ಆಹಾರ ಸಚಿವರು ಮತ್ತು ಯೋಜನಾ ಆಯೋಗದ ಅಧಿಕಾರಿಗಳೊಂದಿಗೆ ಸಭೆ ನಡೆಸಿ ಕೊಳೆಯುತ್ತಿರುವ ಆಹಾರವನ್ನು ರಕ್ಷಣೆ ಮಾಡಲು ಏನು ಮಾಡಬೇಕೆಂದು ಚರ್ಚಿಸಿದರೆಂದು ವರದಿಯಾಯಿತು. ಜನರಿಗೆ ಅಗ್ಗದಲ್ಲಿ ಆಹಾರ ದೊರೆಯುವಿಕೆಯನ್ನು ಖಾತ್ರಿಗೊಳಿಸಲು ಸಾಧ್ಯವಾಗುವಂತೆ ಆಹಾರ ಹಂಚಿಕೆ ಪ್ರಮಾಣವನ್ನು ಹೆಚ್ಚು ಮಾಡುವುದೊಂದೇ ಈ 'ಸಮಸ್ಯೆಗೆ ಇರುವ 'ಒಂದೇ' ಪರಿಹಾರ. ಜಗತ್ತಿನಲ್ಲಿ ಅತಿ ಹೆಚ್ಚು ಅಪೌಷ್ಟಿಕತೆಯನ್ನು ಹೊಂದಿರುವ ದೇಶದಲ್ಲಿ ಈ

ದೇಶದ ನಾಲ್ಕು ಎಡ ಪಕ್ಷಗಳು ಜನರಿಗೆ ಆಹಾರ ಧಾನ್ಯವನ್ನು ವಂಚಿಸುವ ಕೇಂದ್ರ ಯುಪಿಎ ಸರ್ಕಾರದ ಜನದ್ರೋಹಿ ನೀತಿಯ ವಿರುದ್ಧ ರಾಷ್ಟ್ರವ್ಯಾಪಿಯಾಗಿ ಆಂದೋಲನವನ್ನು ಯೋಜಿಸಿವೆ. ಸರ್ಕಾರದ ಪ್ರಸ್ತಾಪಿತ 'ಆಹಾರ ಭದ್ರತಾ ಕಾಯ್ದೆ'ಯಲ್ಲಿನ ಸಮಸ್ಯೆ ಏನು ? ಅದು ಯಾರ ಪರವಾಗಿದೆ ?



ಪರಿಹಾರವನ್ನು ಕಂಡು ಕೊಳ್ಳಲು ಇಷ್ಟು ಉನ್ನತ ಮಟ್ಟದ ಸಭೆ[illegible] ಬೇಕಿರಲಿಲ್ಲ.

'ಆಹಾರ ಇಲಾಖೆ ಶಿಫಾರಸ್ಸಿಗೂ ಸಮ್ಮತಿಯಿಲ್ಲ'

ಬೇಸಿಗೆ ಹಂಗಾಮಿನ ಹೊತ್ತಿಗೆ ಗೋದಾಮುಗಳಲ್ಲಿನ ಹಳೆಯ ಸಂಗ್ರಹವನ್ನು ಖಾಲಿ ಮಾಡುವಂತಾಗಲು ಬಿಪಿಎಲ್, ಎಪಿಎಲ್ ಪಡಿತರ ಚೀಟಿಗಳಿಗೆ ಗೊತ್ತುಪಡಿಸಿರುವ ಆಹಾರ ಪ್ರಮಾಣವನ್ನು ದ್ವಿಗುಣಗೊಳಿಸುವುದು ಹಾಗೂ ಎಪಿಎಲ್‌ಗಳ ಬೆಲೆಯನ್ನು ಇಳಿಸುವಂತೆ ಆಹಾರ ಇಲಾಖೆಯು ಸರ್ಕಾರವನ್ನು ಕೇಳಿತ್ತು ಎಂದು ಆಹಾರ ಸಚಿವಾಲಯದ ದಾಖಲೆಗಳಲ್ಲಿದೆ. ಆಹಾರದ ಮೇಲಿನ ಸಂಸದೀಯ ಸ್ಥಾಯೀ ಸಮಿತಿಗೆ ಸಚಿವಾಲಯದ ಅಧಿಕಾರಿಗಳು ನೀಡಿರುವ ಹೇಳಿಕೆಯಂತೆ ಇದಕ್ಕಾಗಿ 1.06 ಲಕ್ಷ ಕೋಟಿ ರೂ.ಗಳನ್ನು ಗೊತ್ತುಪಡಿಸಲು ಸರ್ಕಾರವನ್ನು ಕೇಳಲಾಗಿತ್ತು. ಇದು 2012-2013 ರ ಬಜೆಟ್‌ನಲ್ಲಿ ಈಗ ಒದಗಿಸಲಾಗಿರುವ ಹಣಕ್ಕಿಂತ ಸುಮಾರು 30,000 ಕೋಟಿ ರೂ ಅಧಿಕ. ಆದರೆ ಸರ್ಕಾರವು ಸಚಿವಾಲಯದ ಈ ಶಿಫಾರಸ್ಸನ್ನು ಒಪ್ಪಲಿಲ್ಲ.

'ಶ್ರೀಮಂತರಿಗಷ್ಟೆ ಸಹಾಯ'

ಮತ್ತೊಂದೆಡೆ ಸರ್ಕಾರದಲ್ಲಿರುವ ಬಂಡವಾಳಶಾಹಿ ರೈತ ಹಾಗೂ ಕೃಷಿ ವ್ಯಾಪಾರಿ ಪ್ರತಿನಿಧಿಗಳು ಆಹಾರೋತ್ಪನ್ನಗಳ ರಫ್ತಿನ ಮೇಲಿನ ನಿರ್ಬಂಧಗಳನ್ನು ತೆಗೆಯುವಂತೆ ಮತ್ತು ರೈತರಿಗೆ ರಫ್ತು ಸಬ್ಸಿಡಿ ನೀಡಿ ಪ್ರೋತ್ಸಾಹಿಸುವಂತೆ ಒತ್ತಡ ಹೇರಿದರು. ಗ್ರಾಹಕರ ಹಿತ ರಕ್ಷಣೆಯ ಕ್ರಮಗಳು ರೈತರ ಹಿತಾಸಕ್ತಿಗಳಿಗೆ ವಿರುದ್ಧವೆಂದು ಬಿಂಬಿಸುವ ಉದ್ದೇಶಪೂರ್ವಕವಾದ ಈ ಪ್ರಯತ್ನದಿಂದ ಶ್ರೀಮಂತ ರೈತರು ಮತ್ತು ದೊಡ್ಡ ವ್ಯಾಪಾರಿಗಳಿಗೆ ಮಾತ್ರವೇ ಸಹಾಯವಾಯಿತು. ಇಂತಹ ನೀತಿಗೆ ಸಾಕಷ್ಟು ಉದಾಹರಣೆಗಳಿವೆ. ಇತ್ತೀಚೆಗೆ ಅಂದರೆ 2008-2009ರಲ್ಲಿ ಉದಾಹರಣೆಗೆ ಹೀಗೆ ಆಯಿತು. ಸಕ್ಕರೆ ಪೂರೈಕೆಯಲ್ಲಿ ಉದ್ದೇಶಪೂರ್ವಕವಾಗಿ ಕೊರತೆಯನ್ನು ನಿರ್ಮಿಸಿ ದೊಡ್ಡ ಸಕ್ಕರೆ ಕಂಪನಿಗಳಿಗೆ 'ಕೊಲೆಗಡುಕ ಲಾಭ' ಮಾಡಿಕೊಳ್ಳಲು ಸಹಾಯ ಮಾಡಲಾಯಿತು. ಮೊದಲು ಸಕ್ಕರೆಯ ರಫ್ತಿಗಾಗಿ ಹಾಗೂ ನಂತರ ಸಕ್ಕರೆಯ ಆಮದಿಗಾಗಿ ಎರಡಕ್ಕೂ ಸಬ್ಸಿಡಿ ಪಡೆದುಕೊಂಡು ಕಂಪನಿಗಳು ಲಾಭ ಮಾಡಿಕೊಂಡವು. ಆದರೆ ಜನಸಾಮಾನ್ಯರು ಪ್ರತಿ ಕೆ.ಜಿ. ಸಕ್ಕರೆಗೆ 100 ರೂ.ಗಳನ್ನು ನೀಡಿ ಖರೀದಿಸಬೇಕಾಯಿತು. ಈ ಮೊದಲಿಗೆ 2006 ಮತ್ತು 2007ರಲ್ಲಿ ಸುಗ್ಗಿಯ ಕಾಲದ ಸರ್ಕಾರಿ ಗೋಧಿ ಸಂಗ್ರಹವನ್ನು ಉದ್ದೇಶಪೂರ್ವಕವಾಗಿ ನಿಲ್ಲಿಸಿ ಕನಿಷ್ಠ ಬೆಂಬಲ ಬೆಲೆಗಿಂತ ಕೊಂಚ ಮಾತ್ರ ಹೆಚ್ಚಿನ ದರಕ್ಕೆ ಖರೀದಿಸಲು ಖಾಸಗಿಯವರಿಗೆ ಅವಕಾಶ ನೀಡಲಾಯಿತು. ಇದರಿಂದ ಆ ನಂತರ ವಿದೇಶಗಳಿಂದ ಗೋಧಿಯನ್ನು ಭಾರತೀಯ ರೈತರಿಗೆ ನೀಡುತ್ತಿದ್ದುದಕ್ಕಿಂತಲೂ ತುಂಬಾ ಹೆಚ್ಚಿನ ಬೆಲೆ ಕೊಟ್ಟು ತರಿಸಿಕೊಳ್ಳಬೇಕಾಯಿತು. ಈ ನೀತಿಯಿಂದಾಗಿ ದೇಶದ ಖಜಾನೆ ಗಣನೀಯ ಪ್ರಮಾಣದ ನಷ್ಟವನ್ನು ಅನುಭವಿಸಿತು.

ಮತ್ತೆ ಇದು ದೊಡ್ಡ ರೈತರ, ವ್ಯಾಪಾರಿಗಳು ಮಾಡಿದ ಪ್ರಾಣ ಹಿಂಡುವ ಕೆಲಸ. ಆಹಾರೋತ್ಪನ್ನಗಳ ರಫ್ತಿನ ಮೇಲಿನ ನಿರ್ಬಂಧಗಳನ್ನು ತೆಗೆಯುವುದು ಸಣ್ಣ ಹಾಗೂ ಮಧ್ಯಮ ರೈತರಿಗೆ ಯಾವುದೇ ರೀತಿಯಲ್ಲೂ ಸಹಾಯಕವಾಗಿರಲಿಲ್ಲ. ಆದರೆ ಸಾಲದ ಸುಳಿಯಲ್ಲಿ ಸಿಲುಕಿದ್ದ ಬಹುದೊಡ್ಡ ಸಂಖ್ಯೆಯಲ್ಲಿ ರೈತರಿಗೆ ತುರ್ತು ಪರಿಹಾರದ ಕ್ರಮವೆಂದರೆ, ಯುಪಿಎ ಸರ್ಕಾರ ಸ್ವಾಮಿನಾಥನ್ ಆಯೋಗದ ಶಿಫಾರಸ್ಸುಗಳನ್ನು ಒಪ್ಪಿಕೊಂಡು ಉತ್ಪಾದನಾ ವೆಚ್ಚದ ಜತೆಗೆ ಶೇ.50 ರಷ್ಟು ಲಾಭ ಸೇರಿಸಿ ಆಹಾರೋತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆಯನ್ನು ನಿಗದಿಗೊಳಿಸಿ ಜಾರಿ ಮಾಡುವುದೇ ಆಗಿತ್ತು.

'ಸ್ವಯಂ ವೈರುಧ್ಯ'

ಈ ವಿಷಯದಲ್ಲಿ ಮತ್ತೊಂದು ಸಲಹೆ ಎಂದರೆ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಕೆಲಸಗಾರರಿಗೆ ಈ ಹಿಂದೆ 'ಕೂಲಿಗಾಗಿ ಕಾಳು' ಯೋಜನೆಯಲ್ಲಿ ಮಾಡಲಾದಂತೆ ಕೂಲಿಯನ್ನು ಒಂದಷ್ಟು ಭಾಗ ಧಾನ್ಯದ ರೂಪದಲ್ಲಿ ನೀಡುವುದು. ಉದ್ಯೋಗ ಖಾತ್ರಿ ಯೋಜನೆಯ ಕೆಲಸಗಾರರ ಅಗತ್ಯವೇನು ಎಂಬುದನ್ನು ಗಮನದಲ್ಲಿಟ್ಟುಕೊಂಡು ರಾಜ್ಯ ಸರ್ಕಾರಗಳಿಗೆ ಈ ವಿಷಯದಲ್ಲಿ ಆಯ್ಕೆಯ ಅವಕಾಶ ಇರಬೇಕು ಎಂದು ನಾವು ಸಹ ಪ್ರತಿಪಾದಿಸಿದೆವು. ಆದರೆ ಈ ವಿಷಯದಲ್ಲಿ ಕೇಂದ್ರ ಸರ್ಕಾರ ನೀಡುತ್ತಿರುವ ಕಾರಣಗಳು ಸ್ವಯಂ ವೈರುಧ್ಯಗಳಿಂದ ಕೂಡಿವೆ. ಒಂದು ಕಡೆ ಅದು ಜನರಿಗೆ ಆಹಾರ ಧಾನ್ಯ ಕೊಡುವುದರ ಬದಲಿಗೆ ಹಣದ ವರ್ಗಾವಣೆ ಅಂದರೆ ಹಣ ನೀಡುವ ಬಗೆಗೆ ಮಾತನ್ನಾಡುತ್ತಿದೆ. ಪಡಿತರ ಮಳಿಗೆಗಳಲ್ಲಿ ಅಂದರೆ ರೇಷನ್ ಡಿಪೋಗಳಲ್ಲಿ ಧಾನ್ಯಕ್ಕೆ ಬದಲಾಗಿ ಜನರು ದುಡ್ಡನ್ನು ಸ್ವೀಕರಿಸಬೇಕೆಂದು ಬಯಸುತ್ತಿದೆ. ಕೆಲಸದ ಸ್ಥಳದಲ್ಲಿ ದುಡ್ಡಿನ ಬದಲು ಕಾಳನ್ನು ಒಪ್ಪಿಕೊಳ್ಳಬೇಕೆಂದು ಬಯಸುತ್ತಿದೆ.

ಪ್ರಸಕ್ತ ಅಂಕಿ ಅಂಶಗಳೇ, ಸರ್ಕಾರದ ಹೊಯ್ದಾಟವನ್ನು ಎತ್ತಿತೋರಿಸುತ್ತಿವೆ. ಭಾರತದ ಭತ್ತ ಮತ್ತು ಗೋಧಿಗಳ ಕಾಪು ದಾಸ್ತಾನು ಕುರಿತಂತೆ ತ್ರೈಮಾಸಿಕ ರೂಢಿಮಟ್ಟವನ್ನು ಋತುವಿಗೆ ತಕ್ಕಂತೆ ಪಾಲಿಸಲಾಗುತ್ತದೆ. (ಅಂದರೆ ಬೇಸಿಗೆ ಹಂಗಾಮಿನ ಆಹಾರ ಧಾನ್ಯ ಉತ್ಪಾದನಾ ಪ್ರಮಾಣದ ಅನುಸಾರ) ಆ ರೂಢಿ ಮಟ್ಟ ಎಂದರೆ

'ಹೆಚ್ಚಿದ ಸಂಗ್ರಹ ಸಾಮರ್ಥ್ಯ'

ಕಳೆದ ಎರಡು ವರ್ಷಗಳಿಂದ ಆಗಿರುವ ದಾಸ್ತಾನು, ಆಗಬೇಕಿದ್ದ ಸಂಗ್ರಹಕ್ಕಿಂತ ಬಹು ಹೆಚ್ಚಾಗಿಯೇ ಇದೆ. ಉದಾಹರಣೆಗೆ ಜನವರಿ 2010ರಲ್ಲಿ 474.45 ಲಕ್ಷ ಟನ್ ಸಂಗ್ರಹವಾಗಿದೆ. ಇದು ರೂಢಿಮಟ್ಟಕ್ಕಿಂತ ಶೇ.137ರಷ್ಟು ಜಾಸ್ತಿ. ಹಾಗೆಯೇ ಏಪ್ರಿಲ್ 2012ರಲ್ಲಿ 545 ಲಕ್ಷ ಟನ್ ಸಂಗ್ರಹವಾಗಿದೆ. ಇದು ರೂಢಿ ನಿಯಮಗಳಿಗಿಂತ ಶೇ.263 ರಷ್ಟು ಹೆಚ್ಚು. ಉತ್ತಮ ರಬಿ ಬೆಳೆ ಬಂದಿದ್ದರಿಂದ ಹೆಚ್ಚು ಸಂಗ್ರಹ ನಿರೀಕ್ಷಿತವಾಗಿತ್ತು. ಒಟ್ಟು 700 ಲಕ್ಷ

ಪುಟ 10ಕ್ಕೆ

ಸಂಸತ್ತಿನ ಮುಂದೆ ಧರಣಿ

ಜನಪರ ಆಹಾರ ಭದ್ರತಾ ಕಾಯಿದೆಗೆ ಒತ್ತಾಯಿಸಿ ಜುಲೈ ತಿಂಗಳಿನಾದ್ಯಂತ ಎಲ್ಲ ರಾಜ್ಯಗಳಲ್ಲೂ ಎಡಪಕ್ಷಗಳ ಎಲ್ಲ ಘಟಕಗಳಿಂದ ತಳಮಟ್ಟದಿಂದ ವಿವಿಧ ಹಂತಗಳಲ್ಲಿ ಹೋರಾಟ ಕ್ಕೆ ಹಾಗೂ ಇದರ ಮುಂದಿನ ಭಾಗವಾಗಿ 2012ರ ಜುಲೈ 30ರಿಂದ ಆಗಸ್ಟ್ 3, 2012 ವರೆಗೆ ಮಳೆಗಾಲದ ಅಧಿವೇಶನದ ಸಂದರ್ಭದಲ್ಲಿ ಸಂಸತ್ತಿನ ಮುಂದೆ ನಿರಂತರ ಎಡಪಕ್ಷಗಳ ನಾಯಕರ ಧರಣಿ ನಡೆಸಲು ಸಭೆ ಎಡರಂಗವು ನಿರ್ಧರಿಸಿದೆ.

ಸಂಪಾದಕೀಯ

ಆರನೆಯ ತರಗತಿಯಿಂದ ಆಂಗ್ಲ ಮಾಧ್ಯಮ ಸಲ್ಲದು

ಸರಕಾರಿ ಶಾಲೆಗಳಲ್ಲಿ ಆರನೆಯ ತರಗತಿಯಿಂದಲೇ ಆಂಗ್ಲ ಮಾಧ್ಯಮ ಭೋದನೆಯನ್ನು ಆರಂಭಿಸಲು ಕರ್ನಾಟಕ ಸರಕಾರ ನಿರ್ಧರಿಸಿರುವುದು ಪ್ರಜಾಸತ್ತಾತ್ಮಕ ಭಾಷಾ ನೀತಿಗೆ ವಿರುದ್ಧವಾಗಿದೆ. ಪ್ರಾಥಮಿಕ ಶಿಕ್ಷಣವನ್ನೂ ಒಳಗೊಂಡು ಎಲ್ಲಾ ಹಂತಗಳ ಶಿಕ್ಷಣದ ಕಲಿಕೆ ಮಾತೃ ಭಾಷೆಯಲ್ಲಿಯೇ ನಡೆಯುವುದು ವೈಜ್ಞಾನಿಕ, ಹಾಗಾಗಿ ಅದೇ ಸೂಕ್ತವಾದುದುದೆಂಬುದು ವಿಶ್ವ ವ್ಯಾಪಿ ಅನುಭವ, ಅಭಿಮತವಾಗಿದೆ. ಭಾರತದಂತಹ ವೈವಿಧ್ಯಮಯ ಸಂಸ್ಕೃತಿ, ಭಾಷೆಗಳಿರುವಲ್ಲಿ ಅವರವರ ಮಾತೃ ಭಾಷಾ ಕಲಿಕೆಗೆ, ಬೆಳವಣಿಗೆಗೆ ಪೂರ್ಣವಾದ ಅವಕಾಶವನ್ನು ನಮ್ಮ ಸಂವಿಧಾನ ನೀಡಿದೆ.

ಆದರೆ ಈ ಆಶಯದ ಮೇಲೆ ನಿರಂತರ ಧಾಳಿಗಳು ನಡೆಯುತ್ತಲೇ ಇವೆ. ಬಂಡವಾಳಶಾಹಿ, ಭೂ ಮಾಲೀಕ ವರ್ಗ ನೀತಿಗಳನ್ನು ಅನುಸರಿಸುವ ಬಹುತೇಕ ಎಲ್ಲಾ ಪಕ್ಷಗಳ ಸರಕಾರಗಳು ಜನಭಾಷೆ, ಸಂಸ್ಕೃತಿ ರಕ್ಷಣೆಗಿಂತ ಮಾರುಕಟ್ಟೆ ಹಿತಾಸಕ್ತಿಗನುಗುಣವಾಗಿಯೇ ವರ್ತಿಸುತ್ತವೆ. ಅದರಲ್ಲೂ ಬಿಜೆಪಿ ಅಧಿಕಾರಕ್ಕೆ ಬಂದ ರಾಜ್ಯಗಳಲ್ಲಿ ಶಿಕ್ಷಣ ರಂಗವನ್ನು ಗುರಿಯಾಗಿಸಿ ಪ್ರಜಾಪ್ರಭುತ್ವಕ್ಕೆ ಮಾರಕವಾದ ಪ್ರತಿಗಾಮಿ ನೀತಿಗಳನ್ನು ಜಾರಿಗೊಳಿಸುತ್ತಾ ಬಂದಿದೆ. ಏಕಸ್ವಾಮ್ಯ ಬಂಡವಾಳದ ಹಿತಾಸಕ್ತಿಗನುಗುಣವಾಗಿ 'ಒಂದೇ ದೇಶ,ಒಂದೇ ಭಾಷೆ' ಎಂಬ, 'ಹಿಂದಿ, ಹಿಂದು, ಹಿಂದುಸ್ಥಾನ್' ಎಂಬ ಫ್ಯಾಶಿಷ್ಟ್ ಮಾದರಿಯ 'ಹಿಂದುತ್ವ' ಅಜೆಂಡಾ ಜಾರಿಗೆ ಸತತ ಪ್ರಯತ್ನ ನಡೆಸಿದೆ. ಜಾಗತೀಕರಣ, ಉದಾರೀಕರಣದ ಸಂದರ್ಭದಲ್ಲಿ ಸಾರ್ವಜನಿಕ ಉದ್ದಿಮೆ, ಉದ್ಯೋಗಗಳ ನಾಶ ಮತ್ತು ಬಹು ರಾಷ್ಟ್ರೀಯ ಕಂಪನಿಗಳಲ್ಲಿ ಕೆಲ ಅವಕಾಶಗಳು ಆಂಗ್ಲ ಭಾಷೆ ಕಲಿಯುವ ಒತ್ತಡವನ್ನು ಸೃಷ್ಟಿಸಿರುವುದು ನಿಜವಾದರೂ ಅದರ ಹೆಸರಿನಲ್ಲಿ ಜನ ಭಾಷೆಗಳನ್ನು ಕೊಲ್ಲುವುದು ಸಮರ್ಥನೀಯವೇ ಅಲ್ಲ. ಮಾತೃ ಭಾಷೆಯಲ್ಲದೇ ಯಾವುದೇ ಬಾಷೆಯ ಕಲಿಕೆಗೆ ವಿರೋಧವಿರಬೇಕಿಲ್ಲ, ಆದರೆ ಮೂಲಭೂತವಾಗಿ ಪ್ರಾಥಮಿಕ ಹಂತದಲ್ಲೇ ಮಾತೃ ಭಾಷೆಯನ್ನು ಮೂಲೆಗೊತ್ತಿ ಆ ಸ್ಥಾನವನ್ನು ಅದು ಆಕ್ರಮಿಸಬೇಕಿಲ್ಲ. ಬದಲಾದ ಸನ್ನಿವೇಶದಲ್ಲಿ ಆಂಗ್ಲ ಭಾಷೆಯನ್ನು ಮಕ್ಕಳಿಗೆ ಕಲಿಸಬಹುದಾದರೂ ಅದು ಒಂದು ಭಾಷಾ ಕಲಿಕೆಯಾಗಿರಬೇಕು ಮಾತ್ರವಲ್ಲದೇ ಇಡೀ ಶಿಕ್ಷಣದ ಮಾಧ್ಯಮವಾಗಕೂಡದು. ಆ ಕಾರಣದಿಂದಲೇ ಸಾಮಾಜಿಕ, ಆರ್ಥಿಕ ದುರ್ಬಲ ವಿಭಾಗಗಳ ವಿದ್ಯಾರ್ಥಿಗಳು ವಂಚಿತರಾಗಬಾರದೆಂದು ಇಂಗ್ಲೀಷ್ ಭಾಷೆಯನ್ನು ಪ್ರಾಥಮಿಕ ಹಂತದಲ್ಲಿ ಒಂದು ವಿಷಯವಾಗಿ ಮಾತ್ರ ಕಲಿಸಬೇಕೆಂಬುದಕ್ಕೆ ಅವಕಾಶ ನೀಡಲಾಗಿದೆ.

ಆದರೆ ಸರಕಾರವು ಕೇಂದ್ರದ ಶಿಕ್ಷಣ ಹಕ್ಕು ಕಾಯ್ದೆಗೆ ಅನುಗುಣವಾಗಿ ಖಾಸಗಿ ಶಾಲೆಗಳಿಗೆ ಸೇರ ಬಯಸುವ ಮಕ್ಕಳ ಶಿಕ್ಷಣ ಶುಲ್ಕ ಭರಿಸುವುದಕ್ಕೆ ಬದಲಾಗಿ ತಾವೇ ಆರಂಭಿಸುತ್ತೇವೆಂಬುದು ನೆಪವಾಗಿದೆ.

ಖಾಸಗೀ ಶಾಲೆಗಳ ಆರಂಭಕ್ಕೆ, ಅಲ್ಲಿ ಮನಸೋ ಇಚ್ಛೆ ಶಿಕ್ಷಣದ ವ್ಯಾಪಾರ ಮಾಡಲು ಇಂಗ್ಲೀಷ್ ಭಾಷಾ ಮಾಧ್ಯಮಕ್ಕೆ ಅವಕಾಶ ಕಲ್ಪಿಸಿರುವುದೇ ಅಪರಾಧ.

ಆದ್ದರಿಂದ ಈ ಕೂಡಲೇ ಸರಕಾರ ತನ್ನ ಈಗಿನ ನಿರ್ಧಾರವನ್ನು ಕೈ ಬಿಡಬೇಕು. ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳನ್ನು ಒದಗಿಸಲು, ಖಾಲಿಯಿರುವ ಶಿಕ್ಷಕರ ಹುದ್ದೆಗಳಿಗೆ ಪೂರ್ಣ ನೇಮಕಗೊಳಿಸಿ, ಗುಣ ಮಟ್ಟ ಸುಧಾರಿಸಿ ಉನ್ನತೀಕರಿಸಲು ಮುಂದಾಗಬೇಕು. ಇಲ್ಲವಾದಲ್ಲಿ ಸರಕಾರದ ಈ ನಿರ್ಧಾರದ ವಿರುದ್ಧ ಪ್ರಬಲ ಜನ ಚಳುವಳಿ ಅನಿವಾರ್ಯ.

ಕಾಲೆಳೆಯುವ ಕಸರತ್ತಿನಲ್ಲಿ ಕಾಂಗ್ರೆಸ್

ಮುಂದಿನ ಚುನಾವಣೆ ಬಹುತೇಕ ಎಲ್ಲಾ ನಾಯಕರ ಇಂದಿನ ನಡವಳಿಕೆ, ಚಟುವಟಿಕೆಗಳಿಗೆ ಮೂಲ ಕೇಂದ್ರವಾಗುತ್ತಿದೆ. ಇದು ಚುನಾವಣಾ ವರ್ಷ. ವಿಧಾನಸಭೆಗೆ ಇನ್ನೂ ಒಂದು ವರುಷದ ಅವಧಿಯಿದ್ದರೂ ಚುನಾವಣೆ ಆ ಮೊದಲೇ ಯಾವಾಗಲೂ ಬರಬಹುದೆಂಬ ನಿರೀಕ್ಷೆ ಎಲ್ಲರಲ್ಲಿದೆ. ಆಡಳಿತ ಪಕ್ಷದವರೇ ಹೇಳುವಂತೆ ಡಿಶೆಂಬರ್ ನಲ್ಲಿ ಗುಜರಾತ್ ಚುನಾವಣೆ ಜೊತೆಗೆ ರಾಜ್ಯದಲ್ಲಿ ಚುನಾವಣೆಗಳು ಬರಬಹುದು. ಅಷ್ಟರೊಳಗೆ ಅಧಿಕಾರ ಹಿಡಿಯುವ ಸನ್ನಾಹದ ಈ ಗುರಿಯೇ ಎಲ್ಲರಲ್ಲಿಯೂ ಸಿದ್ಧತೆಯನ್ನೂ ಇಮ್ಮಡಿಗೊಳಿಸಿದೆ.



ಆ ಸಿದ್ಧತೆಯಲ್ಲಿ ತಾವೂ ಇದ್ದೇವೆಂಬುದು ಕಾಂಗ್ರೆಸ್ ನಾಯಕರ ಅಂಬೋಣ. ಅವರು ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಮುಖ್ಯಮಂತ್ರಿ ಸ್ಥಾನ ಯಾರಿಗಿರಬೇಕೆಂದು ಸಿದ್ಧಗೊಳ್ಳುತ್ತಿದ್ದಾರೆ. ಅಂದರೆ ಸ್ಥಾನಾಕಾಂಕ್ಷಿಗಳನ್ನು ಅರ್ಥಾತ್ ಎದಿರಾಳಿಗಳನ್ನು ಹಣಿಯಲು ಸನ್ನದ್ಧರಾಗುತ್ತಿದ್ದಾರೆ. ಹಾಲಿ ವಿಧಾನ ಪರಿಷತ್ ಚುನಾವಣೆ ಅದಕ್ಕೆ ಒಂದು ಅವಕಾಶವಾಗಿ ಪರಿವರ್ತಿಸಿರುವುದೇ ಸಿದ್ಧರಾಮಯ್ಯನವರನ್ನು ನಿರ್ಲಕ್ಷಿಸಿದ ಪ್ರಸಂಗ!

ಕಾಣೆಯಾದವರು ಕಾಣಿಸಿಕೊಂಡಾಗ!

ಚಿಕ್ಕಮಗಳೂರು ಲೋಕಸಭಾ ಉಪಚುನಾವಣಾ ಫಲಿತಾಂಶದ ಬಳಿಕ ರಾಜ್ಯದಲ್ಲಿ ಕಾಂಗ್ರೆಸ್ ಪರ ಹವಾ ಎದ್ದಿದೆಯೆಂಬ ಭ್ರಮೆಯಲ್ಲಿ ನಾಯಕರು ತೇಲುತ್ತಿದ್ದಾರೆ. ಮುಖ್ಯಮಂತ್ರಿ ಸ್ಥಾನಕ್ಕೆ ಸ್ಪರ್ದೆಗೆ ಸಜ್ಜಾಗಿದ್ದಾರೆ. ಎಸ್.ಎಂ.ಕೃಷ್ಣ ರಾಜಕೀಯ ಹುಟ್ಟು ಹಬ್ಬದ ನೆಪದಲ್ಲಿ ನಾಡಿನ ಭವಿಷ್ಯತ್ತಿನ ಆಶಾಕಿರಣವಾಗಿ ಕಟೌಟ್‌ಗಳಲ್ಲಿ ಮಿಂಚಿದ್ದಾರೆ. ಇಂತಹವರು ಹಲವರಿದ್ದಾರೆ. ಪರಮೇಶ್ವರ್, ಖರ್ಗೆ, ಧರಂಸಿಂಗ್, ಶ್ಯಾಮನೂರು, ದೇಶಪಾಂಡೆ ಅಲ್ಲದೇ ವಿರೋಧ ಪಕ್ಷದ ನಾಯಕ ಸಿದ್ಧರಾಮಯ್ಯ ಇತ್ಯಾದಿ. ಹೀಗಾಗಿ ಪ್ರತಿಯೊಬ್ಬರೂ ತಮ್ಮದೇ ಲೆಕ್ಕಾಚಾರ ದಲ್ಲಿರುವುದರಿಂದ ಅವರದ್ದೇ ಗುಂಪುಗಳು ಸೃಷ್ಟಿಯಾಗಿವೆ. ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸುವ, ಅಂತಹವರ ಕಾಲೆಳೆಯುವ ಪರಸ್ಪರ ಸ್ಪರ್ದೆಯಿಂದಾಗಿಯೇ ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್ ಸುಮಾರು 20 ಶಾಸಕ ಸ್ಥಾನಗಳನ್ನು ಕಳೆದುಕೊಂಡು ಬಿಜೆಪಿಯನ್ನು ಅಧಿಕಾರಕ್ಕೇರಿಸಲು ತನ್ನ ಅಮೂಲ್ಯ ಕಾಣಿಕೆ ಸಲ್ಲಿಸಿತು. ಅಲ್ಲಿಂದ ಇಲ್ಲಿಯವರೆಗೆ ಬಹುತೇಕ ಯಾವ ಚುನಾವಣೆಯಲ್ಲೂ (ಚಿ.ಮ.ಬಿಟ್ಟರೆ) ಗೆಲ್ಲಲೇ ಇಲ್ಲ. ಆದರೂ ಅನುಭವದಿಂದ ಪಾಠ ಕಲಿಯಲೇ ಇಲ್ಲ. ಒಂದೆಡೆ ಕೇಂದ್ರದ ಜನವಿರೋಧಿ , ದೇಶವಿರೋಧಿ ನೀತಿಗಳು, ಇನ್ನೊಂದೆಡೆ ರಾಜಕೀಯ ನಿಷ್ಕ್ರಿಯತೆ, ಗುಂಪುಗಾರಿಕೆ–ಒಳಜಗಳ ಹೀಗಾಗಿ ರಾಜ್ಯದ ರಾಜಕಾರಣದಲ್ಲಿ ಒಂದು ಗಂಭೀರವಾದ ಪಾತ್ರ ವಹಿಸಲಿಲ್ಲ. ಬಳ್ಳಾರಿ ಪಾದಯಾತ್ರೆಗೆ ಜನತೆ ನೀಡಿದ ಅಪೂರ್ವ ಜನಬೆಂಬಲವನ್ನು ಪರಿವರ್ತಿಸಲಾಗದೇ ಸೊರಗಿ ಹೋದುದು ಸಹ ಕಾಲೆಳೆಯುವ ಆಟದಿಂದಲೇ. ಇವೆಲ್ಲದರಲ್ಲಿಯೂ ಕಾಂಗ್ರೆಸ್‌ನಲ್ಲಿಯ ಭೂ ಹಾಗೂ ಗಣಿ ಮಾಫಿಯಾಗಳ ಪಾತ್ರ ಸಣ್ಣದೇನಲ್ಲಾ. ಕೃಷ್ಣರವರ ಆಪ್ತ ಡಿಕೆಶಿಯಂತಹವರು ಕತ್ತಲಾಗುತ್ತಿರುವಂತೆ ಸಿ.ಎಂ. ಯಡಿಯೂರಪ್ಪನವರ ಮನೆಗೆ ಎಡತಾಕುತ್ತಿದ್ದರೆಂಬುದು ಗುಟ್ಟಾಗಿರಲಿಲ್ಲ. ಬಿಜೆಪಿಗೆ ಪರ್ಯಾಯವೇ ಇಲ್ಲದ ನೀತಿಗಳಿಂದ ಅದನ್ನು ಕಾಂಗ್ರೆಸ್ ಎದುರಿಸುವುದಾದರೂ ಹೇಗೆ ಸಾಧ್ಯ.

ಬಿಡದ ಸರ್ವಾಧಿಕಾರಿತನ

ಇಂತಹ ಕಾಂಗ್ರೆಸ್‌ನಲ್ಲಿ ವಿರೋಧ ಪಕ್ಷದ ನಾಯಕನಾಗಿದ್ದ ಸಿದ್ಧರಾಮಯ್ಯನವರೊಂದಿಗೆ ಸಮಾಲೋಚಿಸದೇ ವಿಧಾನ ಪರಿಷತ್‌ಗೆ ಅಭ್ಯರ್ಥಿಗಳನ್ನು ಹೈಕಮಾಂಡ್ ಆರಿಸಿ ಪ್ರಕಟಿಸುತ್ತದೆಯೆಂದರೆ ಅದರ ತಂತ್ರವಾದರೂ ಏನಿದ್ದೀತು? ಮೂಲತಃ ಇಂದಿಗೂ ಅದು ತನ್ನ ಸರ್ವಾಧಿಕಾರಿ ಪ್ರವೃತ್ತಿಯನ್ನು ಬಿಟ್ಟಿಲ್ಲ, ಬಿಡಲೂ ತಯಾರಿಲ್ಲ. ಮುಖ್ಯವಾಗಿ ಅದು ರಾಜ್ಯಗಳಲ್ಲಿ ಪ್ರಾದೇಶಿಕವಾಗಿ ನಾಯಕತ್ವವನ್ನು ಬೆಳೆಸುವುದೇ ಇಲ್ಲ.

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್



ಕೃಪೆ : ದಿ ಹಿಂದೂ

ಕಾಲೆಳೆಯುವ ಕಸರತ್ತಿನಲ್ಲಿ ಕಾಂಗ್ರೆಸ್

ಪುಟ 3 ರಿಂದ

ಅಂತಹದ್ದು ಬೆಳೆದರೆ ತನಗೆ ಒಂದು ಬೆದರಿಕೆಯೆಂದೇ ಭಾವಿಸುತ್ತದೆ. ಸರಕಾರದ ಪ್ರಮುಖ ಸ್ಥಾನಗಳಿಗೆ ಪ್ರಧಾನಿ, ಸಚಿವರುಗಳನ್ನೂ ಒಳಗೊಂಡು ಆರಿಸುವಾಗಲೂ ಪಕ್ಷಾಧ್ಯಕ್ಷರ ಅಣತಿಗೆ ಅಧೀನವಾಗಿರುವ, ನಿಜ ಅರ್ಥದಲ್ಲಿ ಹೈಕಮಾಂಡ್ಗೆ ಗುಲಾಮರಾಗಿರುವವರನ್ನೇ ಆರಿಸಿಕೊಳ್ಳಲಾಗುತ್ತಿದೆ. ಈಗ ಮೂಲ ಕಾಂಗ್ರೆಸ್ ಮತ್ತು ವಲಸಿಗರೆಂಬ ವಾದ ಅಧಿಕಾರದ ಹಪಾಹಪಿಯಲ್ಲಿರುವ ನಾಯಕರುಗಳ ಒಂದು ತಂತ್ರವಷ್ಟೇ. ಹೀಗಾಗಿ ಮುಖ್ಯಮಂತ್ರಿ ಹುದ್ದೆಯ ಪ್ರಬಲಾಕಾಂಕ್ಷಿ ಸಿದ್ಧರಾಮಯ್ಯನಿಗೆ ಹೈಕಮಾಂಡ್ ಕೊಟ್ಟ ಒಂದು ಬ್ರೇಕ್ ಎಂದೇ ಭಾವಿಸಬೇಕು. ಇದರಿಂದ ಆತಂಕಗೊಂಡ ಸಿದ್ಧರಾಮಯ್ಯ ಸ್ಥಾನಕ್ಕೆ ರಾಜೀನಾಮೆ ಕೊಟ್ಟದ್ದು, ಒತ್ತಡದ ನಡುವೆ ದೆಹಲಿಯಲ್ಲಿ ಪಂಚಾಯ್ತಿ ಆದದ್ದು ಈ ಹಿನ್ನೆಲೆಯಲ್ಲಿ.

ಈಗೇನೋ ಹೈಕಮಾಂಡ್‌ನೊಂದಿಗೆ ಮಾತನಾಡಿದ ಬಳಿಕ ಅವರು ಸಮಾಧಾನದಿಂದ ಇದ್ದಾರೆಂದು ಹೇಳಲಾಗುತ್ತಿದೆಯಾದರೂ ಮುಂದಿನ ಬೆಳವಣಿಗೆಗಳು ಅಷ್ಟು ಸುಲಭವಿಲ್ಲ. ಈ ಬಿಸಿ ನಡುವೆ ಸಿದ್ಧರಾಮಯ್ಯನವರ ಆಪ್ತ, ಕಾಂಗ್ರೆಸ್‌ನವರೇ ಆದ ಬೈರತಿ ಸುರೇಶ್ ನಾಲ್ಕನೆಯ (ಬಂಡಾಯ) ಅಭ್ಯರ್ಥಿಯಾಗಿ ಸ್ಪರ್ದೆಗೆ ಇಳಿಸಿಯಾಗಿದೆ. ಇತರೆ ಪಕ್ಷಗಳಲ್ಲಿರುವ ಹೆಚ್ಚುವರಿ ಮತಗಳನ್ನು ಸೆಳೆಯಲು ಪ್ರಯತ್ನ ನಡೆದಿದೆ. ಸುರೇಶ್‌ಗೆ ಜೆಡಿ(ಎಸ್), ಪಕ್ಷೇತರರ ಬೆಂಬಲ ಇದೆ. ಕಾಂಗ್ರೆಸ್‌ನ ಅಧಿಕೃತ ಅಭ್ಯರ್ಥಿ ಸೀತಾರಾಮ್‌ಗಿಂತ ಹೆಚ್ಚಿನ ಹಣ ಚೆಲ್ಲುವಲ್ಲಿ ಲ್ಯಾಂಡ್ ಡೀಲರ್ ಸುರೇಶ್ ಮುಂದೆ ಎಂಬುದು ವ್ಯವಹಾರ ಬಲ್ಲ ಎಲ್ಲರ ಅಭಿಪ್ರಾಯ. ಸುರೇಶ್ ಹಿಂದೆ ಸರಿಯುವ ಪ್ರಶ್ನೆ ಇಲ್ಲವೆಂದು ಹುರುಪಿನಿಂದ ಓಡಾಡುತ್ತಿದ್ದಾನೆ. ಇದು ಕಾಂಗ್ರೆಸ್ಸಿಗೆ ಆತಂಕ ಹುಟ್ಟಿಸಿದೆ. ಮುಖ್ಯವಾಗಿ ಈ ಸಂದರ್ಭದಲ್ಲಿ ಸಿದ್ಧರಾಮಯ್ಯ ಏನು ಮಾಡಬಹುದು? ಏನು ಮಾಡಿದರೂ ಇಕ್ಕಟ್ಟಿಗೆ ಸಿಲುಕುವ ಸ್ಥಿತಿ ಅಲ್ಲಿದೆ. ಅದು ಬಿಟ್ಟರೆ ಸಿದ್ಧರಾಮಯ್ಯಗೂ, ಕಾಂಗ್ರೆಸ್‌ಗೂ ಮಾಡಲಾದರೂ ಏವಿದೆ ?

ಹೈ ಕಮಾಂಡ್ ನತ್ತ ಇವರೆಲ್ಲಾ ನೋಡುವುದನ್ನು ಬಿಟ್ಟರೆ !?

ಗಂಟು ಕಟ್ಟಿದವರು ಮತ್ತು ಗಂಟು ಬಿಚ್ಚುವವರ ನಡುವೆ...

ಇಲ್ಲಿ ಸೇರಿದ್ದು ಮಹಾ ನಾಯಕರ ದಂಡು. ಗಡ್ಕರಿ, ಅರುಣ್ ಜೇಟ್ಲಿ, ನರೇಂದ್ರ ಮೋದಿ, ವೆಂಕಯ್ಯನಾಯ್ಡು, ಸದಾನಂದಗೌಡ ಇತ್ಯಾದಿ. ಅವರೆಲ್ಲಾ ಹೇಳಿಕೊಳ್ಳುತ್ತಿರುವ ದಕ್ಷಿಣ ಭಾರತದ ಮೊದಲ ರಾಜ್ಯ ಸರಕಾರ ನಾಲ್ಕು ವರುಷಗಳನ್ನು ಪೂರೈಸಿತ್ತು ಎಂಬುದೂ ನಿಜ. ಆದರೆ ಅವರ್‍ಯಾರೂ ಆ ಸಂಭ್ರಮದ ಆಚರಣೆಗೆಂದು ಬಂದವರಲ್ಲ! . ಅಲ್ಲಿದ್ದೂ ಆ ಬಗ್ಗೆ ಒಂದು ಮಾತನ್ನೂ ಆಡಲೇ ಇಲ್ಲ. ಪ್ರತಿ ವರುಷವೂ ಸಾಧನೆಯ ಸಮಾವೇಶವನ್ನು ನಡೆಸಿ ಸರಕಾರದ ಖರ್ಚಿನಲ್ಲಿ ಬಿಜೆಪಿ ಪಕ್ಷದ ಭರ್ಜರಿ ರಾಜಕೀಯ ಉತ್ಸವವನ್ನಾಗಿ ಮಾಡುತ್ತಿದ್ದವರು ಈ ಬಾರಿ ತಣ್ಣಗೆ ಕುಳಿತಿರುವಲ್ಲಿ ಕಾರಣವಾದರೂ ಏನು? ಅಂಥಲ್ಲಿ ಯಡಿಯೂರಪ್ಪನವರ ಸಾಧನೆಗಳನ್ನು ಹೇಳಬೇಕೋ, ಸದಾನಂದ, ಅನಂತ್‌ರ ಸಾಧನೆ ಗಳನ್ನು ಸಾರಬೇಕೋ ಎಂಬ ಬಗ್ಗೆ ತಿಕ್ಕಾಟ ಮತ್ತು ವಿಭಜನೆ ಖಂಡಿತವೆಂದೇ ರದ್ದು ಗೊಳಿಸಿದ್ದು ಬಿಜೆಪಿಯ ದುಃಸ್ಥಿತಿಯನ್ನೇ ಸಾರುತ್ತಿದೆ. ಮೇಲಾಗಿ ಈ ಸರಕಾರ ಹೇಳಿಕೊಳ್ಳಲು ಭ್ರಷ್ಟತೆ, ದುರಾಳಿತ ಬಿಟ್ಟರೆ ಬೇರಾದರೂ. ಏನಿದೆ?

ಎಲ್ಲೆಲ್ಲೂ ಒಡಕು

ಇದಕ್ಕೆ ಒಂದೆರಡು ದಿನಗಳ ಹಿಂದೆ ಸಿಬಿಐನ ಕತ್ತಿ ನೆತ್ತಿ ಮೇಲಾಡುತ್ತಿರುವ ದಿನದಿಂದಲೇ ಮಾಜಿ ಸಿ.ಎಂ. 'ಲೋ ಕಮಾಂಡ್ ಮತ್ತು ಹೈ ಕಮಾಂಡ್'ಗಳೆಂಬ 'ಬೇಧ 'ವೆಣಿಸದೇ ಹಿಗ್ಗಾಮುಗ್ಗಾ ಝಾಡಿಸುತ್ತಾ ಇನ್ನೇನು ಪಕ್ಷವನ್ನೇ ಬಿಟ್ಟು ಹೊರ ಹೋಗಬಹುದೆಂಬ ಮಟ್ಟಿಗೆ ಬಿಜೆಪಿಯೊಳಗೆ ಬಿರುಸಿನ ವಾತಾವರಣವಿತ್ತು. ಮುಂಬೈನಲ್ಲಿನ ರಾಷ್ಟ್ರೀಯ ಕಾರ್ಯಕಾರಿಣಿಗೂ ಬಹಿಷ್ಕಾರ ಹಾಕಿ ಧರಣಿ ಕುಳಿತಿದ್ದ ಅವರು ಕೊನೆ ಘಳಿಗೆಯಲ್ಲಿ ಅಲ್ಲಿಗೆ ಹಾರಿ ಮೋದಿಯನ್ನು ಹೊಗಳಿ, ಹಾರ ಹಾಕಿ ಬಂದು ಬಿಟ್ಟರಲ್ಲ !. ಅವರೊಳಗಿನ ಕಿತ್ತಾಟ ಒಂಧು ರೀತಿಯಲ್ಲಿ 'ವಿಶ್ವವ್ಯಾಪಿ'! ಈಗಂತೂ ಅಖಿಲ ಭಾರತ ಮಟ್ಟದಲ್ಲೂ ನಾಯಕರ ಜಗಳ ತಾರಕಕ್ಕೆ ಏರಿದೆ. ಅಲ್ಲಿ ಗುಜರಾತಿನ ಸ್ವಯಂ ಸೇವಕ ಸಂಜಯ್‌ಜೋಶಿಯನ್ನು ಮೂಲೆಗೆ ತಳ್ಳಿ 'ಆರೆಸ್ಸೆಸ್ ಗುಜರಾತನ ಮೋದಿಯನ್ನು ಮೇಲೆತ್ತುತ್ತಿದ್ದಂತೆ ಅದ್ವಾನಿ ಮೂಲೆ ಗುಂಪಾದ ಹತಾಶೆ ಅನುಭವಿಸಿದ್ದು, ಸಾರ್ವಜನಿಕ ಸಭೆಯನ್ನು ಪ್ರಧಾನಿ ಪಟ್ಟದ ಆಕಾಂಕ್ಷಿಗಳಾದ ಅದ್ವಾನಿ, ಸುಷ್ಮಾ ಸ್ವರಾಜ್ ಬಹಿಷ್ಕರಿಸಿದ್ದು ಜಗಜ್ಜಾಹೀರು. ಇದು ತನ್ನ ವಿರೋಧಿ (ಅನಂತ್) ಬಣಕ್ಕಾದ ಮುಖಭಂಗವೆಂದೇ ಭಾವಿಸಿದ ಡಾ. ವೈ.



ಹೊಸ ರಸಾಯನವನ್ನು ಮತ್ತೇ ಬಳಸಿಕೊಳ್ಳುವ ಭರವಸೆಯ ಬೆಳಕು ಕಂಡಿದ್ದು. ಈ ಎಲ್ಲಾ ಹಿನ್ನೆಲೆಯಲ್ಲಿ ಈ ನಾಯಕ ಗಣವೆಲ್ಲಾ ಬಂದು ಸೇರಿದ್ದು ಯಡಿಯೂರಪ್ಪ ನವರ ಮಗಳ ಮಗಳ ಮದುವೆಯಲ್ಲಿ. ನಾವೆಲ್ಲಾ ಒಂಧೇ ಎಂದು ಅಲ್ಲಿ ಸಾರಿದ್ದೇ ಇವರ ಸಾಧನೆ-ಸಮಾವೇಶ!

ಹಚ್ಚಿದ್ದು ತೇಪೆ ಮಾತ್ರ

ಇದರ ಮುಂಧುವರಿದ ಭಾಗವೆಂಬಂತೆ 11 ಸ್ಥಾನಗಳಿಗೆ ವಿಧಾನ ಸಭೆಯಿಂದ ವಿಧಾನ ಪರಿಷತ್ತಿಗೆ ನಡೆಯಲಿರುವ ಚುನಾವಣೆಯಲ್ಲಿ ಯಡಿಯೂರಪ್ಪನವರ ಬಣ ಬಂಡಾಯ ಹೂಡಿದರೆ ಹಲವು ಸ್ಥಾನ ಕೈ ತಪ್ಪುವ ಆತಂಕ ಸದಾ, ಅನಂತ್ ಬಣಕ್ಕೆ ಕಾಡದಿರಲಿಲ್ಲ. ಹೀಗಾಗಿ ರಾಜೀ ಮೂಲಕ ಎರಡೂ ಗುಂಪುಗಳೂ ಹಂಚಿಕೊಂಡದ್ದು. ಡಾ.ವೈ. ಬೇಡಿಕೆಯಂತೆ ಮೂರುಸ್ಥಾನಗಳನ್ನು ನೀಡಿ ಸಂತೃಸಿ ಸದ್ಯ ಮುಖಭಂಗ ತಪ್ಪಿಸಿಕೊಂಡಿದೆ. ಪದವೀಧರ, ಶಿಕ್ಷಕರ ಕ್ಷೇತ್ರಗಳಲ್ಲೂ ಅದೇ ರೀತಿ ಪರಿಣಮಿಸುವುದೋ ಗೊತ್ತಿಲ್ಲ. ಯಾಕೆಂದರೆ ಇದಕ್ಕೂ ಮೊದಲು ಎಲ್ಲಾ ಸ್ಥಾನಗಳಲ್ಲಿ ಬಿಜೆಪಿ ಅಭ್ಯರ್ಥಿಗಳು ಸೋಲೋದು ಗ್ಯಾರಂಟಿ ಅಂತಾ ಯಡಿಯೂರಪ್ಪನವರೇ ಧಮಕಿ ಹಾಕಿದ್ದರಲ್ಲಾ.

ಇಷ್ಟೆಲ್ಲಾ ಆದರೂ ಭಿನ್ನಮತದ ಕುದಿ ಆರಿಲ್ಲ, ಆರೋಲ್ಲ. ಜಾಮೀನಿಗಾಗಿ ನಿತ್ಯವೂ ಪರದಾಡುತ್ತಿರುವ ಯಡಿಯೂರಪ್ಪ ಜೈಲು ಸೇರೋದು ಯಾವಾಗ ಎಂಬುದು ಅದಕ್ಕೆ ಹೊಸ ರೂಪ ಕೊಡಬಹುದು.

ಗಂಟುಗಳ್ಳರ ಸೇವೆಗೆ ಒಂದಾದವರು

ಇಲ್ಲೂ ತಮ್ಮ ಮೇಲಿನ ಕೇಸ್‌ಗಳನ್ನು ದುರ್ಬಲಗೊಳಿಸುವಂತೆ, ಮಾಜಿ ಮುಖ್ಯಮಂತ್ರಿಗಳಾದ ಕೃಷ್ಣ, ಕುಮಾರ ಸ್ವಾಮಿ, ಧರ್ಮಸಿಂಗ್‌ರನ್ನು ಖುಲಾಸೆಗೊಳಿಸುವ ಧಾಟಿಯ ವರದಿ ಬದಲಾಯಿಸುವಂತೆ ಅವರು ಒತ್ತಾಯ ಹೂಡಿದ್ದಾರೆ. ಏನಿದ್ದರೂ ಮುಂದಿನ ಚುನಾವಣೆಯಲ್ಲಿ ಜಗದೀಶ್ ಶೆಟ್ಟರ್‌ರನ್ನು ಮುಖ್ಯಮಂತ್ರಿಯನ್ನಾಗಿಸಬೇಕು, ಮುಂದಿನ ಚುನಾವಣೆ ಎದುರಿಸಬೇಕೆಂದು ಯಡ್ಡಿ ಮತ್ತೇ ಬಂಡಾಯದ ಶಂಖ ಊದಿರುವುದು ಯಾವುದೂ ಮುಗಿದಿಲ್ಲ ಎಂಬುದನ್ನು ತೋರಿಸುತ್ತದೆ. ಇದು ಮುಂದೆ ಶೆಟ್ಟರನ್ನು ಬಳಸಿಕೊಳ್ಳುವ ಅನಂತ್ ಬಣಕ್ಕೆ ಪ್ರತಿತಂತ್ರ. ಮೇಲಾಗಿ "ಹಾದಿ ಬೀದಿಯಲ್ಲಿ ಹೋಗುವವರನ್ನು ಸೇರಿಸಿಕೊಂಡು, ಜಾತಿ, ದುಡ್ಡು ಕೊಟ್ಟುಕೊಂಡು ಸರಕಾರ ರಚಿಸಿ, ಉಳಿಸಿಕೊಂಡೆವು" ಎಂಬ ಪಕ್ಷಾಧ್ಯಕ್ಷ ಈಶ್ವರಪ್ಪ ನವರ ಬಹಿರಂಗ ತಪ್ಪೊಪ್ಪಿಗೆ ಹೇಳಿಕೆ ಬಿಜೆಪಿಯಲ್ಲಿ ವಿಶೇಷವಾಗಿ ಯಡಿಯೂರಪ್ಪ ನವರ ಕ್ಯಾಂಪನ್ನು ಕೆಣಕಿ ರಾಜಕೀಯ ರಸಗವಳವನ್ನಾಗಿಸಿದೆ. ಇವುಗಳ ನಡುವೆ ಮಳೆಗಾಲದಲ್ಲಿ ಬರ ಪರಿಹಾರ ಕಂಡುಕೊಂಡಿದ'! ಮಂತ್ರಿಗಳು ವಿಶ್ವ ಬಂಡವಾಳದ ಗಂಟು ಬಿಚ್ಚಲು ತುದಿಗಾಲ ಮೇಲೆ ನಿಂತಿದ್ದಾರೆ. ಹೀಗೆ ಈ ಸರಕಾರದ ಎಲ್ಲರೂ ಸಾಹುಕಾರರ ಸೇವೆಯಲ್ಲಿ ಬ್ಯುಜಿಯಾಗಿದ್ದಾರೆ!

ಪುಣ್ಯದಲ್ಲಿ ಪಾಲು

ಈ ಯಡ್ಡಿ ಮಾಡಿರುವ ಪುಣ್ಯದೊಳು ಕೇಳು?
ಕೇಶವ ಶಿಲ್ಪಕ್ಕೂ ಉಂಟಯ್ಯ ಪಾಲು
ದೈವೀಸ್ವರೂಪರು ಈ ಸ್ವಾಮಿಗಳು ಕೂಡಾ
ಪಾಲನ್ನು ಪಡೆದವರೆ ಸಂದೇಹ ಬೇಡ

ಪರಿಚಕರ ಸೃಷ್ಟಿ

ಎಷ್ಟೊಂದು ಕಾಲ್ಪನಿಕ ಹೆಸರನ್ನು ಸೃಷ್ಟಿ
ಮಾಡಿಟ್ಟು ಉಂಡರೋ ಕುಳಿತಲ್ಲಿ ಬಿಚ್ಚಿ
ವೈಜ್ಞಾನಿಕ ಒರೆಗಲ್ಲಿಗೆ ಹಚ್ಚೊಮ್ಮೆ ನೋಡಿ
ಆವಾಗ ಹೊರಡುವವುದನ್ನೆಲ್ಲ ರಾಡಿ.

ಕುಲಕ್ಕೇ ಮುಳುವು

ಪವಿತ್ರ ಮನುಷ್ಯತ್ವ ಒಂದಿರಲು ಸಾಕು
ಮನ ಒಡೆವ ಧರ್ಮಗಳು ಯಾತಕ್ಕೆ ಬೇಕು?
ನೆತ್ತರಿನ ಹೊಳೆಹರಿಯೆ ಕಾರಣವು ಆದ
ಧರ್ಮದೇವರು ಯಾಕೆ ಬೇಡವೇ ಬೇಡ.

ವಿಡಂಬಾರಿ ಚುಟುಕುಗಳು

ಜನಶಕ್ತಿ
ಕನ್ನಡ ವಾರಪತ್ರಿಕೆ

ಬೆಂಗಳೂರು ಪದವೀಧರರ ಕ್ಷೇತ್ರ

ಬಿಜೆಪಿ ಅಭ್ಯರ್ಥಿಯಿಂದ ಕಾನೂನು ಬಾಹಿರ ಮಾದರಿ ಮತಪತ್ರ : ತಪ್ಪು ಮಾಹಿತಿ

ಸಿಪಿಐ(ಎಂ) ಖಂಡನೆ - ದೂರು

10.06.2012 ಭಾನುವಾರದಂದು ನಡೆಯಲಿರುವ ಬೆಂಗಳೂರು ಪದವೀಧರ ಕ್ಷೇತ್ರದಿಂದ ಕರ್ನಾಟಕ ವಿಧಾನ ಪರಿಷತ್ ಚುನಾವಣೆಯಲ್ಲಿ ಸಿಪಿಐ(ಎಂ) ಪಕ್ಷವು ಶ್ರೀಮತಿ ಕೆ.ಎಸ್. ಲಕ್ಷ್ಮಿಯವರನ್ನು ಅಭ್ಯರ್ಥಿಯಾಗಿ ಕಣಕ್ಕಿಳಿಸಿದೆ. ಚುನಾವಣಾ ಪ್ರಚಾರವನ್ನು ನಡೆಸುತ್ತಿದೆ. ಕಾಂಗ್ರೆಸ್, ಬಿ.ಜೆ.ಪಿ, ಜೆಡಿ(ಎಸ್) ಅಭ್ಯರ್ಥಿಗಳನ್ನು ಒಳಗೊಂಡು ಒಟ್ಟು 16 ಮಂದಿ ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಬಿಜೆಪಿ ಅಭ್ಯರ್ಥಿ ಶ್ರೀ ರಾಮಚಂದ್ರೇಗೌಡರವರು ತಮ್ಮ ಪರವಾಗಿ ನಡೆಸಿರುವ ಪ್ರಚಾರದ ಭಾಗವಾಗಿ ಮತದಾರರಿಗೆ ಅಂಚೆಯಲ್ಲಿ ಪತ್ರವನ್ನು ಕಳುಹಿಸಿದ್ದಾರೆ. ಇತ್ತೀಚಿನ ಪತ್ರದಲ್ಲಿ ಮಾದರಿ ಮತ ಪತ್ರವನ್ನು ಮುದ್ರಿಸಿ ಕಳುಹಿಸಿದ್ದಾರೆ. ಸದರಿ ಮಾದರಿ ಮತ ಪತ್ರದಲ್ಲಿ ತಮ್ಮ ಹೆಸರನ್ನು ಸರಿಯಾಗಿ ಮುದ್ರಿಸಿ, ಉಳಿದ ಹೆಸರುಗಳ ಸಂಕೇತಗಳನ್ನು ಬಳಸಿ, ಅದರ ಮುಂದೆ ಪ್ರಾಶಸ್ತ್ಯ ಮತಗಳನ್ನು ನಮೂದಿಸಿದ್ದಾರೆ. ಇದು ಸ್ವರ್ದಾಳುಗಳ ಬಗ್ಗೆ ತಪ್ಪು ಮಾಹಿತಿ ನೀಡುವ ಮತ್ತು ಮತದಾರರನ್ನು ದಾರಿ ತಪ್ಪಿಸುವ ಕ್ರಮವಾಗಿದೆ. ಈ ರೀತಿ ಮಾಡುವ ಮೂಲಕ ಬಿಜೆಪಿ ಮತ್ತು ಅವರ ಅಭ್ಯರ್ಥಿಯು ಮತದಾರರಲ್ಲಿ ಗೊಂದಲ ಸೃಷ್ಟಿಸಲು ಯತ್ನಿಸಿದ್ದಾರೆ. ಅಂತೆಯೆ ಇತರೆ ಅಭ್ಯರ್ಥಿಗಳಿಗೆ ಯಾವ ಪ್ರಾಶಸ್ತ್ಯ ನೀಡಬೇಕು ಎಂದು ಸಹಾ ನಮೂದಿಸಿದ್ದಾರೆ.

ಸಾಮಾನ್ಯವಾಗಿ ಮಾದರಿ ಮತಪತ್ರದಲ್ಲಿ ಮತಕೋರುವ ಅಭ್ಯರ್ಥಿಗಳು ತಮ್ಮ ಹೆಸರು, ಕ್ರಮ ಸಂಖ್ಯೆ ಮತ್ತು ಪ್ರಥಮ ಪ್ರಾಶಸ್ತ್ಯದ 1 ಸಂಕೇತವನ್ನು ಬಳಸುವುದು ಸಹಜವಾಗಿದೆ. ಇತರೆ ಅಭ್ಯರ್ಥಿಗಳ ಹೆಸರು ಮತ್ತು ಅವರಿಗೆ ನೀಡಬೇಕಾದ ಪ್ರಾಶಸ್ತ್ಯವನ್ನು ಖಾಲಿ ಬಿಡಲಾಗುತ್ತದೆ. ಆದರೆ ಬಿಜೆಪಿ ಅಭ್ಯರ್ಥಿಯು ಅದಕ್ಕೆ ವ್ಯತಿರಿಕ್ತವಾಗಿ ಇತರೆ ಅಭ್ಯರ್ಥಿಗಳ ಹೆಸರನ್ನು ತಪ್ಪಾಗಿ ನಮೂದಿಸಿದ್ದಾರೆ. ಅವರ ಮುಂದೆ ಯಾವ ಪ್ರಾಶಸ್ತ್ಯ ನೀಡಬೇಕೆಂಬುದನ್ನು ತಾವೇ ಸೂಚಿಸಿರುವುದು ಕಾನೂನುಬಾಹಿರ ಕ್ರಮ ಎಂದು ಸಿಪಿಐ(ಎಂ) ಖಂಡಿಸಿದೆ. ಇದು ಒಂಧು ರೀತಿಯ ಭ್ರಷ್ಟಾಚಾರ ವಾಗಿದೆ. ಮತದಾರರು ಬಿಜೆಪಿಯ ಇಂತಹ ದಾರಿ ತಪ್ಪಿಸುವ ಕ್ರಮದ ಕುರಿತು ಎಚ್ಚರಿಕೆ ವಹಿಸಬೇಕೆಂದು ಮನವಿ ಮಾಡುತ್ತದೆ.

ಮತ ಪತ್ರವನ್ನು ಮಾದರಿ ಹೆಸರಿನಲ್ಲಿ ತಪ್ಪಾಗಿ ಪ್ರಕಟಿಸಿ, ಮತದಾರರನ್ನು ದಾರಿ ತಪ್ಪಿಸುವ ಬಿಜೆಪಿ ಅಭ್ಯರ್ಥಿಯ ಕ್ರಮ ಕುರಿತು ರಾಜ್ಯ ಮುಖ್ಯ ಚುನಾವಣಾ ಅಧಿಕಾರಿಗೆ ಸಿಪಿಐ(ಎಂ) ಅಭ್ಯರ್ಥಿ ಶ್ರೀಮತಿ ಕೆ.ಎಸ್. ಲಕ್ಷ್ಮಿಯ ಪರವಾಗಿ ಅವರ ಚುನಾವಣಾ ಏಜೆಂಟ್ ಶ್ರೀ ಕೆ.ಎನ್. ಉಮೇಶ್ ಲಿಖಿತ ದೂರನ್ನು ನೀಡಿದ್ದಾರೆ. ಬಿಜೆಪಿ ಅಭ್ಯರ್ಥಿಯ ಮೇಲೆ ಅಗತ್ಯ ಕಾನೂನು ಕ್ರಮ ಕೈಗೊಳ್ಳಬೇಕೆಂದು ಸಿಪಿಐ(ಎಂ) ರಾಜ್ಯ ಸಮಿತಿಯು ಒತ್ತಾಯಿಸಿದೆ.

ಬಿಜೆಪಿಯ ದುರಾಡಳಿತದಿಂದ ಜನರ ಮತ್ತು ಪದವೀಧರರ ಹಿತ ರಕ್ಷಣೆ ಮಾಡಲು ಸಿಪಿಐ(ಎಂ) ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಶ್ರೀಮತಿ ಲಕ್ಮಿ ಅವರಿಗೆ ಮೊದಲನೆ ಪ್ರಾಶಸ್ತ ಮತ ನೀಡಿ ಬೆಂಬಲಿಸಿ ಬಹುಮತದಿಂದ ಆಯ್ಕೆ ಮಾಡಲು ಮತದಾರರಿಗೆ ಮನವಿ ಮಾಡಲಾಗಿದೆ.

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಎಸ್.ಪ್ರಸನ್ನಕುಮಾರ್,ಜಿಲ್ಲಾ ಕಾರ್ಯದರ್ಶಿಗಳಾದ (ಎಂ.ಎಸ್.ಮೀನಾಕ್ಷಿ ಸುಂದರಂ),ಕೆ. ಪ್ರಕಾಶ್ ಹಾಹೂ ಟಿ. ಸುರೇಂದ್ರರಾವ್, ಚುನಾವಣ ಏಜೆಂಟ್ ರಾದ ಕೆ.ಎನ್. ಉಮೇಶ್ ವಿವರಿಸಿದರು


ಮಾದರಿ ಮತ ಪತ್ರದಲ್ಲಿ ಬಿಜೆಪಿ ಅಭ್ಯರ್ಥಿಯಿಂದ ದುರುದ್ದೇಶ ಪೂರಿತ ಮತಯಾಚನೆ

ಜೂನ್ 10ರಂದು ವಿಧಾನ ಪರಿಷತ್‌ಗೆ ನಡೆಯುವ ಚುನಾವಣೆಯಲ್ಲಿ ನಮ್ಮ ಪಕ್ಷದ ವತಿಯಿಂದ ಕೆ.ಎಸ್. ಲಕ್ಷ್ಮಿಯವರು ಬೆಂಗಳೂರು ಪದವೀಧರರ ಕ್ಷೇತ್ರದಿಂದ ಸ್ವರ್ಧೆಯಲ್ಲಿರುವುದು ತಮಗೆ ತಿಳಿದಿದೆ.

ಈ ಸಂದರ್ಭದಲ್ಲಿ ಬಿಜೆಪಿ ಅಭ್ಯಥಿಯಾದ ರಾಮಚಂದ್ರೇಗೌಡರು ತಮ್ಮ ಮತಯಾಚನೆಯ ಕರಪತ್ರದಲ್ಲಿ ಮಾದರಿ ಮತಪತ್ರವನ್ನು ಸಹ ಮುದ್ರಿಸಿದ್ದು, ಇದು ದುರುದ್ದೇಶ ಪೂರಿತವಾಗಿ ಕೆ.ಎಸ್. ಲಕ್ಷ್ಮಿಯವರಿಗೆ 6ನೇ ಪ್ರಾಶಸ್ತ್ಯದ ಮತ ನೀಡುವಂತೆ ತಿಳಿಸಿದ್ದಾರೆ. ಇದು ಮತದಾರರಲ್ಲಿ ತಪ್ಪು ಅಭಿಪ್ರಾಯಕ್ಕೆ ಎಡೆ ಮಾಡಿಕೊಡುತ್ತದೆ. ಬಿಜೆಪಿ ಅಭ್ಯರ್ಥಿಯು ತನ್ನ ಪರವಾಗಿ ಮತಯಾಚನೆ ಮಾಡಬಹುದೇ ಹೊರತು ಇನ್ನೋರ್ವ ಅಭ್ಯರ್ಥಿಗೆ, 'ಇದೇ ರೀತಿಯಾಗಿ ಮತ ನೀಡಿ' ಎಂದು ಹೇಳುವುದು ಕಾನೂನು ಬಾಹಿರ. ಕರಪತ್ರದಲ್ಲಿ ಕ್ರಮ ಸಂಖ್ಯೆ 4ರಲ್ಲಿ ಕೆ.ಎಸ್. ಲಕ್ಷಿ ಎಂಬುದರ ಬಲದಾಗಿ ಲ(L) ಎಂದು ನಮೂದಿಸಿದ್ದು ಪ್ರಾಶಸ್ತ್ಯದ ಕಲಂನಲ್ಲಿ "6" ಎಂದು ನಮೂದಿಸಿರುವುದು ಮತದಾರರನ್ನು ಗೊಂದಲಕ್ಕೀಡು ಮಾಡುವ ಉದ್ದೇಶ ಹೊಂದಿದೆ.

ಆದ್ದರಿಂದ ತಾವು ಬಿಜೆಪಿ ಅಭ್ಯರ್ಥಿ ರಾಮಚಂದೇಗೌಡರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ವಿನಂತಿಸುತ್ತೇವೆ.

ಹಿರಿಯ ಕಮ್ಯೂನಿಸ್ಟ್ ನಾಯಕ ಬಿ.ವಿ.ಕಕ್ಕಿಲ್ಲಾಯ ನಿಧನಕ್ಕೆ ಸಂತಾಪ



ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕಮ್ಯೂನಿಸ್ಟ್ ಪಕ್ಷವನ್ನು ಪ್ರಾರಂಭದಲ್ಲಿ ಕಟ್ಟಿದವರೂ, ಸ್ವಾತಂತ್ರ್ಯ ಹೋರಾಟಗಾರರೂ, ಬರಹಗಾರರೂ, ಸಿಪಿಐ ಹಿರಿಯ ನಾಯಕರೂ ಆದ ಬಿ.ವಿ.ಕಕ್ಕಿಲ್ಲಾಯರು ಜೂನ್ 4ರಂದು ನಿಧನರಾಗಿದ್ದು, ಸಿಪಿಐ(ಎಂ) ತನ್ನ ತೀವ್ರ ರಾಜ್ಯ ಸಮಿತಿ ಹಾಗೂ ಸಂತಾಪವನ್ನು ವ್ಯಕ್ತಪಡಿಸಿದೆ.

ರಾಜ್ಯ ಸೆಕ್ರೆಟಾರಿಯೇಟ್ ಪರವಾಗಿ ಸಮಿತಿ ಪರವಾಗಿ ಪಕ್ಷದ ಹಿರಿಯ ಮುಖಂಡರಾದ ಕೆ.ಆರ್.ಶ್ರೀಯಾನ್ ಪತ್ರಿಕೆಗಳಲ್ಲಿ ಸಂತಾಪ ವ್ಯಕ್ತಪಡಿಸಿದರು. ಆ ದಿನ ಮಂಗಳೂರಿನ ಸಿಪಿಐ ಕಚೇರಿಯಲ್ಲಿ ಇರಿಸಲಾಗಿದ್ದ ಅಗಲಿದ ಬಿ.ವಿ.ಕಕ್ಕಿಲ್ಲಾಯರ ಶರೀರಕ್ಕೆ ಕೆ.ಆರ್.ಶ್ರೀಯಾನ್ ನೇತೃತ್ವದಲ್ಲಿ ಪಕ್ಷದ ಜಿಲ್ಲಾ ಸಮಿತಿ ಸದಸ್ಯರು ಪುಷ್ಪವಿರಿಸಿ ಅಂತಿಮ ನಮನ ಸಲ್ಲಿಸಿದರು.

ಬಿ.ವಿ.ಕಕ್ಕಿಲ್ಲಾಯರ ದೇಹದ ಅಂತಿಮ ಸಂಸ್ಕಾರ ನಡೆಸುವಾಗಲೂ ಸಿಪಿಐ(ಎಂ) ಪಕ್ಷದ ಕಾರ್ಯಕರ್ತರು ಭಾಗವಹಿಸಿದರಲ್ಲದೆ, ಮರುದಿನ ನಡೆದ ಸಾರ್ವಜನಿಕ ಶ್ರದ್ಧಾಂಜಲಿ ಸಭೆಯಲ್ಲೂ ಭಾಗವಹಿಸಿದರು. ಸಿಪಿಐ(ಎಂ) ಪರವಾಗಿ ಕೆ.ಆರ್.ಶ್ರೀಯಾನ್ ಶ್ರದ್ಧಾಂಜಲಿಯ ಮಾತುಗಳನ್ನು ಆಡಿದರು. ಸಿಪಿಐ(ಎಂ) ಸಂತಾಪ ನಾಡಿನ ಹಿರಿಯ ಸ್ವಾತಂತ್ರ್ಯ ಹೋರಾಟಗಾರರು, ಖ್ಯಾತ ಕಮ್ಯುನಿಸ್ಟ್ ನಾಯಕರಾಗಿದ್ದ, ಮಾಜಿ ಶಾಸಕ ಕಾಂ. ಬಿ.ವಿ. ಕಕ್ಕಿಲ್ಲಾಯರ ನಿಧನ ಚಳುವಳಿಗೆ ಆದ ಅಪಾರ ನಷ್ಟ ಎಂದು ಸಿಪಿಐ(ಎಂ) ರಾಜ್ಯ ಸಮಿತಿ ಸಂತಾಪ ಸೂಚಿಸಿದೆ.

ಅವರೊಬ್ಬ ಚಿಂತಕ, ಹೋರಾಟಗಾರ, ಭ್ರಷ್ಟಾಚಾರ ಪ್ರಾಂತ್ಯದ ರಚನೆಗಾಗಿ ನಡೆದ ಚಳುವಳಿಯಲ್ಲಿ ಅವರ ಸಕ್ರೀಯತೆ ಒಂದು ಸ್ಮರಣೀಯ. ಹಲವಾರು ಕೃತಿಗಳ ರಚನಾಕರರಾಗಿದ್ದ ಅವರು ಕೊನೆಯುಸರಿರುವ ತನಕ ದುಡಿಯುವ ಜನರ ಚಿಂತನೆ, ಮತ್ತು ಕಾರ್ಯದಲ್ಲಿ ತೊಡಗಿದ್ದು ಸ್ಪೂರ್ತಿದಾಯಕವಾಗಿದೆ. ಅವರ ನಿಧವದಿಂದಾಗಿ ಶೋಕದಲ್ಲಿರುವ ಸಿಪಿಐನ ಪಕ್ಷಕ್ಕೂ, ಅವರ ಕುಟುಂಬಕ್ಕೂ ಸಾಂತ್ವನ ತಿಳಿಸಿದ್ದು, ದುಃಖದಲ್ಲಿ ತಾವು ಭಾಗಿಯೆಂದು ತಿಳಿಸಿದರು. ಅಲ್ಲದೇ ಡಿವೈಎಫ್ಐ ಪರವಾಗಿ ಮುನೀರ್ ಕಾಟಿಪಳ್ಳ ಶ್ರದ್ಧಾಂಜಲಿ ಸಲ್ಲಿಸಿದರು.

ಜನಶಕ್ತಿ ಶ್ರದ್ಧಾಂಜಲಿ

ಹಿರಿಯ ಕಮ್ಯುನಿಸ್ಟ್ ನಾಯಕರಾಗಿದ್ದ ಕೆಂಬಾವುಟದ ಸಂಪಾದಕರೂ ಆಗಿದ್ದ ಸಂಗಾತಿ ಬಿ.ವಿ.ಕ್ಕಿಲ್ಲಾಯರ ಜನಶಕ್ತಿ ವಾರಪತ್ರಿಕೆಯು ಹೃದಯಾಂತರಾಳದ ಶ್ರದ್ಧಾಂಜಲಿ ಸಲ್ಲಿಸಿದೆ.



ಬೀಡಿ ಕಾರ್ಮಿಕರ ಹೋರಾಟಕ್ಕೆ ಜಯ
ಕನಿಷ್ಟ ವೇತನ : ಸರ್ಕಾರದ ಅಧಿಸೂಚನೆ ಪ್ರಕಟಣೆ

ಬೀಡಿ ಉದ್ಯಮದ ಮಾಲಕರು, ಕಾರ್ಮಿಕರು ಮತ್ತು ರಾಜ್ಯ ಸರ್ಕಾರದ ಪ್ರತಿನಿದಿಗಳನ್ನೊಳಗೊಂಡ ಬೀಡಿ ಕನಿಷ್ಟ ಕೂಲಿ ಕುರಿತಾದ ಮಾತುಕತೆಗಳು ನಡೆದು ಈ ಬಗ್ಗೆ ಸರ್ಕಾರ ಒಂದು ಉಪ ಸಮಿತಿ ನೇಮಕ ನಡೆದಿತ್ತು. ಈ ಉಪ ಸಮಿತಿಯಲ್ಲಿ ಬೀಡಿ ಮಾಲಕರ ಸಂಘಟನೆಯ ಪದಾಧಿಕಾರಿಗಳು ಒಳಗೊಂಡಿದ್ದು, ಆ ಉಪ ಸಮಿತಿ ಕೈಗೊಂಡ ತೀರ್ಮಾನವನ್ನು ಕಳೆದ ಎಪ್ರಿಲ್ 1 ರಿಂದ ಜಾರಿಮಾಡಬೇಕಾಗಿತ್ತು. ಆದರೆ ಈ ಸಂಬಂಧ ರಾಜ್ಯ ಪತ್ರದಲ್ಲಿ ಪ್ರಕಟಣೆ ಆಗಿರುವುದಿಲ್ಲವೆಂಬ ಪಿಳ್ಳೆ ನೆವ ಹೇಳಿ, ಎಪ್ರಿಲ್ 1 ರಿಂದ ನಿಗದಿಯಾಗಿದ್ದ 1,000 ಬೀಡಿಗೆ ಕನಿಷ್ಟ ವೇತನ ರೂ.106 ಮತ್ತು ತತ್ಸಂಬಂಧ ತುಟ್ಟಿಭತ್ತೆ ರೂ.10.20 ಒಟ್ಟು ರೂ.116.20 ನ್ನು ಮಾಲಕರು ಕೊಡದೆ ಬೀಡಿ ಕಾರ್ಮಿಕರನ್ನು ಸತಾಯಿಸುತ್ತಿದ್ದರು. ಸಿಐಟಿಯು ಸಂಯೋಜಿತ ಕರ್ನಾಟಕ ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ ಕಳೆದ ಮೇ 8 ರಂದು ತಮ್ಮ ರಾಜ್ಯ ಸಮ್ಮೇಳನದಲ್ಲಿ ನಿರ್ಣಯ ಕೈಗೊಳ್ಳುವ ಮೂಲಕ ಮಾಲಕರನ್ನು ಕನಿಷ್ಟ ಕೂಲಿ ನೀಡುವಂತೆ ಒತ್ತಾಯಿಸಿತ್ತು. ಮೇ 17 ರಂದು ರಾಜ್ಯ ಮಟ್ಟದಲ್ಲಿ ಇನ್ನೊಂದು ಪ್ರತಿಭಟನೆ ನಡೆಸಿದರೂ ಮಾಲಕರಾಗಲೀ, ಸರಕಾರವಾಗಲೀ ಸ್ಪಂದಿಸಲಿಲ್ಲ. ಹೀಗಾಗಿ ಮೇ 25 ರಿಂದ ಅನಿರ್ದಿಷ್ಟಾವಧಿ ಮುಷ್ಕರವನ್ನು ದ.ಕ.ಜಿಲ್ಲಾ ಬೀಡಿ ಕಾರ್ಮಿಕರ ಫೆಡರೇಶನ್ ಹಮ್ಮಿಕೊಂಡಿತು. ರಾಜ್ಯ ಪತ್ರದಲ್ಲಿ ಸರಕಾರದ ಪ್ರಕಟಣೆ ಆದಲ್ಲಿ ಕನಿಷ್ಟ ಕೂಲಿ ನೀಡುವುದಾಗಿ ಮಾಲಕರು ಹೇಳಿದರಷ್ಟೆ, ದ.ಕ.ಜಿಲ್ಲೆಯ ವಿವಿಧ ತಾಲೂಕುಗಳಲ್ಲೂ ಬೀಡಿ ಕಂಪೆನಿಗಳ ಪ್ರಮುಖ ಕಚೇರಿ ಹಾಗೂ ಗೋದಾಮು ಬಳಿ ವ್ಯಾಪಕವಾಗಿ ನಡೆದ 11 ದಿನಗಳ ಮುಷ್ಕರದ ಬಳಿಕ, ಸರಕಾರ ಜೂನ್ 4 ರಂದು ರಾಜ್ಯ ಪತ್ರದಲ್ಲಿ ಪ್ರಕಟಣೆ ಮಾಡಿರುವುದು ಬೀಡಿ ಕಾರ್ಮಿಕರ ಸಮರಧೀರ ಹೋರಾಟಕ್ಕೆ ಸಂದ ಜಯವಾಗಿದೆ.

ಬೀಡಿ ಮಾಲಕರ ಜಿಗುಟು ಧೋರಣೆ


ಬೀಡಿ ಮಾಲಕರ ಪ್ರತಿನಿಧಿಗಳು ರಾಜ್ಯ ಸರ್ಕಾರದ ಉಪ ಸಮಿತಿ ಸದಸ್ಯರಾಗಿದ್ದರು. ಎಪ್ರಿಲ್ 1 ರಿಂದ ಕನಿಷ್ಟ ಕೂಲಿ ಜಾರಿಯಾಗಬೇಕೆಂದು ಸಮಿತಿಯ ತೀರ್ಮಾನವಾಗಿತ್ತು. ಸರಕಾರೀ ಪ್ರಕಟಣೆಯಾಗಿಲ್ಲವೆಂದು ಕನಿಷ್ಟ ಕೂಲಿ ಕೊಡಲು ಹಿಂದೆ ಸರಿದುದು ವಾಸ್ತವವಾಗಿ ಹೆಚ್ಚಿಸಿದ ವೇತನವನ್ನು ನೀಡುವುದನ್ನು ಮುಂದಕ್ಕೆ ಹಾಕುವ ಹುನ್ನಾರವೇ ಹೊರತು ಬೇರೇನೂ ಆಗಿರಲಿಲ್ಲ. ಇದರ ಮೇಲೆ ಸರಕಾರೀ ಪ್ರಕಟಣೆ ವಿಳಂಬಗೊಳಿಸಲು ಮಾಲಕರು ಸರಕಾರದ ಮೇಲೆ ಒತ್ತಡ ಹಾಕಿರುವ ಸಾಧ್ಯತೆಯೂ ಇದೆ. ಮಾಲಕರ ಇಂಥ ಧೋರಣೆಯನ್ನು ಪ್ರತಿಭಟಿಸಿ ಅನಿರ್ದಿಷ್ಟಾವಧಿ ಮುಷ್ಕರ ಹಮ್ಮಿಕೊಳ್ಳುವುದು ಅನಿವಾರ್ಯವಾಯಿತೆಂದು ಬೀಡಿ ಕಾರ್ಮಿಕರ ಫೆಡರೇಶನ್ನಿನ ಮುಖಂಡರು ಹೇಳುತ್ತಾರೆ.

ಮಾಲಕರ ಹುನ್ನಾರ, ಸರಕಾರದ ವಿಳಂಬ ನೀತಿಯನ್ನು ಬೀಡಿ

ಕಾರ್ಮಿಕರು ಸರಿಯಾಗಿ ಅರ್ಥ ಮಾಡಿಕೊಂಡು ದ.ಕ.ಜಿಲ್ಲೆಯಲ್ಲೂ ಉಡುಪಿ ಜಿಲ್ಲೆಯಲ್ಲೂ ಧೀರ ಹೋರಾಟವನ್ನು ಆರಂಬಿಸಿಯೇ ಬಿಟ್ಟರು.

ಹೋರಾಟಕ್ಕೆ ವಿಶಿಷ್ಟ ಮಾದರಿ ಒದಗಿಸಿದ ಗುರುಪುರ ವಲಯದ ಬೀಡಿ ಕಾರ್ಮಿಕರು:

ಮಂಗಳೂರು, ಮೂಡಬಿದ್ರೆ,-ಗುರುಪುರ-ಕೈಕಂಭ, ಪುತ್ತೂರು, ಬೆಳ್ತಂಗಡಿ ಬಿ.ಸಿ.ರೋಡ್. ಉಳ್ಳಾಲ, ತಲಪಾಡಿ, ಸುಳ್ಯ ಇನ್ನೂ ಹಲವು ಊರುಗಳಲ್ಲಿ ಬೀಡಿ ಫ್ಯಾಕ್ಟರಿಗಳ ಎದುರು ಮೇ 25 ರಿಂದ ಪ್ರತಿದಿನ ಬೆಳಗ್ಗೆಯಿಂದ ಸಂಜೆಯವರೆಗೆ ಪ್ರತಿಭಟನೆ ನಡೆಯುತ್ತಿತ್ತು. ಪ್ರತೀ ಕೇಂದ್ರಗಳಲ್ಲೂ ಕೆಲವು ನೂರರ ಸಂಖ್ಯೆಯಲ್ಲಿ ಮುಷ್ಕರಕಾರರು ಹಾಜರಿರುತ್ತಿದ್ದರು. ಪ್ರತಿದಿನ ಬೆಳಗ್ಗೆ ಸಂಜೆ ನಾಯಕರಿಂದ ಭಾಷಣಗಳಿರುತ್ತಿದ್ದವು.



ವರದಿ : ವಾ.ಉ.

ಗುರುಪುರ-ಸುರತ್ಕಲ್ ಬೀಡಿ ಕೆಲಸಗಾರರ ಸಂಘದ ಪ್ರಧಾನ ಮುಷ್ಕರ ಕೈಕಂಭ ಎಂಬಲ್ಲಿ ನಡೆಯುತ್ತಿತ್ತು. ಬಹಳ ವ್ಯವಸ್ಥಿತವಾಗಿ ಮುಷ್ಕರದ ಚಪ್ಪರದಡಿ ಪ್ರತಿನಿತ್ಯ ಮುನ್ನೂರು ನಾಲ್ನೂರು ಜನ ಕಾರ್ಮಿಕರು ಸೇರುತ್ತಿದ್ದರು. ಅಲ್ಲೇ ಗಂಜಿ ಬೇಯಿಸಿ ಮಧ್ಯಾಹ್ನ



ಪ್ರತಿಭಟನಾಕಾರರು ಸೇವಿಸುತ್ತಿದ್ದರು. ಎರಡನೇ ದಿನದಿಂದ ಈ ಮುಷ್ಕರ ಹಗಲು ರಾತ್ರಿ ಎಂಬಂತೆ ಮುಂದುವರಿಯಿತು. ರಾತ್ರಿಯೂ ಸುಮಾರು 100 ಮಂದಿ ಮುಷ್ಕರಕಾರರು ಹಾಜರಿರುತ್ತಿದ್ದರು. ಮೂರು ಹೊತ್ತು ಅಲ್ಲೇ ಗಂಜಿ ಊಟ.. ಗುರುಪುರ-ಕೈಕಂಭದ ಮಾದರಿಯ ಬಗ್ಗೆ ಪ್ರಚಾರ ಇತರ ಕೇಂದ್ರಗಳಿಗೂ ತಲುಪಿ ಬೆಳ್ತಂಗಡಿ, ಮೂಡಬಿದ್ರೆ, ಪುತ್ತೂರುಗಳಲ್ಲೂ ಹಗಲು ರಾತ್ರಿಯ ಮುಷ್ಕರ ಮುಂದುವರೆಯಿತು.

ಉಗ್ರ ರೂಪಕ್ಕೆ ತಲುಪಿದ ಹೋರಾಟಗಳು

ಕೆಲವೆಡೆ ಮಾಲಕರ ಬೆಂಬಲ ಪಡೆದ ಗುತ್ತಿಗೆದಾರರು ಎಲೆ ಸೊಪ್ಪು ವಿತರಿಸುವುದು, ಕಟ್ಟಿಸಿದ ಬೀಡಿಯನ್ನು ಸಂಗ್ರಹಿಸುವುದು ನಡೆದುದು ಮುಷ್ಕರಕಾರರ ಗಮನಕ್ಕೂ ಬಂತು. ಗುತ್ತಿಗೆದಾರರ ಚಟುವಟಿಕೆಗಳ ಬಗ್ಗೆ ಬೀಡಿ ಕಾರ್ಮಿಕರ ನಾಯಕರು ಎಚ್ಚರಿಕೆ ನೀಡಿದರು. ಹೆಚ್ಚು ಕಡಿಮೆ ಎಲ್ಲಾ ವಲಯಗಳಲ್ಲೂ ಒಬ್ಬಬ್ಬರಾದರೂ ಈ ಕಳ್ಳ ಕೃತ್ಯ ಮಾಡದ ಗುತ್ತಿಗೆದಾರರು ಇಲ್ಲದಿರಲಿಲ್ಲ. ಅಂಥ ಕಡೆ ಬೀಡಿ ಸಂಗ್ರಹದ ವಿದ್ಯಮಾನ ತಿಳಿದ ಕೂಡಲೇ ಮುಷ್ಕರಕಾರರ ಸಣ್ಣ ಗುಂಪುಗಳು ಸ್ವಯಂಪ್ರೇರಿತವಾಗಿ ಅಲ್ಲಿಗೆ ತಲುಪಿ ಬೀಡಿ ಸಂಗ್ರಹವನ್ನು ನಿಲ್ಲಿಸಿ, ಗುತ್ತಿಗೆದಾರರು ಕೆಲಸ ನಿರ್ವಹಿಸದಂತೆ ತಡೆ ಒಡ್ಡಿದರು. ಒಂದೆಡೆ ಬೀಡಿ ಸಂಗ್ರಹಿಸುತ್ತಿದ್ದ ಗುತ್ತಿಗೆದಾರನನ್ನು ಪೋಲೀಸರೇ ಎಚ್ಚರಿಸಿದ ಘಟನೆ ಕೂಡಾ ನಡೆದಿದೆ.

ಸರಕಾರದ ಅಧಿಸೂಚನೆ :

ಹೋರಾಟಕ್ಕೆ ಜಯ ಎಪ್ರಿಲ್ 1 ರಿಂದ ಹೆಚ್ಚಿದ ವೇತನವನ್ನು ನೀಡುವುದಾಗಿ ದೊಡ್ಡ ಮಾಲಿಕರು ಮೊದಲೇ ಒಪ್ಪಿಕೊಂಡಿದ್ದರು. ಬಾಕಿ ಇರುವ ವೇತನವನ್ನು ನೀಡುವುದಾಗಿ ತಿಳಿಸಿದ್ದರು. ಚಿಕ್ಕ ಬೀಡಿ ಫ್ಯಾಕ್ಟರಿಗಳ ಮಾಲಕರು ಪ್ರತಿಭಟನೆ ಪ್ರಾರಂಭವಾಗುವ ಮೊದಲೇ ಎಪ್ರಿಲ್ 1 ರಿಂದ ನೀಡಲು ಸಿದ್ಧರಿದ್ದರು. ಆದರೆ ದೊಡ್ಡ ಮಾಲಕರ ಒತ್ತಡದಿಂದಾಗಿ ಪಾವತಿಯನ್ನು ತಡೆಹಿಡಿದಿದ್ದರು.

ರಾಜ್ಯ ಸರ್ಕಾರದ ಪ್ರಕಟಣೆ ಶೀಘ್ರವಾಗುವಂತೆ ರಾಜ್ಯ ಮುಖ್ಯ ಮಂತ್ರಿಗಳಿಗೆ, ಕಾರ್ಮಿಕ ಮಂತ್ರಿಗಳಿಗೆ ಸಂದೇಶವನ್ನು ರಾಜ್ಯ ಬೀಡಿ ಕಾರ್ಮಿಕರ ಫೆಡರೇಶನ್ನಿನ ಅಧ್ಯಕ್ಷ ಬಿ.ಮಾಧವ, ಪ್ರಧಾನ ಕಾರ್ಯದರ್ಶಿ ಸಯ್ಯದ್ ಮುಜೀಬ್, ಸಿಐಟಿಯು ರಾಜ್ಯಾಧ್ಯಕ್ಷರಾದ ವಿ.ಜಿ.ಕೆ.ನಾಯರ್, ಪ್ರಧಾನ ಕಾರ್ಯದರ್ಶಿ ಪ್ರಸನ್ನ ಕುಮಾರ್ ಕಳುಹಿಸಿದ್ದರು. ಅಂತಿಮವಾಗಿ ಜೂನ್ 4ರ ಸೋಮವಾರ ಸರಕಾರ ಕನಿಷ್ಟ ಕೂಲಿ ಪ್ರಕಟಣೆಯನ್ನು ರಾಜ್ಯ ಪತ್ರದಲ್ಲಿ ನೀಡಿರುತ್ತದೆ.

ಬೀಡಿ ಕಾರ್ಮಿಕರ ಸಂಭ್ರಮ

ಸರಕಾರದ ಪ್ರಕಟಣೆಯನ್ನು ಬೀಡಿ ಕಾರ್ಮಿಕರ ಫೆಡರೇಶನ್ನಿನ ಜಿಲ್ಲಾಧ್ಯಕ್ಷ ಬಿ.ಎಂ.ಭಟ್, ಪ್ರಧಾನ ಕಾರ್ಯದರ್ಶಿ ಜೆ.ಬಾಲಕೃಷ್ಣ ಶೆಟ್ಟಿ, ಸಿಐಟಿಯು ದ.ಕ.ಜಿಲ್ಲಾ ಕಾರ್ಯದರ್ಶಿ ವಸಂತ ಆಚಾರಿ ಸ್ವಾಗತಿಸಿದ್ದಾರೆ. ಮುಷ್ಕರವನ್ನು ಸ್ಥಗಿತಗೊಳಿಸುವ ಮುನ್ನ ಮುಷ್ಕರ ನಿರತ ಕೇಂದ್ರಗಳಲ್ಲಿ ಸರಕಾರದ ಪ್ರಕಟಣೆಯ ಬಗ್ಗೆ ನಾಯಕರು ಘೋಷಿಸಿದಾಗ, ಬೀಡಿ ಕಾರ್ಮಿಕರು ಹರ್ಷೋದ್ಗಾರಗಳಿಂದ ಸಂಭ್ರಮಿಸಿದರು.

ಬೆಳ್ತಂಗಡಿಯಲ್ಲಿ ಬೀಡಿ ಕಾರ್ಮಿಕರ ಗೃಹ ನಿರ್ಮಾಣಕ್ಕೆ ಶಿಲಾನ್ಯಾಸ

'ಸಂಗಾತಿ ಎ.ಕೆ.ಜಿ. ಬೀಡಿ ಕಾರ್ಮಿಕರ ಗೃಹ ನಿರ್ಮಾಣ ಸಹಕಾರ ಸಂಘ'ದ ವತಿಯಿಂದ ಬೆಳ್ತಂಗಡಿ ತಾಲೂಕಿನ ನಡ ಗ್ರಾಮದಲ್ಲಿ ಬೀಡಿ ಕಾರ್ಮಿಕರಿಗಾಗಿ ನಿರ್ಮಾಣಗೊಳ್ಳಲಿರುವ 44 ಮನೆಗಳ ಶಿಲಾನ್ಯಾಸವನ್ನು ಮೇ 26 ರಂದು ಕಾಸರಗೋಡಿನ ಸಂಸದ ಪಿ.ಕರುಣಾಕರನ್ ನೆರವೇರಿಸಿಕೊಟ್ಟರು.

ಸಮಾರಂಭದಲ್ಲಿ ಬೀಡಿ ಕಾರ್ಮಿಕರ ಫೆಡರೇಶನ್ನಿನ ರಾಷ್ಟ್ರಧ್ಯಕ್ಷರಾದ ಬಿ.ಮಾಧವ, ಕಾರ್ಮಿಕ ಮುಖಂಡರಾದ ಬಿ.ಎಂ.ಭಟ್, ಎಸ್.ಎಂ.ಶಿವಕುಮಾರ್ ಮತ್ತಿತರರು ಭಾಗವಹಿಸಿದ್ದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಸಂಘದ ಅಧ್ಯಕ್ಷ ಎಸ್.ಎಂ.ಹರಿದಾಸ್, ಪ್ರತಿ ಮನೆಗೆ ಬೀಡಿ ಕಾರ್ಮಿಕರ ಕಲ್ಯಾಣ ನಿಧಿಯಿಂದ 40 ಸಾವಿರ ರೂಪಾಯಿ, ರಾಜೀವ್ ಗಾಂಧಿ ಗೃಹ ನಿರ್ಮಾಣ ಮಂಡಲಿಯಿಂದ 50 ಸಾವಿರ ರೂ.ಲಭಿಸಲಿದ್ದು, ಫಲಾನುಭವಿಗಳು ನೀಡುವ ತಲಾ 10 ಸಾವಿರ ರೂ.ಸೇರಿ ಒಂದುಲಕ್ಷ ರೂ.ವೆಚ್ಚದಲ್ಲಿ ಮನೆ ನಿರ್ಮಾಣವಾಗಲಿದೆ ಎಂದರು.

ಇನ್ನಷ್ಟು ಉದಾರೀಕರಣಕ್ಕೆ ಮತ್ತಷ್ಟು ಪ್ರಯತ್ನಗಳು

ಭಾರತೀಯ ಆರ್ಥಿಕ ಒಂದು ತೀವ್ರ ಇಳಿಗತಿಯನ್ನು ಅನುಭವಿಸುತ್ತಿದೆ ಎಂಬ ಸಂಗತಿಯನ್ನು ಯಾರೂ ಪ್ರಶ್ನಿಸುವುದಿಲ್ಲ. ಬೆಳವಣಿಗೆ ದರ ಒಂದು ದಶಕದಲ್ಲೇ ಅತೀ ಕೆಳಮಟ್ಟಕ್ಕೆ ಇಳಿದಿದೆ. ಹಣದುಬ್ಬರ ಮತ್ತು ಆವಶ್ಯಕ ಸರಕುಗಳ ಬೆಲೆಗಳು ಏರುತ್ತಲೇ ಇವೆ. ಕೈಗಾರಿಕಾ ಉತ್ಪಾದನೆಯ ಸೂಚ್ಯಂಕ, ಅದರಲ್ಲೂ ತಯಾರಿಕೆಯಲ್ಲಿ ಇತ್ತೀಚಿನ ವರ್ಷಗಳಲ್ಲೇ ಅತಿ ಕಡಿಮೆ ಮಟ್ಟ ದಾಖಲಾಗಿದೆ. ಇಂತಹ ಸುಧಾರಣೆಗಳಿಗಾಗಿ ಒತ್ತಾಸೆ ನೀಡುವವರ ಬೆದರು ಬೊಂಬೆಯೆಂದರೆ, ಶೇರು ಮಾರುಕಟ್ಟೆ ಸೂಚ್ಯಂಕ- ಇದು ತನ್ನ ಅತ್ಯುನ್ನತ ಮಟ್ಟದಿಂದ 24ಶೇ.ದಷ್ಟು ಕೆಳಕ್ಕೆ ಬಿದ್ದಿದೆ.

ಇಂತಹ ಸನ್ನಿವೇಶ ಮೊದಲಿನಂತಾಗ ಬೇಕಾದರೆ, ಒಂದು ಆರ್ಥಿಕ ಪುನರುಜ್ಜೀವನಕ್ಕೆ ಬೇರೆ ಪರ್ಯಾಯವೇ ಇಲ್ಲ ಎಂದು ಇಂತಹ ಸುಧಾರಣೆಗಳ ಪರವಾದ ಬಾಡಿಗೆ ಲೇಖಕರು ಹೇಳಿಕೊಳ್ಳುತ್ತಿದ್ದಾರೆ. 'ಟೈಮ್ಸ್ ಆಫ್ ಇಂಡಿಯಾ' ಪತ್ರಿಕೆ 'ಇನ್ನು ಸಮಯ ಉಳಿದಿಲ್ಲ' ಎಂಬ ಶಿರೋನಾಮೆಯ ಸಂಪಾದಕೀಯದಲ್ಲಿ ಇತ್ತೀಚಿನ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ಸಭೆಯ ಚರ್ಚೆಗಳು ಇಂತಹ ಒಂದು ದಾರಿಯ ಅನುಮೋದನೆ ಎಂದು ಬಗೆಯುತ್ತ "ಅದೀಗ ಒಂದು ಎಲ್ಲರನ್ನೂ ಪರವಶಗೊಳಿಸುವ ಸಮೂಹಗಾನವಾಗಿದೆ" ಎಂದಿದೆ.

ಇದೇ ತನಗೆ ಸಂಕೇತವೆಂಬಂತೆ ಸರಕಾರ ಪೆನ್ಶನ್ ನಿಧಿಯನ್ನು ಖಾಸಗೀಕರಿಸುವ ಹಿಂದಿನ ಸಂಪುಟ ಟಿಪ್ಪಣಿಗೆ ಮರುಜೀವ ಕೊಡಲು ನಿರ್ಧರಿಸಿದೆ. ಈ ಪೆನ್ಶನ್ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ(ಪಿಎಫ್‌ಆರ್‌ಡಿಎ)ದ ಶಾಸನವನ್ನು 2004ರಲ್ಲಿ ತರಬೇಕೆಂದಿತ್ತು. ಎಡಪಕ್ಷಗಳ ವಿರೋಧದಿಂದಾಗಿ ಅದು ಒಂದು ಶಾಸನವಾಗಿ ಬೆಳಕು ಕಾಣಲಿಲ್ಲ. ಈಗ 2011ರಲ್ಲಿ ಬಿಜೆಪಿಯ ಸಕ್ರಿಯ ಬೆಂಬಲದಿಂದ ಅದನ್ನು ಸಂಸತ್ತಿನಲ್ಲಿ ಮಂಡಿಸಲಾಗಿದೆ. ಇದಕ್ಕೆ ಎಡಪಕ್ಷಗಳ ವಿರೋಧದ ಆಧಾರವೆಂದರೆ, ವಿದೇಶಿ ಕಾರ್ಪೊರೇಟುಗಳು ಪೆನ್ಶನ್ ನಿಧಿಗಳ ಹಣವನ್ನು ಅಂತರ್ರಾಷ್ಟ್ರೀಯ ಜೂಜುಕೋರ ವ್ಯವಹಾರಗಳಲ್ಲಿ ತೊಡಗಿಸಿ ಕೋಟ್ಯಂತರ ನೌಕರರು ಕಷ್ಟಪಟ್ಟು ಮಾಡಿದ ಉಳಿತಾಯಕ್ಕೆ ಹಾಗೂ ಅವರ ಭವಿಷ್ಯದ ಭದ್ರತೆಗೆ ಸಂಚಕಾರ ತರಬಹುದು ಎಂಬುದು. ನಿಜಕ್ಕೂ ಇಂತಹ ಒಂದು ವಿರೋಧ 2008ರ ಜಾಗತಿಕ ಹಣಕಾಸು ಕುಸಿತದ ಸಂದರ್ಭದಲ್ಲಿ ಭವಿಷ್ಯವಾಣಿಯಂತಾಯಿತು. ಈ ಮಸೂದೆ ಅಂದು ಸಂಸತ್ತಿನಲ್ಲಿ ಪಾಸಾಗಿದ್ದಿದ್ದರೆ ಕೋಟ್ಯಂತರ ಭಾರತೀಯ ನೌಕರರ ಭವಿಷ್ಯ ಧ್ವಂಸಗೊಳ್ಳುತ್ತಿತ್ತು. ಅದೇ ರೀತಿ, ನಮ್ಮ ವಿಮಾವಲಯದಲ್ಲಿ ವಿದೇಶಿ ಭಾಗವಹಿಸುವಿಕೆಯನ್ನು ಹೆಚ್ಚಿಸ ಬಯಸುವ ಮತ್ತು ವಿದೇಶಿ ಬ್ಯಾಂಕುಗಳು ಭಾರತೀಯ ಬ್ಯಾಂಕುಗಳನ್ನು ಕೈವಶ ಮಾಡಿಕೊಳ್ಳುವ ಹಕ್ಕನ್ನು ಕೊಡುವ ಮಸೂದೆಗಳಿಗೆ ಎಡಪಕ್ಷಗಳ ವಿರೋಧ


> **ದೇಶದ ಆರ್ಥಿಕದ ಪುನರುಜ್ಜೀವನಕ್ಕೆ ಹಣಕಾಸು ವಲಯದ ಸುಧಾರಣೆಗಳು ಬಿಟ್ಟರೆ ಬೇರೆ ಪರ್ಯಾಯವೇ ಇಲ್ಲ ಎಂದು ಇಂತಹ ಸುಧಾರಣೆಗಳ ಪರವಾದ ಬಾಡಿಗೆ ಲೇಖಕರ ಆಲಾಪನೆಗಳು ಮತ್ತೆ ಕೇಳಬರುತ್ತಿವೆ. ಅಂತರ್ರಾಷ್ಟ್ರೀಯ ಏಜೆಂಸಿಗಳು ಭಾರತದ ಸಾಲ ಅರ್ಹತೆಯ ಮಟ್ಟವನ್ನು ಇಳಿಸಿರುವುದನ್ನು ಪೂರ್ವ ಸ್ಥಿತಿಗೆ ತರಬೇಕಾದರೆ ಇಂತಹ ಒಂದು ದಾರಿಯನ್ನು ಹಿಡಿಯಬೇಕು ಎಂದು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಭಾರತದ ಮೇಲೆ ಒತ್ತಡ ತರುತ್ತಿದೆ. ಸರಕಾರ ಇದೇ ಸುಸಂದರ್ಭ ಎಂಬಂತೆ ಎಡಪಕ್ಷಗಳು ಯುಪಿಎ-1ರ ಅಧಿಕಾರಾವಧಿಯಲ್ಲಿ ನಿರ್ಮಿಸಿದ, 2008ರ ಜಾಗತಿಕ ಬಿಕ್ಕಟ್ಟಿನ ವಿಧ್ವಂಸದಿಂದ ಭಾರತವನ್ನು ಉಳಿಸಿದ ರಕ್ಷಾಕವಚವನ್ನೇ ಧ್ವಂಸ ಮಾಡ ಹೊರಟಿದೆ.**
>
> **ಮತ್ತೊಮ್ಮೆ ನವ-ಉದಾರವಾದದ ಪಂಡಿತರು ಸರ್ಕಾರವನ್ನು ಹಣಕಾಸು ವಲಯದಲ್ಲಿ ಇನ್ನಷ್ಟು ಉದಾರೀಕರಣದತ್ತ ತಳ್ಳುವ ನವ-ನವೀನ ಪ್ರಯತ್ನ ನಡೆಸಿದ್ದಾರೆ. ಅವರ ಪ್ರಕಾರ, ಭಾರತೀಯ ಆರ್ಥಿಕದ ಈಗಿನ ನಿಧಾನಗತಿಯನ್ನು ಬದಲಿಸಲು ಇದೊಂದೇ ಉತ್ತರ.**

[redacted]

ಭಾರತದ ಆರ್ಥಿಕಕ್ಕೆ ಮತ್ತು ಜನತೆಗೆ ಜಾಗತಿಕ ಆರ್ಥಿಕ ಬಿಕ್ಕಟ್ಟಿನ ವಿಧ್ವಂಸಕಾರಿ ಪರಿಣಾಮಗಳು ಇತರೆಡೆಗಳಂತೆ ತಟ್ಟದಂತೆ ಮಾಡುವಲ್ಲಿ ಕಾಣಿಕೆ ನೀಡಿದೆ.

ರಕ್ಷಾಕವಚಕ್ಕೇ ಏಟು

ಇದು ಈ ಸುಧಾರಣೆಗಳ ವಿರುದ್ಧ ಭಾರತೀಯ ಆರ್ಥಿಕವನ್ನು ರಕ್ಷಿಸಲು ಎಡಪಕ್ಷಗಳು ನಿರ್ಮಿಸಿದ ಕವಚ ಎಂದೇ ಹೇಳಬೇಕು. ಈ ಕವಚವನ್ನೇ ಈಗ ಧ್ವಂಸ ಮಾಡುವ ಪ್ರಯತ್ನ ನಡೆದಿದೆ. ಈ ಪ್ರಕ್ರಿಯೆಯಲ್ಲಿ ಯುಪಿಎ-2 ಸರಕಾರ ಭಾರತದಲ್ಲಿ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಮತ್ತು ಭಾರತೀಯ ಕಾರ್ಪೊರೇಟ್‌ಗಳ ಜೂಜುಕೋರ ಗಳಿಕೆಗಳಿಗೆ ಹೆಚ್ಚಿನ ಮೊತ್ತಗಳನ್ನು ಲಭ್ಯಗೊಳಿಸಿ ಅವರನ್ನು ಸಂತುಷ್ಟಗೊಳಿಸಲು ಯತ್ನಿಸುತ್ತಿದೆ. ಜಾಗತಿಕ ಹಿಂಜರಿತ ಮತ್ತು ಭಾರತದಲ್ಲೂ ಆಂತರಿಕ ಬೇಡಿಕೆಗಳು ಕುಂಠಿತಗೊಂಡಿರುವಾಗ, ಈ ಮೊತ್ತಗಳನ್ನು ಭೌತಿಕ ಉತ್ಪಾದನೆಯ ಮೂಲಕ ಗಳಿಕೆಗಳಿಗೆ ಬಳಸಲಾಗುವುದಿಲ್ಲ ಎಂಬುದು ಸ್ವಯಂವೇದ್ಯ. ಆದ್ದರಿಂದ ಲಾಭಗಳನ್ನು ಗರಿಷ್ಟಗೊಳಿಸಲು ಲಭ್ಯವಿರುವ ಏಕೈಕ ದಾರಿಯೆಂದರೆ ಹೆಚ್ಚೆಚ್ಚು ಸಂಪನ್ಮೂಲಗಳು ಸಟ್ಟಾ ವ್ಯವಹಾರಗಳಿಗೆ ಲಭ್ಯವಾಗುವಂತೆ ಮಾಡುವುದು. ಅಂತರ್ರಾಷ್ಟ್ರೀಯ ಏಜೆಂಸಿಗಳು ಭಾರತದ ಸಾಲ ಅರ್ಹತೆಯ ಮಟ್ಟವನ್ನು ಇಳಿಸಿರುವುದನ್ನು ಪೂರ್ವ ಸ್ಥಿತಿಗೆ ತರಬೇಕಾದರೆ ಇಂತಹ ಒಂದು ದಾರಿಯನ್ನು ಹಿಡಿಯಬೇಕು ಎಂದು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳ ಭಾರತದ ಮೇಲೆ ಒತ್ತಡ ತರುತ್ತಿದೆ..



ಆದ್ದರಿಂದಲೇ ಇಂತಹ ಸುಧಾರಣೆಗಳಿಗೆ ಒತ್ತಡ ಇದರಲ್ಲಿ ದೇಶೀ ವಿಮಾನಯಾನ ಕಂಪನಿಗಳಲ್ಲಿ ವಿದೇಶಿ ಏರ್‌ಲೈನ್‌ಗಳು 49ಶೇ. ಬಂಡವಾಳ ಪಾಲುದಾರಿಕೆ ಪಡೆಯಲು ಪರವಾನಿಗೆ ಕೊಡಬೇಕೆಂಬ ಈ ಹಿಂದೆ ಸ್ವತಃ ಯುಪಿಎ ವಿರೋಧಿಸಿದ ಪ್ರಸ್ತಾವವೂ ಇದೆ. ಇಂತಹ ಒತ್ತಡ ಬಂದಿರುವುದು ದೇಶೀ ವಿಮಾನಯಾನ ವಲಯ ಮುಖ್ಯವಾಗಿ ವೈಮಾನಿಕ ಇಂಧನದ ವಿಪರೀತ ಬೆಲೆಗಳಿಂದಾಗಿ ಆಳವಾದ ಬಿಕ್ಕಟ್ಟಿನಲ್ಲಿರುವಾಗ. ಭಾರತದಲ್ಲಿ ವೈಮಾನಿಕ ಇಂಧನದ ವಿಪರೀತ ಬೆಲೆಗಳಿಗೂ ಸರಕಾರವೇ ಹಾಕಿರುವ ವಿಪರೀತ ತೆರಿಗೆಗಳೇ ಕಾರಣ. ಈ ತೆರಿಗೆಗಳನ್ನು ಇಳಿಸಿ ದೇಶೀ ವಿಮಾನಯಾನ ವಲಯಕ್ಕೆ ಮತ್ತು ಒಟ್ಟಾರೆಯಾಗಿ ಇಡೀ ಆರ್ಥಿಕಕ್ಕೆ ಪರಿಹಾರ ಒದಗಿಸುವ ಮೊದಲು, ಸರಕಾರ ಈಗಲೂ ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆಗಳನ್ನು ತನ್ನ ಆದಾಯಗಳಿಗೆ ಕಾಮಧೇನು ಎಂಬಂತೆ ಬಳಸಿಕೊಳ್ಳುತ್ತಿದೆ. ತೆರಿಗೆಗಳನ್ನು ಇಳಿಸುವ ಬದಲು ಸರಕಾರ ಈಗ ದೇಶೀ ಏರ್‌ಲೈನ್‌ಗಳನ್ನು, ನಮ್ಮ ರಾಷ್ಟ್ರೀಯ ವಿಮಾನಯಾನ ಸಂಸ್ಥೆಯನ್ನು ಕೂಡ ವಿದೇಶಿ ಏರ್‌ಲೈನ್‌ಗಳು ಅನಿವಾರ್ಯವಾಗಿಯೇ ವಶಪಡಿಸಿಕೊಳ್ಳಲು ಪರವಾನಿಗೆ ಕೊಡಲು ಕೂಡ ಸಿದ್ಧವಾಗಿದೆ. ಇವೆಲ್ಲ ಸುಧಾರಣೆಗಳು ಲಾಭಗಳನ್ನು ಗರಿಷ್ಟಗೊಳಿಸಬಹುದು, ಆದರೆ ದೇಶೀಯ ಆರ್ಥಿಕವನ್ನು ವಾಸ್ತವದಲ್ಲಿ ಪುನರುಜ್ಜೀವನಗೊಳಿಸಲು ಏನೇನೂ ನೆರವಾಗದು.

ವಿದೇಶಿ ತಂತ್ರ ಕಾರ್ಯತಂತ್ರ?

ಪುನರುಜ್ಜೀವನದ ಈ ನವ-ಉದಾರವಾದಿ ಪ್ರಯತ್ನಗಳನ್ನು ಜೂನ್ 4ರಂದು ಒಂದು ಪೂರಕ 'ವಿದೇಶಿ ವ್ಯಾಪಾರ ನೀತಿ'ಯ ಪ್ರಕಟಣೆಯಲ್ಲಿ ಕಾಣಬಹುದು. ಭಾರತದ ಮುಗ್ಗರಿಸುತ್ತಿರುವ ರಫ್ತುಗಳನ್ನು ಎಬ್ಬಿಸಿ ನಿಲ್ಲಿಸಲು ಸುಮಾರು 1,200 ಕೋಟಿ ರೂ.ಗಳಿಗೂ ಹೆಚ್ಚಿನ ಮೊತ್ತದ ಹಲವು ಉತ್ತೇಜಕಗಳನ್ನು ಪ್ರಕಟಿಸಲಾಗಿದೆ. 2011-12ರಲ್ಲಿ ಭಾರತದ ರಫ್ತು 21ಶೇ.ದಷ್ಟು ಏರಿ 303.7 ಬಿಲಿಯ ಡಾಲರುಗಳನ್ನು ತಲುಪಿತು. ಆದರೆ ಈ ವರ್ಷ, ರೂಪಾಯಿಯ ಮೌಲ್ಯ ತೀವ್ರವಾಗಿ ಇಳಿದರೂ ರಫ್ತು ಮೊತ್ತದ ಹೆಚ್ಚಳ ಕೇವಲ 3.2 ಶೇ.ಕ್ಕೆ ಮುಗ್ಗರಿಸಿದೆ. ರೂಪಾಯಿಯ ಮೌಲ್ಯ ಇಳಿದಾಗ ನಮ್ಮ ಸರಕುಗಳು ವಿದೇಶಗಳಲ್ಲಿ ಅಗ್ಗವಾಗಿ ಸಾಮಾನ್ಯವಾಗಿ ಅವುಗಳ ಮಾರಾಟ ಹೆಚ್ಚಬೇಕು. ಆದರೆ ಹಾಗಾಗುತ್ತಿಲ್ಲ. ಇದಕ್ಕೆ ಕಾರಣ ಆಳಗೊಳ್ಳುತ್ತಿರುವ ಜಾಗತಿಕ ಆರ್ಥಿಕ ಬಿಕ್ಕಟ್ಟು ಮತ್ತು ಹಿಂಜರಿತವೇ. ಸದ್ಯಕ್ಕಂತೂ ಜಾಗತಿಕ ಆರ್ಥಿಕದ ಪುನರುಜ್ಜೀವನದ ಲಕ್ಷಣಗಳೇನೂ, ಎಲ್ಲಿಯೂ ಕಾಣುತ್ತಿಲ್ಲ. ಆದರೂ ಯುಪಿಎ-2 ಸರಕಾರ ನಮ್ಮ ರಫ್ತುಗಳು ಬೆಳವಣಿಗೆ ತೀವ್ರವಾಗಿ ಕುಸಿದಿದ್ದರೂ ಅವನ್ನು ಹೆಚ್ಚಿಸುವ ಏಳು ಅಂಶಗಳ ಕಾರ್ಯತಂತ್ರವನ್ನು ಅಂಗೀಕರಿಸಿದೆ!

ಭಾರತೀಯ ಆರ್ಥಿಕದ ಪುನರುಜ್ಜೀವನ, ನಾವು ಈ ಅಂಕಣದಲ್ಲಿ ಈ ಹಿಂದೆ ಮತ್ತೆ-ಮತ್ತೆ ವಾದಿಸಿರುವಂತೆ, ನಮ್ಮ ದೇಶದೊಳಗಿನ ಬೇಡಿಕೆಯನ್ನು ದೊಡ್ಡ ಪ್ರಮಾಣದಲ್ಲಿ ವಿಸ್ತರಿಸಿದರೆ ಮಾತ್ರ-ಸಾಧ್ಯ. ಸದ್ಯ ಇದನ್ನು ವಿಸ್ತರಿಸುವ ಬದಲು ನಿರಂತರ ಬೆಲೆಯೇರಿಕೆಗಳು ಮತ್ತು ಆರ್ಥಿಕ ಅಸಮಾನತೆಗಳನ್ನು ತೀಕ್ಷ್ಣವಾಗಿ ಹೆಚ್ಚಿಸುವ ಮೂಲಕ ತೀವ್ರವಾಗಿ ಕುಗ್ಗಿಸಲಾಗುತ್ತಿದೆ. ಇದನ್ನು ನಿಲ್ಲಿಸಿ ಹಿಂದಿನ ಸ್ಥಿತಿಗೆ ತರಬೇಕಾದರೆ, ಅದು ಆವಶ್ಯಕ ಸರಕುಗಳಲ್ಲಿ ಎಲ್ಲ ಜೂಜುಕೋರ ವಹಿವಾಟುಗಳನ್ನು ನಿಷೇಧಿಸುವ ಮೂಲಕ, ಮತ್ತು, ಮುಖ್ಯವಾಗಿ ನಮ್ಮ ಮೂಲರಚನೆಗಳನ್ನು ಕಟ್ಟಲು ಗಮನಾರ್ಹ ಸಾರ್ವಜನಿಕ ಹೂಡಿಕೆಗಳನ್ನು ಮಾಡಿ ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ನಿರ್ಮಿಸಿದರೆ ಮಾತ್ರ ಸಾಧ್ಯ. ಈ ಹಿಂದೆ ಈ ಅಂಕಣದಲ್ಲಿ ವಾದಿಸಿದಂತೆ, ಇಂತಹ ಹೂಡಿಕೆಗಳಿಗೆ ಸಂಪನ್ಮೂಲಗಳ ಕೊರತೆಯೇನೂ ಆಗಲಾರದು. ನಮ್ಮ ಹಣಕಾಸು ಕೊರತೆ ಗಳಿಗಿಂತಲೂ ಹೆಚ್ಚಿನ ಪ್ರಮಾಣದ ಬೃಹತ್ ತೆರಿಗೆ ರಿಯಾಯ್ತಿಗಳನ್ನು ನಿಲ್ಲಿಸಿದರಷ್ಟೇ ಸಾಕು.

ನಮ್ಮ ಆರ್ಥಿಕ ಮೂಲಾಂಶಗಳನ್ನು ಬಲಪಡಿಸಲು ಮತ್ತು ನಮ್ಮ ಜನತೆಗೆ ಒಂದು ಉತ್ತಮ ಬದುಕನ್ನು ಒದಗಿಸಲು, ಸರಕಾರ ತನ್ನ ಸದ್ಯದ ಸುಧಾರಣಾ ದಿಕ್ಪಥವನ್ನು ಬಿಟ್ಟು ಮೇಲೆ ಸೂಚಿಸಿರುವ ದಿಕ್ಪಥವನ್ನು ಅಂಗೀಕರಿಸುವಂತೆ ಜನತೆಯ ಬಲಿಷ್ಠ ಮತ್ತು ಶಕ್ತಿಶಾಲಿ ಒತ್ತಡಗಳನ್ನು ಹಾಕಬೇಕಾಗಿದೆ.

ಬಳ್ಳಾರಿ ಜಿಲ್ಲೆಯ ಕುಡತಿನಿ-ಹರಗಿನಡೋಣಿ-ತಿಮ್ಮಲಾಪುರ-ವೇಣಿವೀರಾಪುರ-ಕೊಳಗಲ್ಲು, ವಡ್ಡು-ಬಸಾಪುರ-ತಾಳೂರು-ಭುವ್ವನಹಳ್ಳಿ-ಗಾದಿಗನೂರು-ಕೊಟ್ಟಿಗನಹಾಳ್, ಬೇವಿನಹಳ್ಳಿ-ಕಕ್ಕಬೇವಿನಹಳ್ಳಿ-ಅಮರಾಪುರ-ಟಿ.ಬೂದಿಹಾಳ್-ಚಾಗನೂರು ಗ್ರಾಮಗಳ ರೈತರನ್ನೊಳಗೊಂಡ ಭೂ-ಸಂತ್ರಸ್ಥರ ಹೋರಾಟ ಸಮಿತಿಯು 06-06-2012 ರಾಜ್ಯದ ಮುಖ್ಯಮಂತ್ರಿಗಳಿಗೆ ಸಲ್ಲಿಸಿರುವ ಹಕ್ಕೊತ್ತಾಯ ಪತ್ರ ಇದು. ರಾಜ್ಯದಲ್ಲಿ ಉಧ್ಯೋಗ ಸೃಷ್ಟಿ ಹಾಗೂ ಅಭಿವೃದ್ಧಿಯ ಹೆಸರಿನಲ್ಲಿ ವಿಶ್ವ ಬಂಡವಾಳಗಾರರ ಸಮಾವೇಶವನ್ನು ಸರ್ಕಾರ ನಡೆಸುತ್ತಿದೆ. ಈ ಹಿಂದೆ ಇದೇ ರೀತಿಯಾಗಿ ಅಭಿವೃದ್ದಿ ಹೆಸರಿನಲ್ಲಿ ಉದ್ಯೋಗ ಸೃಷ್ಟಿಯ ಹೆಸರಿನಲ್ಲಿ ರೈತರಿಂದ ಭೂಮಿ ಕಿತ್ತುಕೊಳ್ಳಲಾದ ಕಡೆ ಈಗ ಏನಾಗಿದೆ. ರೈತರ ಬದುಕು ಏನಾಗಿದೆ. ಈ ವಿವರಗಳು ಇಲ್ಲಿವೆ. ಸರ್ಕಾರ ಇಂಥ ಮಾಹಿತಿಗಳನ್ನು ಮುಚ್ಚಿಡಲು ಬಯಸಿದರೆ, ಇಲ್ಲಿ ಪ್ರಕಟಗೊಂಡಿರುವ ವರದಿಯ ಮೂಲಕ ಸರ್ಕಾರ ಮತ್ತು ಸರ್ಕಾರದ ಧೋರಣೆಗಳು ಬತ್ತಲಾಗಿವೆ. ಓದಿ. ನಿಮಗಾಗಿ. ಸರ್ಕಾರದ ಪೊಳ್ಳು ಭರವಸೆಗಳ ನಿಜವಾದ ಮುಖವನ್ನು ಕಾಣಲು ಬಯಸುವವರಿಗಾಗಿ ಪತ್ರದ ಪೂರ್ಣ ಪಾಠ.

ಬಳ್ಳಾರಿಯಲ್ಲಿ ಬಯಲಾದ ವಿಶ್ವ ಬಂಡವಾಳಿಗರ ಬಣ್ಣ

ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ
ವಿಧಾನಸೌಧ, ಬೆಂಗಳೂರು
ಮಾನ್ಯರೇ,

ವಿಷಯ :ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಕೂಡಲೇ ರದ್ದುಗೊಳಿಸಲು ಮತ್ತು ಭೂ-ಸಂತ್ರಂಸ್ತರ ಹಕ್ಕೊತ್ತಾಯಗಳು.

ಕರ್ನಾಟಕ ರಾಜ್ಯ ಸರ್ಕಾರ ನಾಳಿನ ದಿನದಿಂದ ಬೆಂಗಳೂರಿನಲ್ಲಿ ನಡೆಸಲು ಉದ್ದೇಶಿಸಿರುವ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ ಜನ ವಿರೋಧಿಯಾಗಿದ್ದು , ಕೂಡಲೇ ಅದನ್ನು ರದ್ದು ಗೊಳಿಸಲು ಭೂ ಸಂತ್ರಸ್ಥರ ಹೋರಾಟ ಸಮಿತಿ, ಬಳ್ಳಾರಿ ಜಿಲ್ಲೆ ಒತ್ತಾಯಿಸುತ್ತದೆ.

ಈಗಾಗಲೇ ತಮ್ಮ ಸರ್ಕಾರ ಎರಡು ಇಂತಹ ಸಮಾವೇಶಗಳನ್ನು ಸಂಘಟಿಸಿದೆ. ಅವುಗಳ ಅನುಭವವೆಂದರೇ, ಇಂತಹ ಸಮಾವೇಶಗಳು ಹಾಗು ಅಲ್ಲಿ ಆಗುವ ಒಪ್ಪಂದಗಳಿಂದ ರಾಜ್ಯಕ್ಕೇನು ಪ್ರಯೋಜನವಿಲ್ಲ. ಬದಲಿಗೇ, ಪಾಲ್ಗೊಳ್ಳಲಿರುವ ಬಂಡವಾಳದಾರರಿಗೇ ಭಾರೀ ಪ್ರಯೋಜನವಾಗಿದೆ. ತಾವು ಹೇಳುವಂತೆ, ರಾಜ್ಯ ಅಭಿವೃದ್ದಿಯಾಗುವುದೆಂಬುದು ಮೋಸದ ವಿಚಾರವಾಗಿದೆ. ಇದು ಇಂತಹ ಪ್ರಚಾರಕ್ಕೆ ಮರುಳಾಗಿ ಭೂಮಿ ನೀಡಿ ಮೋಸ ಹೋದ ನಮ್ಮ ಸ್ವಂತ ಅನುಭವವಾಗಿದೆ.

ಮಿಥ್ತಲ್, ಬ್ರಾಹ್ಮಿಣಿ, ಬಿಟಿಪಿಎಸ್, ಜಿಂದಾಲ್, ಬಿಎಸ್ಎಎಲ್, ಬಿಎಂಎಂ ಇಸ್ಪಾಟ್ ಮುಂತಾದ ಕಂಪನಿಗಳಿಗಾಗಿ, ನಮ್ಮಗಳ 18,000 ಕ್ಕೂ ಹೆಚ್ಚು ಜಮೀನನ್ನು ತಾವು ಕೆ ಎ ಐ ಡಿ ಬಿ ಮೂಲಕ ವಶಪಡಿಸಿಕೊಂಡಿರುತ್ತೀರಿ. ಇದರಲ್ಲಿ 15,000 ಎಕರೆ ಪ್ರದೇಶವನ್ನ ಬಲವಂತದಿಂದ ರೈತರ ಒಪ್ಪಿಗೆ ಇಲ್ಲದೇ ಸ್ವಾಧೀನ ಮಾಡಿಕೊಳ್ಳಲಾಗಿದೆ. ರಾಜಕೀಯ ಒತ್ತಡಕ್ಕೆ ಮಣಿದು, ಕಂಪನಿ ಮಾಲೀಕರೊಂದಿಗೆ ಶಾಮೀಲಾಗಿ ತಮ್ಮ ಅಧಿಕಾರಿಗಳು ಇರುವ ಭೂ ಬೆಲೆ ನಿಗಧಿಯ ನಿಯಮಾವಳಿಗಳನ್ನು (ಇವುಗಳನ್ನು ನಾವು ಒಪ್ಪುವುದಿಲ್ಲವಾದರೂ,) ಮುರಿದು, ಅಲ್ಲದೇ ಒಂದೇ ಪ್ರದೇಶದ ಅಥವಾ ಒಂದೇ ಗ್ರಾಮದ ಬೇರೆ ಬೇರೆ ಕಂಪನಿಗಳಿಗಾಗಿನ ಜಮೀನುಗಳಿಗೆ ತಾರತಮ್ಯದ ನೀತಿ ಮಾಡಿ, ಅತ್ಯಂತ ಕಡಿಮೆ ಭೂಬೆಲೆ ನಿಗದಿಸಿ ನಮ್ಮೆಲ್ಲಾ ಗ್ರಾಮಗಳ ಸುಮಾರು 5,000 ಕ್ಕೂ ಅಧಿಕ ಕುಟುಂಬಗಳಿಗೆ ಸುಮಾರು 3,000 ಕೋಟಿಗೂ ಅಧಿಕ ರೂಪಾಯಿಗಳ ನಷ್ಟ ಉಂಟು ಮಾಡಿರುತ್ತಾರೆ, ಈ ಬಗ್ಗೆ ಅನೇಕ ದೂರುಗಳನ್ನು ನಾವು ತಮಗೂ ಸೇರಿ ಸಂಬಂಧಿಸಿದ ಎಲ್ಲಾ ಅಧಿಕಾರಿ-ಮಂತ್ರಿಗಳಿಗೂ ನೀಡಿದ್ದಾಗ್ಯೂ ಇಲ್ಲಿಯವರೆಗೆ ಯಾವುದೇ ಪ್ರಯೋಜನವಿಲ್ಲವಾಗಿದೆ. ಇಂತಹ ಸರ್ಕಾರದ ಅನ್ಯಾಯದ ವಿರುದ್ಧ ಪ್ರತಿಭಟನೆಗಿಳಿದರೆ ಪೋಲೀಸರಿಂದ ಬಂಧನ, ಬೆದರಿಕೆ, ಕೇಸ್‌ಗಳನ್ನು ಎದುರಿಸಬೇಕು.



ಕೈಗಾರಿಕೆಗಳು ಬೆಳೆಯಬೇಕು, ಅದರಿಂದ ನಮ್ಮ ಕುಟುಂಬಗಳಿಗೆ ಉದ್ಯೋಗ ದೊರೆಯುವುದೆಂಬ ತಮ್ಮ ಪ್ರಚಾರಕ್ಕೆ ಮರುಳಾಗಿ, ಆಶೆ ಪಟ್ಟು ಕಡಿಮೆ ಬೆಲೆ ನೀಡಿದರೂ, ಜಮೀನು ನೀಡಿದವರಿಗೆ ಆದ ಕಹಿ ಅನುಭವ ಕೇಳಿ.

ಬಿ ಎಸ್ ಎ ಎಲ್ ಕಂಪನಿ ಜಮೀನು ಪಡೆದು 15 ವರ್ಷಗಳಾದರೂ, ಕಂಪನಿಯನ್ನು ಸ್ಥಾಪಿಸಲಿಲ್ಲ ಮತ್ತು ಉದ್ಯೋಗವನ್ನು ನೀಡಲಿಲ್ಲ. ಬದಲಿಗೇ, ನಮ್ಮ ಜಮೀನುಗಳ ಮೇಲೆ ನೂರಾರು ಕೋಟಿ ಸಾಲ ಎತ್ತಿ, ಕಂಪನಿ ಪೂರ್ಣಗೊಳಿಸಿ ಉತ್ಪಾದನೆಯನ್ನು ಕೈಗೊಳ್ಳದೇ ದಿವಾಳಿ ಎಂದು ಘೋಷಿಸಿಕೊಂಡು ಕಾನೂನು ಬಾಹಿರವಾಗಿ ನಡೆದುಕೊಂಡು ಎಲ್ಲರನ್ನು ವಂಚಿಸಿ, ಈಗ ಬೇರೊಂದು ಕಂಪನಿಗೆ ನಮ್ಮ ಜಮೀನುಗಳು ಹರಾಜಿನಲ್ಲಿ ಮಾರಾಟವಾಗುವಂತಾಗಿದೆ. ಅಲ್ಲಿಂದ ಇಲ್ಲಿಯವರೆಗೆ ಜಮೀನು ನೀಡಿದ ಪ್ರತಿಯೊಂದು ನಮ್ಮ ಕುಟುಂಬಗಳು, ಪ್ರತಿ ವರ್ಷ ಕನಿಷ್ಠ 01 ಲಕ್ಷ ರೂಗಳಂತೆ ಲೆಕ್ಕಹಾಕಿದರೂ, 10 ಲಕ್ಷ ಕ್ಕೂ ಅಧಿಕ ರೂಪಾಯಿಗಳ ಉದ್ಯೋಗ ನಷ್ಟ ಹೊಂದಿದ್ದೇವೆ.

ಇನ್ನು ನಮ್ಮದೇ ಸರ್ಕಾರಿ ಕಂಪನಿ ಕಥೆ ಕೇಳಿ ! ಬಿ ಟಿ ಪಿ ಎಸ್ ಗೆ ಜಮೀನು ನೀಡಿ 12 ವರ್ಷ ಕಳೆದರೂ, ಈಗಲೂ 200 ಕ್ಕೂ ಅಧಿಕ ಕುಟುಂಬಗಳು ಪ್ರತಿ ದಿನ ಕಂಪನಿ ವಿರುದ್ಧ ಚಳುವಳಿ ನಡೆಸುತ್ತಿವೆ. ಉದ್ಯೋಗ ಪಡೆದ 150 ಕುಟುಂಬಗಳು ಹಲವು ವರ್ಷ ಕೇವಲ 100 ರೂ ಗಳಿಗೆ ತರಬೇತಿ ಹೆಸರಿನಲ್ಲಿ ದಿನಗೂಲಿಗಳಂತೆ ದುಡಿದು . ಅವರ ಅನುಕಂಪದ ಮೇರೆಗೆ ಸೇರಿಕೊಂಡಿವೆ. ಈ ತರಬೇತಿ ಪಡೆದು ಉದ್ಯೋಗ ಸೇರಲೂ ಸುಮಾರು 08 ವರ್ಷಗಳ ಕಾಲ ಚಳುವಳಿ ನಡೆಸಬೇಕಾಯಿತು. ಬಲವಂತವಾಗಿ ಸ್ವಾಧೀನಮಾಡುವ ಕೆ ಐ ಎ ಡಿ ಬಿ ಗೇ ಉದ್ಯೋಗ ಕೊಡಿಸುವ ಯಾವುದೇ ಹೊಣೆಗಾರಿಕೆ ಇಲ್ಲ.

ಅದೇ ರೀತಿ, ಕೈಗಾರಿಕೆಗಳಿಗೆ ಎಂತಹ ಜಮೀನನ್ನು ಪಡೆಯಬೇಕು ಎಂಬ ಕುರಿತು ತಮ್ಮ ಸರ್ಕಾರಕ್ಕೆ ಸ್ಪಷ್ಠತೆ ಇಲ್ಲವಾಗಿದೆ. ತಮ್ಮ ತಪ್ಪು ನೀತಿಯಿಂದಾಗಿ, ವಿಮಾನ ನಿಲ್ದಾಣಕ್ಕೆ ಬಲವಂತವಾಗಿ ಸ್ವಾಧೀನ ಪಡಿಸಿಕೊಂಡ ನಮ್ಮ ನೀರಾವರಿ ಜಮೀನುಗಳನ್ನು ಬಿಡಿಸಿಕೊಳ್ಳಲು ನಾವು ಅದೆಷ್ಟು ಚಳುವಳಿ ನಡೆಸಬೇಕಾಗಿ ಬಂತು ? ಮತ್ತು ಅದೆಷ್ಟು ಪೋಲೀಸ್ ದೌರ್ಜನ್ಯ ಹಾಗು ಕೇಸ್‌ಗಳನ್ನು ಎದುರಿಸಬೇಕಾಯಿತು ? ಕೊನೆಗೆ ಕೋರ್ಟ್‌ಗೆ ತೆರಳಿ ನಮ್ಮ ಜಮೀನು ಬಿಡಿಸಿಕೊಳ್ಳಬೇಕಾಯಿತು. ದೌರ್ಜನ್ಯ ಬಿಡಿ, ಇದಕ್ಕೆಲ್ಲಾ ಖರ್ಚಾದ ಲಕ್ಷಾಂತರ ರೂಪಾಯಿಗಳನ್ನು ಕೊಡುವವರಾರು ?.

ಇದೆಲ್ಲವೂ, ಉದ್ಯೋಗ ನೀಡುವ ಉತ್ಪಾದಕ ಬಂಡವಾಳವನ್ನು ಸ್ವಾಗತಿಸುವ ನಮಗೇ ಭ್ರಮನಿರಸನ ಉಂಟುಮಾಡಿವೆ. ಅಭಿವೃದ್ಧಿಯ ಸಮಾನ ಲಾಭದ ನಿರೀಕ್ಷೆಯಲ್ಲಿದ್ದ ನಮ್ಮಗಳಿಗೆ, ಅಂತಹ ಯಾವುದೇ ಲಾಭ ಕೊಡಿಸುವ ಯೋಜನೆ ನಮ್ಮ ಸರ್ಕಾರಕ್ಕಿಲ್ಲವೆಂಬುದು ಸ್ಪಷ್ಟವಾಗುತ್ತಿದೆ ಎಂದು ತಿಳಿಸಲು ವಿಷಾದಿಸುತ್ತೇವೆ.

ಅದೇ ರೀತಿ, ಜಗತ್ತೇ ಆರ್ಥಿಕ ಬಿಕ್ಕಟ್ಟಿಗೆ ಒಳಗಾಗಲು ಕಾರಣವಾದ ಮತ್ತು ಅಲ್ಲಿಯ ಎಲ್ಲಾ ಸರ್ಕಾರಗಳಿಂದ ಭಾರಿ ಆರ್ಥಿಕ ನೆರವು ಪಡೆದು ಜೀವ ಉಳಿಸಿಕೊಂಡ ಮತ್ತು ನೆರವಾದ ಸರ್ಕಾರಗಳು ಭಾರಿ ಸಾಲದ ಬಾಧೆಯಿಂದ ನರಳುವಂತೆ ಮಾಡಿದ ಈ ರೋಗಗ್ರಸ್ಥ ವಿಶ್ವ ಬಂಡವಾಳದ ಮೇಲಿನ ತಮ್ಮ ಸರ್ಕಾರದ ಅಸೀಮವಾದ ವ್ಯಾಮೋಹವೇ ಪ್ರಶ್ನಾರ್ಹವಾಗಿದೆ. ಜಗತ್ತೆಲ್ಲಾ ತಿರು ತಿರುಗಿ ರತ್ನ ಗಂಬಳಿ ಹಾಸಿ, ಸರ್ಕಾರದ ಬೊಕ್ಕಸಕ್ಕೆ ಹಾನಿಮಾಡಿಕೊಂಡು ಭಾರಿ ತೆರಿಗೆ ರಿಯಾಯಿತಿ ನೀಡಿ, ಹತ್ತಾರು ಸಾವಿರ ಕೋಟಿ ರೂ ಬೆಲೆ ಬಾಳುವ ಖನಿಜ ಸಂಪನ್ಮೂಲವನ್ನು ಉಚಿತವಾಗಿ ನೀಡಿ, ಸಾರ್ವಜನಿಕ ಬ್ಯಾಂಕ್‌ಗಳ

ಮೂಲಕ ಹತ್ತಾರು ಸಾವಿರ ಕೋಟಿ ರೂ ಬಡ್ಡಿ ರಹಿತ ಸಾಲ ನೀಡಿ, ಬಡವರು, ದಲಿತರು ಹತ್ತಾರು ವರ್ಷಗಳಿಂದ ಅಭಿವೃದ್ಧಿಪಡಿಸಿದ ಸರ್ಕಾರಿ ಜಮೀನಿಗೆ ಅವರಿಗೆ ಹಕ್ಕು ಪತ್ರ ನೀಡಿ ನೆರವಾಗದೇ ಅವರನ್ನು ಒಕ್ಕಲೆಬ್ಬಿಸಿ ಆ ಜಮೀನುಗಳನ್ನು ಭೂ ಬ್ಯಾಂಕ್‌ಗೆ ಪಡೆದು,ಅದನ್ನು ಇವರಿಗೆ ನೀಡಿ, ಹಾಗು ನಮ್ಮನ್ನೆಲ್ಲಾ ವಂಚಿಸಿ ಅತ್ಯಂತ ಕಡಿಮೆ ಬೆಲೆಗೆ ಜಮೀನನ್ನು ಬಲವಂತವಾಗಿ ಪಡೆದು ಅವರಿಗೆ ನೀಡಿ, ಉದ್ಯೋಗ ದೊರೆಯುವಂತೆ ಮಾಡುವಲ್ಲಿ ಯಾವುದೇ ಜವಾಬ್ದಾರಿ ಹೊರದೇ ನಮಗೆ ವಂಚನೆ ಮಾಡಿ, ಕಡಿಮೆ ಸಂಬಳ ಪಡೆಯುವ ಗುತ್ತಿಗೆ ಕಾರ್ಮಿಕರನ್ನು ನೇಮಿಸಿಕೊಳ್ಳಲು ಅವಕಾಶ ನೀಡಿ, ಅವರು ಬಂಡವಾಳ ತೊಡಗಿಸುವುದು ಅದು ಹೇಗೆ ರಾಜ್ಯದ ಅಭಿವೃದ್ಧಿಯಾದೀತೆಂಬ ಯಕ್ಷ ಪ್ರಶ್ನೆ ನಮ್ಮನ್ನು ಕಾಡುತ್ತಿದೆ.

ಇದು ರಾಜ್ಯದ ಅಭಿವೃದ್ಧಿಯ ಬದಲಿಗೆ ಬರಿಯ ಬಂಡವಾಳ ಹೂಡುವವರ ಅಭಿವೃದ್ಧಿಯಾ ? ಎಂದು ಅನುಮಾನ ಹುಟ್ಟಿಸಿದೆ.



ಇನ್ನೂ, ದೇಶೀಯ ಹಾಗು ಕಾರ್ಮಿಕ ಕಾನೂನುಗಳಿಗೆ ಅವಕಾಶಗಳಿಲ್ಲದ, ಬಹುರಾಷ್ಟ್ರೀಯ ಕಂಪನಿಗಳ ವಸಾಹತು ಪ್ರದೇಶವಾಗಿಸುವ ವಿಶೇಷ ಆರ್ಥಿಕ ವಲಯದ ಬಂಡವಾಳ ಒಪ್ಪುವ ಪ್ರಸಂಗವಿಲ್ಲ, ಅದೇ ರೀತಿ ಹಾಲಿ ಇರುವ ನಮ್ಮ ಕೃಷಿಯೊಳಗೆ ನಮ್ಮ ಹಾಗು ಸಹೋದರರಾದ ಕೂಲಿಕಾರರ ಬದುಕಿಗೆ ಕಂಟಕವಾಗುವ ಕಂಪನಿ ಕೃಷಿ ಬಂಡವಾಳ ಹೂಡಿಕೆ ಬೇಕಾಗಿಲ್ಲ.

ಹೀಗಾಗಿ, ಈ ವಿಶ್ವ ಬಂಡವಾಳ ಹೂಡಿಕೆ ಸಮಾವೇಶ ರಾಜ್ಯದ ಅಭಿವೃದ್ಧಿಗೆ ಅಂದರೇ ರಾಜ್ಯದ ಬಹು ಸಂಖ್ಯಾತರಾದ ರೈತರು, ಕೂಲಿಕಾರರು, ಕಾರ್ಮಿಕರು,ಸಣ್ಣ ವ್ಯಾಪಾರಿಗಳು, ನಾಗರೀಕರ ಅಭಿವೃದ್ಧಿಗೆ ಪೂರಕವಾಗಿಲ್ಲ. ಬದಲಿಗೆ, ಅದು ರಾಜ್ಯದ ಲೂಟಿಬಯಸುವ ಬಂಡವಾಳ ಹೂಡಿಕೆದಾರರ ಪರವಾಗಿದೆ. ಆದ್ದರಿಂದ ಕೂಡಲೇ ಸಮಾವೇಶವನ್ನು ರದ್ದುಪಡಿಸಲು ಹಾಗೂ ಮಿಥ್ಥಲ್, ಬ್ರಾಹ್ಮಿಣಿ, ಜಿಂದಾಲ್, ಮುಂತಾದ ಕಂಪನಿಗಳ ಭೂ ಬೆಲೆ ನಿಗದಿಯಲ್ಲಿ, ಬಿಎಸ್‌ಎಲ್ ಹಾಗು ಬಿಟಿಪಿಎಸ್ ಕಂಪನಿಗಳ ಉದ್ಯೋಗ ನೀಡಿಕೆಯಲ್ಲಿ ಆಗಿರುವ ಅನ್ಯಾಯವನ್ನು ಸರಿಪಡಿಸಿಕೊಡಲು ಮತ್ತು ಸರ್ಕಾರಿ ಜಮೀನು ಸಾಗು ಮಾಡಿದ ರೈತರಿಗೆ ಹಕ್ಕು ಪತ್ರ ನೀಡಲು ಒತ್ತಾಯಿಸುವೆವು.

(ಯು.ಬಸವರಾಜ)
ಜಿಲ್ಲಾ ಸಂಚಾಲಕರು

(ಎಂ.ನಾಗದೇವಪ್ಪ)
ಸಹಸಂಚಾಲಕರು

(ಜಿ.ವೀರನಗೌಡ)
ಸಹಸಂಚಾಲಕರು

(ಬಿ.ಪೋಲಪ್ಪ)
ಸಹಸಂಚಾಲಕರು

(ಬಿ ಎಂ ಬಸವರಾಜ)
ಸಹ ಸಂಚಾಲಕರು

(ಆಲ್ದಳ್ಳಿ ಬಸವರಾಜ)
ಸಹ ಸಂಚಾಲಕರು

(ರುದ್ರಪ್ಪ ಕೆ) (ದೇವೇಂದ್ರಪ್ಪ)
ಸಹ ಸಂಚಾಲಕರು, ಚಾಗನೂರು

(ಆನಂದಪ್ಪ)
ವೇಣಿವೀರಾಪುರ

(ಅಯ್ಯಪ್ಪ)
ವೇಣಿವೀರಾಪುರ

(ಬಸವನಗೌಡ)
ಹರಗಿನಡೋಣಿ

(ಧರ್ಮಣ್ಣ)
ಹರಗಿನಡೋಣಿ

(ನಾಗರಾಜ)
ಹರಗಿನಡೋಣಿ

ಬಿಡುವುದಿಲ್ಲ ರೈತಾಪಿ ಕೃಷಿ ನಾಶಕ್ಕೆ- ಬಿಡುವುದಿಲ್ಲ ಕೃಷಿಯ ಕಂಪನೀಕರಣಕ್ಕೆ

ಜಿಮ್ ಸಮಾವೇಶ ರೈತ- ಕೂಲಿಕಾರರ ಧಿಕ್ಕಾರ

ಅದು ಬೆಂಗಳೂರಿನ ತುಮಕೂರ ರಸ್ತೆಯ ಮಾದಾವರ. ಅಲ್ಲಿ ಕೈಯಲ್ಲಿ ಕೆಂಬಾವುಟ ಹಿಡಿದು ನೂರಾರು ರೈತರು, ಕೂಲಿಕಾರರು ನೆರೆದರು. ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ(ಜಿಮ್)ದ ಉದ್ದೇಶ, ಅದರ ಪ್ರಯೋಜನದ ಬಗೆಗೆ ಸರ್ಕಾರ ಎಷ್ಟೇ ಶಂಖ ಹೊಡೆದು ಕೊಂಡರು ಅಲ್ಲಿ ನೆರೆದವರಿಗೆ ವಿಚಾರ ಏನೆಂಬುದು ಸ್ಪಷ್ಟವಾಗಿತ್ತು. ಕೈಗಾರಿಕೆ, ಉದ್ಯೋಗ ಸೃಷ್ಟಿ, ಅಭಿವೃದ್ಧಿ ಹೆಸರಿನಲ್ಲಿ ತಾವು ನಿಂತ ನೆಲವನ್ನು ನೆಲೆಯನ್ನು ಕಳೆದುಕೊಳ್ಳಬೇಕಾಗುತ್ತದೆ. ಅದಕ್ಕೆ ಸರಿಯಾದ ಪರಿಹಾರವು ಸಿಗುವುದಿಲ್ಲ ಎಂಬ ಇಲ್ಲಿಯುವರೆಗಿನ ಅನುಭವವೂ ಪ್ರತಿಭಟನಾಕಾರರ ಬೆನ್ನಿಗಿತ್ತು. ಬಂದವರು ಬಡ ರೈತರು, ಬಗರ್ ಹುಕುಂ ಸಾಗುವಳಿದಾರರು, ಹೊಲ ಗದ್ದೆಗಳಲ್ಲಿ ಕೂಲಿ ಮಾಡುವ ಕೂಲಿಕಾರರು. ರೈತರಿಗೇ ಭೂಮಿ ಹೋದರೆ, ಅವರಿಗೇ ಸರಿಯಾದ ಪರಿಹಾರ ಇಲ್ಲವಾದರೆ ಇನ್ನು ಕೂಲಿಕಾರರನ್ನು ಕೇಳುವವರು ಯಾರು. ಈ ಬಡಜನ ಸಾರ್ವಜನಿಕ ಬಸ್ಸು, ಆಟೋ, ತಮ್ಮದೇ ಆದ ಬಡ ಸಾರಿಗೆ ವ್ಯವಸ್ಥೆಯಲ್ಲಿ ಅಲ್ಲಿಗೆ ಬಂದರು. ನೂರಾರು ಜನ ನೆರೆದು ಸರ್ಕಾರದ ನೀತಿಯ ವಿರುದ್ಧ ಘೋಷಣೆ ಹಾಕಿದರು.

ಆದರೆ ಅತ್ತ ಐಷಾರಮಿ ಕಾರುಗಳು, ಎ.ಸಿ. ವಾಹನಗಳಲ್ಲಿ ಆಗಮಿಸುತ್ತಿದ್ದ ಬಂಡವಾಳಿಗರು, ಮುಖ್ಯಮಂತ್ರಿ, ಸಚಿವರುಗಳು, ಅಧಿಕಾರಿ ವರ್ಗ. ಬಂಡವಾಳಗಾರರು ತಮ್ಮ ಗಮ್ಮತ್ತಿನಲ್ಲೇ ನೈಸಾದ ರಸ್ತೆಯ ಮೇಲೆ ಸರ್ಕಾರದ ವಿಶೇಷ ಗೌರವದೊಂದಿಗೆ, ಸ್ವಾಗತಿಸಲು ಏರ್ಪಡಿಸಿದ ಕಮಾನು, ಕಟೌಟುಗಳನ್ನು ದಾಟಿ ಮುಖ್ಯ ದ್ವಾರದ ಮೂಲಕ ಸಮಾವೇಶದ ಸ್ಥಳಕ್ಕೆ ಹೋಗುತ್ತಿದ್ದರು.

ರೈತರು, ಕೂಲಿಕಾರರು, ದುಡುಯುವ ಜನ ಬಿಸಿಲಿನಲ್ಲಿ ಘೋಷಣೆ ಕೂಗುತ್ತಿದ್ದರೆ ರೈತರ ಭೂಮಿ ಕಸಿದುಕೊಳ್ಳಲು ಬಂದವರು ಸೊಂಪಾಗಿ, ತಂಪಾಗಿ ಸಾಗುತ್ತಿದ್ದಥು.

ಉಂಡ ಮನೆಯ ಜಂತಿ ಎಣಿಸಿದಂತೆ ಇಂದು ಕರ್ನಾಟಕದ ಬಿಜೆಪಿ ಸರ್ಕಾರ ತನಗೆ ಮತ ಕೊಟ್ಟ ಜನರ ಹಿತವನ್ನು ಮರೆತು ಕರ್ನಾಟಕದ ಪ್ರಾಕೃತಿಕ ಸಂಪನ್ಮೂಲವನ್ನು ಹಾಗು ಕೃಷಿ ಭೂಮಿಯನ್ನು ಕಳೆದ ನಾಲ್ಕು ವರ್ಷಗಳಿಂದ ಕೊಳ್ಳೆ ಹೊಡೆಯುತ್ತಾ ಬಂದಿದೆ. ಕೊಳ್ಳೆ ಹಡೆಯುವವರಿಗೆ ಅವರಕಾಶ ನೀಡಿದೆ. ಅದರ ಜೊತೆಗೆ ಭೂ ಕಬಳಿಕೆಯ ವ್ಯವಸ್ಥಿತಗೊಳಿಸಿಕೊಳ್ಳಲು ಇಂತಹ ಸಮಾವೇಶ. 2010ರ ವಿದೇಶಿ ಬಂಡವಾಳ ಹೂಡಿಕೆದಾರರ ಸಮಾವೇಶವನ್ನು ಮತ್ತು 2011 ರಲ್ಲಿ ವಿಶ್ವ ಕೃಷಿ ಬಂಡವಾಳ ಹೂಡಿಕೆದಾರರ ಸಮಾವೇಶ ನಂತರ ಇಂದು ವಿಶ್ವ ಬಂಡವಾಳ ಹೂಡಿಕೆದಾರರ "ಜಿಮ್" (ಸಂಪತ್ತಿನ ಲೂಟಿ ಮಾಡುವ ಗರಡಿಮನೆ) ಮೂಲಕ ತಮ್ಮ ಸರ್ವಾಂಗಿನ ಅಭಿವೃದ್ಧಿಯನ್ನು ಮಾಡಿಕೊಳ್ಳಲು ಹೊರಟಿದೆ.

ಒಂದು ಕಾಲದಲ್ಲಿ ಗ್ರಾಮಾಂತರ ಪ್ರದೇಶದ ಯುವಕರಿಗೆ ದೈಹಿಕ ಕಸರತ್ತು ಮಾಡಲು,ಕುಸ್ತಿ ಕಲಿಯಲು ದೇಹವನ್ನು ಸದೃಢಗೊಳಿಸಿಕೊಳ್ಳಲು ಗರಡಿಮನೆಗಳಿದ್ದವು. ಈಗ ಪಟ್ಟಣ ಪ್ರದೇಶದಲ್ಲಿ ಯುವ ಜನರು ದೇಹದ ವಿವಿಧ ಅಂಗಗಳ ಬೆಳವಣಿಗೆಯ ಕವಾಯತು ಮಾಡಲು ಜಿಮ್‌ಗಳು ನಡೆಯುತ್ತಿವೆ. ರಾಜ್ಯ ಬಿಜೆಪಿ ಸರ್ಕಾರು ನಡೆಸುವ ಜಿಮ್ ನಡೆಸುವ ಎಂದರೆ ಅದು ಬಂಡವಾಳಗಾರರ ದೇಹವನ್ನು ಸದೃಢಗೊಳಿಸುವ ಉದ್ದೇಶದ ಕಸರತ್ತು. ಸಚಿವ ಮುರುಗೇಶ ನಿರಾಣಿ, ಸದಾನಂದ ಗೌಡರ ನೇತೃತ್ವದ ಲ್ಲಿ ನಡೆಯುತ್ತಿರುವ ಜಿಮ್ ಹಿಂದಿನ ಜಿಮ್‌ಗಳಿಗಿಂತ ಬಹಳವೇನು ಭಿನ್ನವಾಗುವುದು ಸಾಧ್ಯವಿಲ್ಲ.

ಪ್ರತಿಭಟನಾಕಾರರು ಅಲ್ಲಿ ತಮ್ಮ ಪ್ರಜಾಸತ್ತಾತ್ಮಕ ಪ್ರತಿಭಟನೆ ಮಾಡಲು ಸಾಕಷ್ಟು ಮುಂಚಿತವಾಗಿ ಪ್ರತಿಭಟನೆ ಮಾಡಲು ಅನುಮತಿ ಕೋರಿದ್ದರೂ, ಸರ್ಕಾರ ಅನುಮತಿ ನಿರಾಕರಿಸಿತು. ರೈತ ಮುಖಂಡರು ಮಾತನಾಡಲು ಮೈಕು ಹಿಡಿಯುತ್ತಿದ್ದಂತೆ ಪೋಲಿಸರು ಬಂದು ರೈತರು, ಕೂಲಿಕಾರರನ್ನು ಬಂಧಿಸಿದರು.

ರೈತರು ಮಾತನಾಡಿದರೆ ಸತ್ಯ ಹೊರಬರುತ್ತದೆ. ಆ ಸತ್ಯ ಬಂಡವಾಳಗಾರರಿಗೆ ಇರುಸು ಮುರುಸು ಉಂಟು ಮಾಡುತ್ತದೆ. ರೈತರ ಭೂಮಿ ಲಪಟಾಯಿಸುವ ವ್ಯವಹಾರದಲ್ಲಿ ಪಾಲು ಹೊಡೆಯುವ ಅಧಿಕಾರಿ ವರ್ಗ, ಆಧಿಕಾರಸ್ಥ ವರ್ಗಕ್ಕೂ ಇರಿಸು ಮುರಿಸು ಉಂಟು ಮಾಡುತ್ತದೆ. ಅವೆಲ್ಲಾ ಯಾಕೆ ಬೇಕು.

ಸರ್ಕಾರ ಮೈಕು ಕಿತ್ತು ಕಳ್ಳಬಹುದು. ಧಿಕ್ಕಾರದ ಘೋಷಣೆಯನ್ನು ಹತ್ತಿಕ್ಕಲಾಗಲಿಲ್ಲ. ಬಲವಂತದ ಭೂ ಸ್ವಾಧೀನ ಬೇಡವೇ ಬೇಡ, ಫಲವತ್ತಾದ ಕೃಷಿ ಭೂಮಿಯನ್ನು ಕೈಗಾರಿಕೆ ಹೆಸರಿನಲ್ಲಿ ಕಿತ್ತುಕೊಳ್ಳಬೇಡಿ ಎಂದು ಘೋಷಣೆ ಕೂಗಲಾಯಿತು.

ಕಾಂ ಮಾರುತಿ ಮಾನ್ಪಡೆ, ಕಾಂ ಜಿ.ಸಿ. ಬಯ್ಯಾರೆಡ್ಡಿ. ಕಾಂ ಜಿ.ಎನ್. ನಾಗರಾಜ, ಕಾಂ ಚಂದ್ರಪ್ಪ ಹೊಸ್ಕೆರ, ಕಾಂ ವೆಂಕಟಚಲಯ್ಯ, ಕಾಂ ಯು. ಬಸುವರಾಜು ಮುಂತಾದವರು ಹೋರಾಟದ ನೇತೃತ್ವದಲ್ಲಿ ಘೋಷಣೆಗಳನ್ನು ಕೂಗುವದರೊಂದಿಗೆ ಯಶಸ್ವಿಯಾಗಿ ನೆರವೇರಿಸಿದರು ಆದರೆ ಹೋರಾಟಗಾರರ ಯಾವ ಕಾರ್ಯಕ್ರಮಕ್ಕೂ ಅವಕಾಶ ನೀಡಲಿಲ್ಲ ಆದರು ರೈತರು ತುಂಬಾ ಉತ್ಸಹದಿಂದ ಪೋಲಿಸರ ಅಥಿತಿಯಾಗುವ ಭಾಗ್ಯ ದೊರೆಯಿತ್ತು.

ವರದಿ; ಮುರುಘೇಶ.ವೀ, ಕರ್ಕಿಕಟ್ಟಿ



'ಆಹಾರ ಭದ್ರತೆ' ಎಂಬ ಪೊಳ್ಳು ಘೋಷಣೆ....

ಪುಟ 2 ರಿಂದ

ಟನ್‌ಗಳಿಗಿಂತ ಮೀರಿ ಗೋಧಿ ಮತ್ತು ಭತ್ತ ಸಂಗ್ರಹವಾಗುವ ಸಾಧ್ಯತೆ ಇತ್ತು.

ಆಹಾರ ಧಾನ್ಯಗಳ ಬೆಲೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ 'ಮಂಕಾಗಿ'ದ್ದುದರಿಂದ ದೊಡ್ಡ ರೈತರು ಮತ್ತು ವ್ಯಾಪಾರಸ್ಥರು ಆಹಾರಧಾನ್ಯಗಳ ರಫ್ತು ಮೇಲೆ ಹೇರಿದ ನಿರ್ಬಂಧ ತೆಗೆಯಬೇಕೆಂಬ ಲಾಬಿ ಮಾಡದಿದ್ದುದು ಈ ಬಾರಿ ಸಂಗ್ರಹಕ್ಕೆ ಕಾರಣ. ಹೇಗೇ ಆಗಲಿ, ಅಂತಾರಾಷ್ಟ್ರೀಯ ಬೆಲೆ ಏರಿಕೆ ಕುರಿತು ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಘಟನೆಯು ಮುನ್ನೆಚ್ಚರಿಕೆ ನೀಡಿರುವುದರಿಂದ ಈ ಪರಿಸ್ಥಿತಿಯ ಲಾಭ ಪಡೆಯಲು ದೊಡ್ಡ ರೈತರು ಹಾಗೂ ವ್ಯಾಪಾರಸ್ಥರ ಲಾಬಿ ಮತ್ತೆ ಚುರುಕಾಗಿದೆ. ಅವರ ಗುರಿ ಸಂಗ್ರಹಾಗಾರಗಳ ಕೊರತೆಯ ನೆಪವೊಡ್ಡಿ ಇರುವ ಆಹಾರ ಸಂಗ್ರಹವನ್ನು ಖಾಲಿ ಮಾಡಿಸಿ ಹಾಕುವುದಾಗಿದೆ. ಒಂದು ಬಾರಿ ರಫ್ತಿನ ಮೇಲಿರುವ ನಿರ್ಬಂಧಗಳನ್ನು ತೆಗೆದುಹಾಕಿದರೆ ಮಾರುಕಟ್ಟೆ ತಂತ್ರಗಾರರು ಮತ್ತೆ ಪ್ರಾಬಲ್ಯವನ್ನು ಸಾಧಿಸಲು ಅನುಕೂಲವಾಗುತ್ತದೆ.

ಇಂತಹದ್ದೇ ಪರಿಸ್ಥಿತಿ 2002-2003ರಲ್ಲಿ ಉಂಟಾಗಿತ್ತು. ಆ ಸಮಯದಲ್ಲಿ ಆಡಳಿತದಲ್ಲಿದ್ದ ಬಿಜೆಪಿ ನೇತೃತ್ವದ ಸರ್ಕಾರ ಅಕ್ಟೋಬರ್ 2012ರಲ್ಲಿ 156 ಲಕ್ಷ ಟನ್‌ನಷ್ಟು ಭತ್ತವನ್ನು ಕಾಪುದಾಸ್ತಾನಿನ ನಿಗದಿತ ಪ್ರಮಾಣಕ್ಕಿಂತ ಹೆಚ್ಚು ಪ್ರಮಾಣದಲ್ಲಿ ಸಂಗ್ರಹಿಸಿತ್ತು. ಆಗಲೂ ಪ್ರಮುಖವಾಗಿ ಚಳವಳಿ ನಡೆಸಿ ಆಹಾರವನ್ನು ಕೊಳೆಯಲು ಬಿಡದೆ ಜನರಿಗೆ ಹಂಚುವಂತೆ ಒತ್ತಾಯಿಸಲಾಗಿತ್ತು. ಆದರೆ ಪಡಿತರ ಆಹಾರ ವಿತರಣೆ ಪ್ರಮಾಣವನ್ನು ಹೆಚ್ಚಳ ಮಾಡುವುದಕ್ಕೆ ನಿರಾಕರಿಸಿದ ಸರ್ಕಾರ ರಫ್ತು ಮಾಡಲು ಅವಕಾಶ ನೀಡಿತು. ಬಿಜೆಪಿ ಸರ್ಕಾರವು ವ್ಯಾಪಾರಿಗಳಿಗೆ, ಬಿಪಿಎಲ್ ಕಾರ್ಡುಗಳಿಗೆ ನೀಡುತ್ತಿದ್ದ ಆಹಾರಧಾನ್ಯಗಳ ಬೆಲೆಯಲ್ಲಿ ರಫ್ತಿಗೆ ಉತ್ತೇಜನ ನೀಡಿ ಸಂಗ್ರಹವನ್ನು ತೆರವುಗೊಳಿಸಲು ಅವಕಾಶ ಮಾಡಿಕೊಟ್ಟಿತು. ಭಾರತೀಯ ಗ್ರಾಹಕರಿಗೆ ಹಂಚುವ ಬದಲು ರಫ್ತಿಗೆ ಅವಕಾಶ ನೀಡಿ ರಫ್ತುದಾರರು ಬಾರಿ ಲಾಭ ಮಾಡಿಕೊಳ್ಳಲು ಅವಕಾಶ ನೀಡಲಾಯಿತು. ಒಂದು ವರ್ಷದೊಳಗೆ ಕಾಪು ದಾಸ್ತಾನಿನ ನಿಗದಿತ ಮಟ್ಟಕ್ಕಿಂತ ಸಂಗ್ರಹವನ್ನು ಅತ್ಯಂತ ಕೆಳಮಟ್ಟಕ್ಕೆ ತಂದಿತಲ್ಲದೆ ಪ್ರಮುಖವಾಗಿ ಕೊರತೆಯನ್ನು ಸೃಷ್ಟಿಸಿ ತೀವ್ರ ಬೆಲೆ ಏರಿಕೆಗೆ ಅವಕಾಶ ಸೃಷ್ಟಿಸಿ ಕೊಡಲಾಯಿತು.

ಇಂದಿನ ಪ್ರಚಾರದ ಗುರಿ 'ಶೇಖರಣಾ ಜಾಗದ ಕೊರತೆ'. ದೊಡ್ಡ ರೈತರು ಹಾಗೂ ವ್ಯಾಪಾರಸ್ಥರು ಇದೇ ಕಾರಣವನ್ನು ಮುಂದಿಟ್ಟುಕೊಂಡು ಆಹಾರ ಧಾನ್ಯ ರಫ್ತು ಮಾಡಲು ಅವಕಾಶ ಪಡೆಯುವ ಮತ್ತು ಸರ್ಕಾರವು ಕಡಿಮೆ ಆಹಾರ ಧಾನ್ಯ ಸಂಗ್ರಹ ಮಾಡುವಂತೆ ಮಾಡುವ ಗುರಿ ಇರಿಸಿಕೊಂಡಿದ್ದಾರೆ. ದೊಡ್ಡ ವ್ಯಾಪಾರಸ್ಥರು ತಮಗೆ ಅನುಕೂಲಕರ ಪ್ರಮಾಣಕ್ಕೆ ಬೆಲೆ ಏರಿಕೆ ಆಗುವವರೆಗೆ ಆಹಾರ ಧಾನ್ಯಗಳ ಸಂಗ್ರಹವನ್ನು ಕಾದಿಟ್ಟುಕೊಳ್ಳುವ ಶಕ್ತಿ ಹೊಂದಿದ್ದಾರೆ. ಖಂಡಿತವಾಗಿಯೂ ಭವಿಷ್ಯದಲ್ಲಿ ಬೆಲೆ ಹೆಚ್ಚಳ ಮಾಡಲು ಅನುಕೂಲವಾಗುವಂತೆ ಆಹಾರದ ಕೊರತೆ ಸೃಷ್ಟಿಸಲು ಈ ರೀತಿಯಾಗಿ ಪರಿಸ್ಥಿತಿಯನ್ನು ವಿನ್ಯಾಸಗೊಳಿಸಲಾಗಿದೆ.

ಇದೇನೇ ಇದ್ದರೂ ಆಹಾರ ಧಾನ್ಯ ಸಂಗ್ರಹ ಸಾಮರ್ಥ್ಯದ ಸಮಸ್ಯೆಯಿಲ್ಲ ಎಂದು ಇಲ್ಲಿ ಹೇಳಲು ಸಾಧ್ಯವಿಲ್ಲ. ಆದರೆ ಸಂಸತ್ತಿಗೆ ಮತ್ತೆ ಮತ್ತೆ ಭರವಸೆ ನೀಡಿದ ಹೊರತಾಗಿಯೂ ಸರ್ಕಾರ ಗಮನಾರ್ಹ ಪ್ರಮಾಣದಲ್ಲಿ ಸಂಗ್ರಹಾಗಾರಗಳ ಸಾಮರ್ಥ್ಯವನ್ನು ಹೆಚ್ಚಿಸಲು ವಿಫಲವಾಗಿರುವುದು ಒಂದು ರೀತಿಯ ಹಗರಣಕೋರತನ. ಆಹಾರ ಇಲಾಖೆ ಕಾರ್ಯದರ್ಶಿ ಹೇಳುವಂತೆ, ಮುಂದಿನ ಕೆಲವು ತಿಂಗಳಲ್ಲಿ 100 ಲಕ್ಷ ಟನ್ ಆಹಾರ ಧಾನ್ಯಕ್ಕೆ ಸಂಗ್ರಹಾಗಾರಗಳ ಕೊರತೆ ಎದುರಾಗುತ್ತದೆ. ಸರ್ಕಾರದ ನೀತಿ ವಿವಿಧ ಯೋಜನೆಗಳ ಮೂಲಕ ಖಾಸಗಿ ವಲಯಕ್ಕೆ ಸಹಾಯಧನ ನೀಡುವಂತಿದೆ. ಸಂಸತ್ತಿನ ಸ್ಥಾಯಿ ಸಮಿತಿಯು ವಿತರಣೆಯ ಚಿತ್ರಣವನ್ನು ಬಹಿರಂಗಪಡಿಸಿದೆ.

ಅನೈತಿಕ, ಹೇಯ

ಜೂನ್ 2009-ಫೆಬ್ರವರಿ 2012ರ ನಡುವಲ್ಲಿ ಭಾರತ ಆಹಾರ ನಿಗಮದ ಗೋದಾಮುಗಳ ಸಂಗ್ರಹ ಸಾಮರ್ಥ್ಯದಲ್ಲಿ ಕೇವಲ ಒಂದು ಲಕ್ಷ ಟನ್ ಮಾತ್ರ ಹೆಚ್ಚಳವಾಗಿದೆ. 50 ಲಕ್ಷ ಟನ್‌ಗೂ ಅಧಿಕ ಸಾಮರ್ಥ್ಯದ ಗೋದಾಮುಗಳನ್ನು ಖಾಸಗಿಯವರಿಂದ ಭಾರತ ಆಹಾರ ನಿಗಮ ಬಾಡಿಗೆಗೆ ಪಡೆದಿದೆ. ವಿವಿಧ ಯೋಜನೆಗಳ ಮೂಲಕ ಸರ್ಕಾರ ಖಾಸಗಿಯವರಿಗೆ ನೀಡುತ್ತಿರುವ ಸಹಾಯಧನ ಕೂಡ ಶೇಖರಣಾ ಕ್ಷೇತ್ರದಲ್ಲಿನ ಸರ್ಕಾರದ ಪ್ರಮುಖ ಅಂಶ.

ಲಕ್ಷಗಟ್ಟಲೆ ಜನರು ಹಸಿವಿನಿ[illegible] ನರಳುತ್ತಿರುವಾಗ ಮತ್ತೊಂದೆಡೆ ಆಹಾ[illegible] ಧಾನ್ಯಗಳು ಕೊಳೆಯುತ್ತಿರುವುದು ನೈತಿಕ[illegible] ಅತ್ಯಂತ ಹೇಯವಾದುದು. ಆದರೆ ಈ[illegible] ಸಮಸ್ಯೆಯನ್ನು ಪರಿಹರಿಸುವ ಸೂಕ್ತವಾ[illegible] ಮಾರ್ಗವೇನು ಎಂಬುದು ಪ್ರಶ್ನೆ.

ರಫ್ತು ಮಾಡಲು ಅನುಮತಿ ಬೇಕೆನ್ನು[illegible] ಕೆಲವರ ಬೇಡಿಕೆಯನ್ನು ಒಪ್ಪುವುದೋ ಅಥವಾ ತಕ್ಷಣ ಸಾರ್ವಜನಿಕ ವಿತರ[illegible] ಪದ್ಧತಿಯಲ್ಲಿ ವಿತರಿಸುವ ಆಹಾರ ವಸ್ತು[illegible] ಪ್ರಮಾಣದ ಮಿತಿಯನ್ನು ಏರಿಸುವ ಮೂ[illegible] ಪಡಿತರ ಜಾಲದ ವ್ಯಾಪ್ತಿಗೆ ಬರುವವ[illegible] ಸಂಖ್ಯೆಯನ್ನು ಹೆಚ್ಚಿಸಿ ಪಡಿತರ ವಿತರಣಾ ಪದ್ಧತಿಯನ್ನು ಸಾರ್ವತ್ರಿಕಗೊಳಿಸುವ ಮೂಲ[illegible] ಹಸಿವಿನಿಂದ ನರಳುತ್ತಿರುವ ಅಸಂಖ್ಯಾ[illegible] ಕುಟುಂಬಗಳ ನೆರವಿಗೆ ಬರುವುದೋ ?

ಆಹಾರ ಉತ್ಪಾದನೆ, ಸಂಗ್ರಹ, ಅದರ ಕಾ[illegible] ದಾಸ್ತಾನು ಮುಂತಾದ ವಿಷಯಗಳ ಬಗ್[illegible] ನಡೆಯುತ್ತಿರುವ ಚರ್ಚೆ ಆಹಾರ ಭದ್ರತೆ[illegible] ವಿಷಯದಲ್ಲಿ ಒಂದು ಎಚ್ಚರಿಕೆಯ[illegible] ಗಂಟೆಯಾಗಿದೆ. ಇಂದಿನ ಪರಿಸ್ಥಿತಿಯ[illegible] ಸಂಪೂರ್ಣ ದೋಷಯುಕ್ತವಾದ ಆಹಾ[illegible] ಭದ್ರತಾ ಮಸೂದೆಯನ್ನು ಬದಲಿಸಿ ಕನಿ[illegible] 35 ಕೆಜಿ ಆಹಾರ ಧಾನ್ಯಗಳನ್ನು ಕೆ.ಜಿ.ಗೆ [illegible] ರೂ.ಗೆ ಒದಗಿಸುವ ಕಾನೂನಿಗಾ[illegible] ಹೋರಾಟವನ್ನು ತೀವ್ರಗೊಳಿಸದುವುದಾ[illegible] ಆಹಾರ ನೀತಿಯು ಗ್ರಾಹಕ ಹಾ[illegible] ರೈತರಿಬ್ಬರಿಗೂ ಹಿತವಾಗಿರುವಂತಿರಬೇಕು[illegible] ಹಾಗೆ ಮಾಡಲು ಸಾಧ್ಯ ಮಾತ್ರವಲ್ಲ, ಇದ[illegible] ಅತ್ಯಂತ ತುರ್ತು ಹಾಗೂ ಅಗತ್ಯವಾದುದು[illegible]

ಅನುವಾದ: **ಬಾನುಗುಂದಿ ಲಿಂಗರಾಜ[illegible]**

ಜಿಂಕೆ ಹಾವಳಿಯಿಂದ ರೈತರಿಗೆ ಮುಕ್ತಿ ಯಾವಾಗ ?

ಕಳೆದ ವರ್ಷದ ಬರಗಾಲದ ತೀವ್ರ ಸಂಕಷ್ಟದ ದಿನಗಳನ ಕಳೆದು ಈ ವರ್ಷ ಉತ್ತಮ ಫಸಲು ತೆಗೆಯುವ ಕನಸಿನಲ್ಲಿ ಈ ವರ್ಷ ಮಳೆಗಾಲ ಆರಂಭವಾಗಿದೆ ಹಲವಾರು ತಾಪತ್ರಯಗಳ ಮದ್ಯ ರೈತರ ಬಿತ್ತನೆ ಕಾರ್ಯ ಪ್ರಾರಂಭವಾಗಿದೆ ಆದರೆ ಜಮೀನುಗಳಿಗೆ ಜಿಂಕೆಗಳು ಹಿಂಡು ಹಿಂಡಾಗಿ ಲಗ್ಗೆ ಇಟ್ಟು ಬೆಳೆದ ಬೆಳೆಯನ್ನೆಲ್ಲ ತಿಂದು ಹಾಕುತ್ತಿವೆ. ರೈತ ಸಾಲ ಮಾಡಿ ಗೊಬ್ಬರ, ಬೀಜ ತಂದು ಬಿತ್ತನೆ ಮಾಡಿದ್ದಾರೆ ಹುಟ್ಟಿದ ಬೆಳೆಯು ಜಿಂಕೆ ದಾಳಿಯಿಂದ ಪ್ರಾರಂಭದಲ್ಲೆ ನಾಶವಾಗುತ್ತಿವೆ.ಈತ್ತಿಚಿನ ದಿನಗಳಲ್ಲಿ ಈ ಭಾಗದ ಜಿಲ್ಲೆಗಳಾದ ಗದಗ, ಹಾವೇರಿ, ಕೊಪ್ಪಳ, ರಾಯಚೂರ,ಬಾಗಲಕೋಟೆ ಪ್ರದೇಶದ ರೈತರನ್ನು ಜಿಂಕೆಗಳ ಹಾವಳಿ ತೀವ್ರವಾಗಿ ಕಾಡಲಾರಭಿಸಿದೆ.


ಜಿಂಕೆ ಹಾವಳಿ ತಡೆಗಟ್ಟುವ ನಿಟ್ಟಿನಲ್ಲಿ ಶಾಶ್ವತ ಪರಿಹಾರದ ಕ್ರಮ ಕೈಗೊಳಬೇಕು ಹಾಗೂ ದಾಳಿಯಿಂದಾದ ಬೆಳೆ ಹಾನಿಗೆ ಸೂಕ್ತ ಪರಿಹಾರ ನೀಡಬೇಕೆಂದು ಕಳೆದ 10 ವರ್ಷಗಳಿಂದ ರೈತರು ಅರಣ್ಯ ಅಧಿಕಾರಿ,ತಹಶೀಲ್ದಾರ ಹಾಗೂ ಜಿಲ್ಲಾಧಿಕಾರಿಗಳ ಮುಖಾಂತರ ಸರ್ಕಾರಕ್ಕೆ ಬೇಕಾದಷ್ಟು ಬಾರಿ ಮನವಿ ಸಲ್ಲಿಸಿದರೂ ಸರ್ಕಾರ ಇಲ್ಲಿಯವರೆಗೂ ದಾಳಿ ತಡೆಯುವ ಹಾಗೂ ಬೆಳೆ ಹಾನಿಗೆ ಸೂಕ್ತ ಪರಿಹಾರದ ಕ್ರಮ ಕೈಗೊಳ್ಳಲೇ ಇಲ್ಲ. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾಡಳಿತ ಯಾವುದೇ ಕ್ರಮ ಕೈಗೊಳದಿರುವುದು ರೈತರನ್ನು ತೀವ್ರ ಚಿಂತೆಗೆ ಹಾಗೂ ಆಕ್ರೋಶಕ್ಕೆ ಈಡು ಮಾಡಿದೆ.

ನಿರಂತರವಾಗಿ ವನ್ಯಜೀವಿಗಳ ದಾಳಿಗೆ ಮುಂಗಾರು ಮತ್ತು ಹಿಂಗಾರು ಬೆಳೆಹಾನಿಯಿಂದ ಆಕ್ರೋಶಗೊಂಡ ರೈತರು ಜಿಂಕೆಗಳನ್ನು ಚದುರಿಸಲು ಹೋದರೆ ಅದಕ್ಕೆ ಅರಣ್ಯ ಇಲಾಖೆಯರು ಜಿಂಕೆ ಬೇಟೆಯಾಡುತ್ತದಾರೆ ಎಂದು ರೈತರನ್ನು ಜೈಲಿಗೆ ತಳ್ಳುತ್ತಾರೆ ಎನ್ನುವ ಭಯದ ನಡುವೆ ಬದುಕಬೇಕಾಗಿದೆ. ಆದರೆ ರೈತರ ಬೆಳೆ ಪ್ರತಿ ವರ್ಷ ನಾಶವಾಗುತ್ತಿರುವುದನ್ನು ಸರ್ಕಾರ ಗಮನಿಸುತ್ತಿಲ್ಲ ಗದಗ ಜಿಲ್ಲೆ ರೋಣ ತಾಲ್ಲೂಕ ಒಂದರಲ್ಲೆ ಕಳೆದವರ್ಷ 50 ಸಾವಿರ ಎಕರೆ ಪ್ರದೇಶದ ಬೆಳೆಯನ್ನು ಜಿಂಕೆಗಳು ತಿಂದು ಹಾಕಿವೆ. ರೈತರು ಪ್ರತಿಭಟನೆಗಿಳಿದು ವರ್ಷಗಳ ನಂತರ ಎಕರೆಗೆ 300 ರಿಂದ 400 ರೂಗಳ ಪರಿಹಾರ ನೀಡುತ್ತಾರೆ ಬಂದ ಪರಿಹಾರ ವಿತರಿಸುವಲ್ಲಿಯೂ ಕೂಡ ಅಧಿಕಾರಿಗಳು ತೀರ ವಿಳಂಬ ತಾರತಮ್ಯ ಅನುಸರಿಸುತ್ತಾರೆ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಬೆಳೆದ ಬೆಳೆಗೆ ಅರಣ್ಯ ಇಲಾಖೆ ಕೊಡುವ ಚಿಕ್ಕಾಸಿನ ಈ ಪರಿಹಾರ ಯಾತಕ್ಕೂ ಸರಿಹೋಂದುವದಿಲ್ಲ ಎನ್ನುತ್ತಾರೆ ರೈತರು.

ಬರಗಾಲದಿಂದ ಬೆಂದು ಹೋಗಿರುವ ರೈತರನ್ನು ಜಿಂಕೆ ಹಾವಳಿ ತೀವ್ರ ಆತಂಕಕ್ಕೆ ಈಡು ಮಾಡಿದೆ ಸರ್ಕಾರ ಇನ್ನಾದರೂ ಶಾಶ್ವತ ತಡೆಯ ಕ್ರಮ ಹಾಗೂ ಬೆಳೆ ಹಾನಿಗೆ ಸೂಕ್ತ ಪರಿಹಾರ ವಿತರಿಸಲು ಮುಂದಾಗಲೆಂಬುದು ಈ ಭಾಗದ ರೈತರ, ಹಾಗೂ ಪ್ರಗತಿಪರ ಚಿಂತಕರ ಒತ್ತಾಯವಾಗಿದೆ.

- ರವೀಂದ್ರ ಹೊನವಾಡ[illegible]
ಗದಗ[illegible]

"ಜಾತಿ, ದುಡ್ಡು ಬಳಸಿ, ಹಾದಿ ಬೀದಿಯಲ್ಲಿ ಸಿಕ್ಕವರೆನ್ನಲ್ಲಾ ಕರಕೊಂಡು ಸರ್ಕಾರ ಮಾಡಿದ್ವಿ"- ಕೆ.ಎಸ್. ಈಶ್ವರಪ್ಪ



ಆರ್.ರಾಮಕೃಷ್ಣ

ನಾಚ್ಕೆ-ಗೀಚ್ಕೆ ಎಲ್ಲ ಊರಾಚ್ಗೆ !

ಈ ಕೆಳಗೆ ರಾಜ್ಯ ಬಿಜೆಪಿ ಸರ್ಕಾರದ ಚುಕ್ಕಾಣಿ ಹಿಡಿದ ಉನ್ನತ ಜನರು, ಬಿಜೆಪಿ ಪಕ್ಷದ ಚುಕ್ಕಾಣಿ ಹಿಡಿದ ಉನ್ನತ ನಾಯಕರುಗಳ ಅಮೋಘ ಹೇಳಿಕೆಗಳನ್ನು ನೀಡಲಾಗಿದೆ. ದಯಮಾಡಿ ಶಾಂತವಾಗಿ ಓದಿ.

ಅಮೋಘ ಹೇಳಿಕೆ 1: "ಜಾತಿ,ದುಡ್ಡು ಬಳಸಿ ಸರ್ಕಾರ ಮಾಡಿದ್ವಿ"

" ರಾಜ್ಯ ಬಿಜೆಪಿ ಸರ್ಕಾರಕ್ಕೆ ಬಹುಮತ ಕಡಿಮೆ ಆದಾಗ ರಸ್ತೇಲಿ ಹೋಗೋರ್ನೆಲ್ಲಾ ಹಿಡ್ಕೊಂಡು ಬಂದ್ವಿ, ಜಾತಿ ಬಳಸಿ, ದುಡ್ಡು ಕೊಟ್ಟು ಸರ್ಕಾರ ಮಾಡಿದ್ವಿ, ಯಡಿಯೂರಪ್ಪ ಅವರು ಮುಖ್ಯಮಂತ್ರಿಯಾಗಿದ್ದು ಹೀಗೆ..... ಆಪರೇಷನ್ ಕಮಲ ಮಾಡಬೇಡಿ ಅಂತ ಬಹಳ ಜನ ಹೇಳಿದ್ರು, ಬೇರೆ ಏನು ಮಾಡಬೇಕಿತ್ತು ? ಜನಾರ್ಧನ ರೆಡ್ಡಿನೂ ಸೇರಿ ರಸ್ತೇಲಿ ಹೋಗೋರನ್ನೆಲ್ಲಾ ಹಿಡ್ಕೊಂಡು ಬಂದ್ವಿ, ..."

ಅಮೋಘ ಹೇಳಿಕೆ 2: ನಮಗೆ ಹೃದ್ರೋಗವಲ್ಲ, ಕ್ಯಾನ್ಸರ್

" ಕಾಂಗ್ರೆಸ್ ಹಾಗೂ ಜೆಡಿ(ಎಸ್)ನವರು ಸರ್ಕಾರ ಬೀಳುತ್ತದೆ, ಹಾರ್ಟ್ ಅಟ್ಯಾಕ್ ಆಗುತ್ತದೆ. ಸರ್ಕಾರ ಬಿದ್ದು ಹೋಗಿ ಮಧ್ಯಂತರ ಚುನಾವಣೆ ಬರುತ್ತದೆ ಎಂದು ಕಾಯುತ್ತಿದ್ದಾರೆ. ಆದರೆ ಅಂಥಾ ಘಟನೆ ಯಾವುದೂ ನಡೆಯುವುದಿಲ್ಲ. ನಮ್ಗೆ ಕ್ಯಾನ್ಸರ್ ಇರೋದರಿಂದ ನಾವು ಕೆಮ್ಮುತ್ತಾ, ಕೆಮ್ಮುತ್ತಾ ಅವಧಿ ಪೂರೈಸುತ್ತೇವೆ..." – ಕೆ.ಎಸ್. ಈಶ್ವರಪ್ಪ, ಅಧ್ಯಕ್ಷರು, ಬಿಜೆಪಿ, ಕರ್ನಾಟಕ.

ಅಮೋಘ ಹೇಳಿಕೆ 3:

ಮುಖ್ಯಮಂತ್ರಿ ಹುದ್ದೆ ಒಕ್ಕಲಿಗರ ಕೊಡುಗೆ

" ಮುಖ್ಯ ಮಂತ್ರಿ ಹುದ್ದೆ ನನಗೆ ಒಕ್ಕಲಿಗ ಸಮುದಾಯ ಕೊಟ್ಟ ಕೊಡುಗೆ " ಡಿ.ವಿ.ಸದಾನಂದ ಗೌಡ, ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ.

ಅಮೋಘ ಹೇಳಿಕೆ 4: ಸಂದರ್ಭಕ್ಕೆ ತಕ್ಕಂತೆ ಮಾತಾಡುತ್ತಾರೆ ಅಷ್ಟೆ

" ಆಯಾ ಸಂದರ್ಭಕ್ಕೆ ತಕ್ಕಂತೆ ಮಾತನಾಡಿರುತ್ತಾರೆಯೇ ವಿನಃ ಸದಾನಂದ ಗೌಡರು ನೇರವಾಗಿ ಹಾಗೆನ್ನಲು ಸಾಧ್ಯವಿಲ್ಲ." – ವಿಶ್ವೇಶ್ವರ ಹೆಗಡೆ ಕಾಗೇರಿ, ಶಿಕ್ಷಣ ಸಚಿವರು, ಬಿಜೆಪಿ ಸರ್ಕಾರ.

ನಮ್ಮ ಆಳುವ ಜನರ ದುರಹಂಕಾರ, ಜಾತಿವಾದ, ಮತಿಗೇಡಿತನ, ಹೊಣೆಗೇಡಿತನವನ್ನು ನೋಡಿ. ಸರ್ಕಾರದ ಮತ್ತು ಆಳುವ ಪಕ್ಷದ ಚುಕ್ಕಾಣಿ ಹಿಡಿದವರ ನಾಚಿಕೆಗೇಡಿ ಹೇಳಿಕೆಗಳನ್ನು ನೋಡಿ. ದೇಶದ ಸಂವಿಧಾನವನ್ನು ರಕ್ಷಿಸುತ್ತೇವೆ. ಸಂವಿಧಾನಬದ್ಧವಾಗಿ ಕೆಲಸ ಮಾಡುತ್ತೇವೆಂದು ಪ್ರತಿಜ್ಞೆ ಮಾಡುವ ಜನರ ನಿರ್ಲಜ್ಜ ಹೇಳಿಕೆಗಳನ್ನು ನೋಡಿ. ಇದೇ ಜನ ಚುನಾವಣೆಗೆ ಮುಂಚೆ ಆಕಾಶದಿಂದ ಜನರಿಗೆ ಸ್ವರ್ಗವನ್ನು ತಂದು ಇಳಿಸುತ್ತೇವೆಂದು ಹೇಳಿದ್ದನ್ನು ನೆನಪಿಸಿಕೊಳ್ಳಿ. ಏನೋ ತಪ್ಪು ಒಪ್ಪಿಕೊಳ್ಳುವಂತೆ ಮಾತನಾಡುತ್ತಾ ಮತ್ತೆ ಆಪರೇಷನ್ ಕಮಲವನ್ನು ಸಮರ್ಥಿಸಿಕೊಳ್ಳುವ ಈಶ್ವರಪ್ಪನವರ ಚಾಲಾಕಿತನವನ್ನು ನೋಡಿ.

ಇವರ ಪಕ್ಷಕ್ಕೆ ಕ್ಯಾನ್ಸರ್ ತಗುಲಿದೆಯೋ, ಲಕ್ವಾ ಹೊಡೆದಿದೆಯೋ ಅದನ್ನು ಕಟ್ಟಿಕೊಂಡು ಜನರಿಗೆ ಆಗಬೇಕಾದ್ದೇನಿದೆ. ??



ಕೃಪೆ : ಪ್ರಜಾವಾಣಿ

ಬಿಜೆಪಿ ಪಕ್ಷದ ಮತ್ತು ಬಿಜೆಪಿ ಸರ್ಕಾರದ ಹೊಣೆಗೇಡಿತನದಿಂದ ರಾಜ್ಯದ ಜನರ ಬದುಕಿನ ಮೇಲೆ ಎಂತಹ ಘೋರ ಪರಿಣಾಮವಾಗಿದೆ ಎಂಬುದು ಈಗ ಮುಖ್ಯ. ಆ ಬಗ್ಗೆ ಈ ಜನ ಈಗಲೂ ಮಾತನಾಡುತ್ತಿಲ್ಲ. ಮಾತನಾಡುವುದಕ್ಕೆ ತಯಾರಿಲ್ಲ ಎಂದರೆ ಇನ್ನು ಬಾಕಿ ಇರುವ ಸರ್ಕಾರದ ಅವಧಿಯಲ್ಲೂ ಪ್ರವಾಹ ಪರಿಹಾರ, ಬರ ಪರಿಹಾರ, ಭೂ ಹೀನರಿಗೆ ಭೂಮಿ, ರೈತರ ಬೆಳೆಗೆ ನ್ಯಾಯವಾದ ಬೆಲೆ, ಮನೆಯಿಲ್ಲದವರಿಗೆ ಮನೆ, ಅಸಂಘಟಿತ ಕಾರ್ಮಿಕರು, ಕೃಷಿ ಕಾರ್ಮಿಕರು, ದಲಿತರು, ಅಲ್ಪ ಸಂಖ್ಯಾತರು, ಮಹಿಳೆಯರು, ಅಂಗವಿಕಲರು ಮುಂತಾದ ವಿಭಾಗಗಳ ಜನರಿಗೆ ಜೀವನ ಭದ್ರತೆ

ಒದಗಿಸುವುದು ಮುಂತಾದ ಈ ಜನರ ಬದುಕಿನ ಪ್ರಶ್ನೆಗಳು ಇವರ ಅಜೆಂಡಾದಲ್ಲಿ ಇಲ್ಲ. ಈಗ ವಿಧಾನ ಪರಿಷತ್ತಿಗೆ ಪಧವೀಧರರ ಕ್ಷೇತ್ರದಿಂದ ಚುನಾವಣೆ ನಡೆಯುತ್ತಿದೆ. ಈ ಜನ ವಿದ್ಯಾವಂತರು, ತೀರಾ ಭಂಡತನದ ಮತಾಡಿದರೆ ಓಟು ಕೈ ತಪ್ಪ ಬಹುದು ಚುನಾವಣೆ ಹೊತ್ತಿನಲ್ಲಿ ಕೊಂಚ ಸ್ವಯಂ ವಿಮರ್ಶೆಯಂತಹ ಮಾತು ಉದುರಿಸಿ ಜನರನ್ನು ಮರುಳು ಮಾಡೋಣ ಎಂದುಕೊಂಡು ಯೋಜಿಸಿಯೇ. ಈ ಜನ ಹೀಗೆ ಮಾತನಾಡುತ್ತಿರಬಹುದು. ಮತದಾನ ಮುಗಿದ ಮೇಲೆ ಈ ಜನ ಮತ್ತೆ ಹಳೇ ರಾಗವನ್ನೆ ಹಾಡುತ್ತಾರೆ. ಹೇಳಿಕೊಳ್ಳಲು ಸಾಧನೆ ಎಂಬದು ಏನೂ ಇಲ್ಲದೇ ಬರೀ ಜನದ್ರೋಹವೇ ಕಾಯಕವಾದವರು ಮತ್ತು ಮೂರನ್ನೂ ಬಿಟ್ಟು ನಿಂತಿರುವವರು ಇಂಥಾ ಮಾತುಗಳನ್ನಲ್ಲದೇ ಇನ್ನೇನನ್ನು ಹೇಳಲು ತಾನೆ ಸಾಧ್ಯ. ??

ಲಿಂಗಾಯತರ ಹೆಸರು ಹೇಳಿಕೊಂಡು ಜಾತಿವಾದಿ ವಂಚಕ ರಾಜಕಾರಣ ಮಾಡುತ್ತಾ ಜನರನ್ನು ವಂಚಿಸಿ, ಗಣಿ ಲೂಟಿಯ ಹಣ ಬಳಸಿ ಇನ್ನು ಏನೇನೋ ಅನೈತಿಕ ತಂತ್ರಗಾರಿಕೆ ನಡೆಸಿ ಅಧಿಕಾರಕ್ಕೇರಿ ಮಾಡಬಾರದ್ದು ಮಾಡಿ, ಜೈಲಿಗೆ ಹೋಗುವಾಗ ಕುರ್ಚಿ ಬಿಡಬೇಕಾಗಿ ಬಂದ ಸ್ಥಿತಿಯಲ್ಲಿ ಕಾನೂನಿನ ಕುಣಿಕೆಯಿಂದ ತಪ್ಪಿಸಿಕೊಳ್ಳಲು ನಿಂ ನಿಷ್ಠರೊಬ್ಬರನ್ನು ಕುರ್ಚಿಯಲ್ಲಿ ಕೂರಿಸಬೇಕೆಂಬ ಒತ್ತಡದಲ್ಲಿ ಯಡಿಯೂರಪ್ಪನವರ ಪಟಾಲಂ ಸದಾನಂದಗೌಡರನ್ನು ಮುಖ್ಯಮಂತ್ರಿ ಕುರ್ಚಿಯಲ್ಲಿ ಕೂರಿಸಿತು ಎಂಬುದನ್ನು ಇಡೀ ರಾಜ್ಯದ ಜನ ನೋಡಿದ್ದಾರೆ. ಆಗ ಬಿಜೆಪಿ ಪಕ್ಷ ಮತ್ತು ಯಡಿಯೂರಪ್ಪನವರ ಹಿಂಡು ಮಾಡಿದ ಜಾತಿವಾದಿ ತಂತ್ರವನ್ನೇ ಈಗ ಸದಾನಂದಗೌಡರು ತಮ್ಮ ಕುರ್ಚಿ ಉಳಿಸಿಕೊಳ್ಳಲು ಮಾಡುತ್ತಿದ್ದಾರೆ. ನನ್ನ ಕುರ್ಚಿ ಅಲುಗಾಡಿಸಲು ಬರಬೇಡಿ, ನೋಡಿ ನನ್ನ ಹಿಂದೆ ಯಾರಿದ್ದಾರೆ ಎಂಬ ಪರೋಕ್ಷ ಬೆದರಿಕೆಯ ಧ್ವನಿ ಸದಾನಂದಗೌಡರದು. ಅಕ್ರಮ, ಅನ್ಯಾಯಗಳನ್ನು ರಕ್ಷಿಸಲು ಟೊಂಕ ಕಟ್ಟಿ ನಿಂತ ಸರ್ಕಾರವನ್ನು ಉಳಿಸಿಕೊಳ್ಳಲು ಆರೆಸೆಸ್‌ನ ಖಾಕಿ ಚೆಡ್ಡಿ ತೊಟ್ಟುಕೊಂಡು ಈ ಇಬ್ಬರು ನಾಯಕರು " ಹಿಂದುಗಳೆಲ್ಲ ಒಂದು... ಹಿಂದುಗಳೆಲ್ಲ ಬಂಧು" ಎಂದು ಚೀರುತ್ತಾರೆ. .....ವೇದಾಂತ ಹೇಳೋದಕ್ಕೆ.... ಬದನೆಕಾಯಿ...ತಿನ್ನೋದಕ್ಕೆ.......

ಇಂಥಾ ನೀತಿಗೆಟ್ಟ ಜಾತಿ ರಾಜಕಾರಣ, ಒಂದು ಜಾತಿಯನ್ನು ಇನ್ನೊಂದು ಜಾತಿಯ ವಿರುದ್ಧ ಎತ್ತಿಕಟ್ಟುವ ನೀಚತನ ರಾಜ್ಯದ ಭವಿಷ್ಯತ್ತಿಗೆ ಎಂತಹ ಹಾನಿ ಮಾಡಬಲ್ಲುದು ಎಂಬ ಕನಿಷ್ಟ ಪ್ರಜ್ಞೆಯೂ ಈ ಜನಗಳಿಗೆ ಇಲ್ಲ.

ಜನರ ಮುಂದೆ ತಮ್ಮ ತಪ್ಪನ್ನು ಒಪ್ಪಿಕೊಂಡು ತಮ್ಮ ತಪ್ಪು ತಿದ್ದಿಕೊಳ್ಳುವ ಇರಾದೆ ಈ ಜನರಿಗೆ ಇದ್ದದ್ದೇ ಆದರೆ ಇವರು ನಿಜಕ್ಕೂ ಏನು ಮಾಡಬೇಕು ? ಉದಾಹರಣೆಗಾಗಿ ಒಂದು ಸೂಚನೆ: ರಾಜ್ಯದ ಅಗಾಧ ಗಣಿ ಸಂಪತ್ತನ್ನು ಲೆಕ್ಕವಿಲ್ಲದೇ ದೋಚಿ ದೋಚಿ ಹಾಕಿರುವ ಕ್ರಿಮಿನಲ್‌ಗಳನ್ನು ರಕ್ಷಿಸುವ ಕೆಲಸವನ್ನು ಕೈ ಬಿಟ್ಟು ಅವರಿಗೆ ಶಿಕ್ಷೆಯಾಗಲು ಮತ್ತು ಲೂಟಿಯಾದ ಸಂಪತ್ತನ್ನು ವಾಪಸ್ ಕಿತ್ತುಕೊಳ್ಳಲು ಸಾಧ್ಯವಾಗುವಂತೆ ಯಾಕೆ ಕ್ರಮ ವಹಿಸಲು ಪೂರಕವಾಗಿ ಖಾಲಿ ಬಿದ್ದಿರುವ ಲೋಕಾಯುಕ್ತ, ಉಪ ಲೋಕಾಯುಕ್ತ ಹುದ್ದೆಗಳಿಗೆ ದಕ್ಷ, ಪ್ರಾಮಾಣಿಕ ಅಧಿಕಾರಿಗಳನ್ನು ನೇಮಕ ಮಾಡುವುದು. ಸರ್ಕಾರ ಈ ಬಗ್ಗೆ ವಿರೋಧ ಪಕ್ಷಗಳ ಮಾತನ್ನು ಕೇಳುವುದು ಬೇಡ. ನಿಸ್ವಾರ್ಥಿ ಸ್ವಾತಂತ್ರ್ಯ ಹೋರಾಟಗಾರರ ಮಾತನ್ನಾದರೂ ಸರ್ಕಾರ ಯಾಕೆ ಗಂಭೀರವಾಗಿ ತೆಗೆದುಕೊಳ್ಳಬಾರದು.

" ಲೋಕಾಯುಕ್ತರ ನೇಮಕ ವಿಚಾರವನ್ನೇ ಮರೆತಿರುವ ರಾಜ್ಯ ಸರ್ಕಾರ ಆ ಮೂಲಕ ರಾಜ್ಯದ ಜನತೆಗೆ ಅನ್ಯಾಯ ಮಾಡುತ್ತಿದೆ." ಅಂತ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾದ ಎಚ್. ಎಸ್. ದೊರೆಸ್ವಾಮಿ ಇತ್ತೀಚಿಗೆ ನೊಂದು ನುಡಿದ್ದಾರೆ. ಆ ಮಾತಿಗಾದರೂ ಸರ್ಕಾರದಲ್ಲಿ ಬೆಲೆ ಇದೆಯೇ ? ಖಂಡಿತ ಇಲ್ಲಾ. ಈ ಬಗ್ಗೆ ಯಾವ ಅನುಮಾನವೂ ಇಲ್ಲ. ಏಕೆಂದರೆ ರಾಜ್ಯ ಬಿಜೆಪಿ ಸರ್ಕಾರದ ನೈತಿಕತೆಯ ಮಟ್ಟ ಅಷ್ಟು 'ಎತ್ತರ'ದಲ್ಲಿದೆ.

ಪೆಟ್ರೋಲ್ ಬೆಲೆ ಏರಿಕೆ ಮುಂದುವರೆದ ಅನ್ಯಾಯ

ಕೇಂದ್ರ ಸರ್ಕಾರ ಅತ್ಯಂತ ನಿರ್ದಯವಾಗಿ ಪೆಟ್ರೋಲ್ ಬೆಲೆ ಏರಿಸಿದ್ದು, ದೇಶದಾದ್ಯಂತ ಜನರು ತೀವ್ರವಾಗಿ ಪ್ರತಿಭಟಿಸಿದ್ದು, ಒತ್ತಡಕ್ಕೆ ತಲೆಬಾಗಿ ಸ್ವಲ್ಪ ಮಾತ್ರ ಬೆಲೆ ಕಡಿಮೆ ಮಾಡಿದ್ದು ಅದೆಲ್ಲಾ ಈಗಾಗಲೇ ಎಲ್ಲರಿಗೂ ಗೊತ್ತಿರುವ ವಿಚಾರ.

ಬೆಲೆ ಏರಿಕೆ ವಿರುದ್ಧ ಎಡಪಕ್ಷಗಳು ತೀವ್ರ ಪ್ರತಿಭಟನೆ ನಡೆಸಿದವು. ರಾಜ್ಯದಲ್ಲಿ ಬಿಜೆಪಿಯೂ ಪ್ರತಿಭಟನೆಯನ್ನು ನಡೆಸಿತು. ರಾಜ್ಯ ಬಿಜೆಪಿ ಸಚಿವರು, ಮುಖ್ಯಮಂತ್ರಿಗಳು ಬೆಲೆ ಏರಿಕೆ ಖಂಡಿಸಿ ಸೈಕಲ್ ತುಳಿದು ಸುದ್ದಿ ಮಾಡಿದರು.

ಆದರೆ ಪೆಟ್ರೋಲ್ ಏರಿಕೆ ಸಂಬಂಧದ ಜನರ ಒಂದು ಬೇಡಿಕೆ ಬಗೆಗೆ ರಾಜ್ಯ ಸರ್ಕಾರ ತುಟಿಪಿಟಿಕ್ ಎನ್ನಲಿಲ್ಲ. ಪ್ರತಿ ಲೀಟರ್ ಪೆಟ್ರೋಲ್ ಮೇಲೆ ರಾಜ್ಯ ಸರ್ಕಾರ ವಿಧಿಸುತ್ತಿರುವ ತೆರಿಗೆ ಎಷ್ಟು ? 16.80 ರೂಪಾಯಿ. ಅಬ್ಬಾ !! ಕರ್ನಾಟಕ ರಾಜ್ಯದಲ್ಲಿ

ನರಕ ನೋಡಿ ಬಂದಾಕೆ ಬಿಕ್ಕುತ್ತಾಳೆ

ಗುಜರಾತ್‌ಗೆ ಕರ್ನಾಟಕದ ಮಹಿಳೆಯರ ಮಾರಾಟದ ಜಾಲ

ನೀಲಾ ಕೆ

ಅವಳ ಕಣ್ಣಲ್ಲಿ ವಿಚಿತ್ರವಾದ ಭಯ ತಲ್ಲಣ ಮನೆ ಮಾಡಿತ್ತು. ಅವಳು ಗುಜರಾತಿನ ರಾಜಕೋಟಿಗೆ ಹೋಗಿದ್ದಾಗಿನಿಂದ ಮೊದಲುಗೊಂಡು ಬಹಳಷ್ಟು ಸಂಗತಿಗಳನ್ನು ನಿರಂತರವಾಗಿ ಹೇಳುತ್ತಲೇ ಇದ್ದಳು. ಹೇಳುತ್ತ ಹೇಳುತ್ತ ಹಗುರವಾಗುತ್ತಿದ್ದಳು. ಮತ್ತು ಕೊನೆಗೆ ತನ್ನೆರಡೂ ಕೈಗಳನ್ನು ಜೋಡಿಸಿ



ಗದ್ಗದಿತಳಾಗಿ ಕರುಳು ಕಿತ್ತು ಬರುವಂಥ ವೇದನೆಯಲ್ಲಿ ಹೇಳಿದಳು, 'ಅಕ್ಕಾ ನನಗೆ ಗಂಡ ಬ್ಯಾಡ. ಮದುವಿ ಬ್ಯಾಡ. ಏನೋ ಒಂದು ಗಳಿಗೆಯಲ್ಲಿ ನನ್ನದೂ ಅಂತ ಒಂದು ಸಂಸಾರ ಇರಲಿ. ತಮ್ಮನಿಗೆ ಭಾರ ಆಗೋದು ಬ್ಯಾಡ ಅಂತ ಶಾರದಮ್ಮ ಹೇಳಿದ ಮಾತು ಕೇಳಿಕೊಂಡು ಗುಜರಾತಿಗೆ ಹೋಗಲು ಒಪ್ಪಿಕೊಂಡೆ. ಮರುಜನ್ಮಾಯಿತು ನಂಗೆ. ನರಕ ನೋಡಿ ಬಂದೆ......' ಎಂದು ಹೇಳಿ ಬಿಕ್ಕತೊಡಗಿದಳು.

ಗಿರಿಜಾಳ ಈ ಅವಸ್ಥೆಯು ಕಲ್ಲು ಕರಗುವ ಸಮಯವಾಗಿತ್ತದು. ಗಿರಿಜಾ ಪಾರ್ಶ್ವವಾಯುವಿನಿಂದ ನರಳುತ್ತಿರುವ ತಂದೆಯ ಸೇವೆ ಮಾಡುತ್ತ ತನ್ನ ಪಾಡಿಗೆ ಬದುಕುತ್ತಿದ್ದಳು. ಯಾರಿಗೂ ಕೈ ಚಾಚಬಾರದು ಎಂದು ಕೂಲಿ ಮಾಡಿ ಜೀವನ ಸಾಗಿಸುತ್ತಿದ್ದಳು. ಅದೊಂದು ದಿನ ಶಾರದಮ್ಮ ಎಂಬ ಮಹಿಳೆಯು ಇವಳ ಅತ್ತಿಗೆಯೊಂದಿಗೆ ಬಂದು ಗುಜರಾತಿನಿಂದ ಒಳ್ಳೆಯ ಅನುಕೂಲಸ್ಥ ಗಂಡು ಬಂದಿದ್ದಾನೆ. ಅವನಿಗೆ ನೋಡು. ನಿನಗೆ ಇಷ್ಟ ಇದ್ದರೆ ಮದುವೆ ಮಾಡುತ್ತೇವೆ ಎಂದಳಂತೆ. ಇವಳಿಗೆ ಹುಂ ಅನ್ನಿಸಿತು. ಪರಸ್ಪರ ಫೋಟೊ ನೋಡಿದರು. ಮರುದಿನವೇ ಅತ್ತಿಗೆ ತಮ್ಮ ಮತ್ತು ಶಾರದಮ್ಮನೊಂದಿಗೆ ಗುಜರಾತಿಗೆ ಮದುವೆಗೆಂದು ಹೊರಟೇ ಬಿಟ್ಟರು. ಉಳಿದೆಲ್ಲ ವ್ಯವಹಾರ ಶಾರದಮ್ಮ ಮತ್ತು ಗುಜರಾತು-ಕರ್ನಾಟಕದ ನಡುವಿಗೆ ಮದುವೆ ಮಾಡಿಸುವ ಏಜೆಂಟನಾಗಿರುವ ಅಜೀಜ ಎಂಬುವವರ ನಡುವೆ ನಡೆಯಿತಂತೆ. ಇವರೆಲ್ಲ ರಾಜಕೋಟಿಗೆ ಹೋದ ಮೇಲೆ ಅಲ್ಲಿ ಗಂಡಿನ ಕಡೆಯವರ ನಡಾವಳಿಕೆ ಭಯಾನಕವಾಗಿ ಕಂಡುಬಂದು, ಗಿರಿಜಾಳ ತಮ್ಮನಿಗೆ ಅನುಮಾನ ಬಂದು 'ಈ ಮದುವಿ ಬ್ಯಾಡ. ಇದರಲ್ಲೇನೋ ವೆ[illegible] ಇದೆ. ನಡಿ ನ[illegible]ಗೆ ಹೋಗಾಣ' ಎಂದು ಎದ್ದು ಬಂದನಂತೆ. ತಮ್ಮನೊಂದಿಗೆ ಗಿರಿಜಾ ಸಹ ಎದ್ದಳು. ಇದರಿಂದ ವ್ಯವಹಾರಕ್ಕೆ ಧಕ್ಕೆ ಬಂದಂತಾಯಿತೇನೋ ಗಂಡಿನ ಕಡೆಯವರು ಇವರನ್ನು ಬೆದರಿಸತೊಡಗಿದರಂತೆ. ಇದರಿಂದ ಮತ್ತಷ್ಟೂ ಭಯಗೊಂಡ ಇವರು ಅಲ್ಲಿಂದ ಹೊರಬಂದು ಪಲಾಯನ ಮಾಡಿದರಂತೆ. ಇವರನ್ನು ಹುಡುಕುತ ಕನಿಷ್ಠ ಹದಿನೈದು ಜನ ಗೂಂಡಾಗಳಂಥವರು ಅಹಮದನಗರದವರೆಗೂ ಬೆಂಬತ್ತಿದ್ದರು ಎಂದು ಗಿರಿಜಾಳ ಹೇಳಿಕೆ. ಏನೂ ಅರಿಯದ ಅಕ್ಕ ತಮ್ಮ ಒಂದು ವಾರಗಟ್ಟಲೆ ಕಂಡ ಊರಲ್ಲಿ ಮುಚ್ಚಿಕೊಳ್ಳುತ, ಕರುಣೆಯಿಟ್ಟು ಯಾರೋ ಕೊಟ್ಟಿದ್ದನ್ನು ತಿನ್ನುತ್ತ, ಕಳ್ಳರೆಂದು ಒಂದು ಹಳ್ಳಿಯಲ್ಲಿ ಅನುಮಾನಿಸಿ ಮಾರಣಾಂತಿಕ ಹಲ್ಲೆಯಿಂದ ಸತ್ತು ಬದುಕುತ್ತ ಕಡೆಗೂ ಗುಲಬರ್ಗಾ ಸೇರಿರುವಳು. ಅವಳ ತಮ್ಮ ಮಾರ್ಗ ಮಧ್ಯದಲ್ಲಿ ತಪ್ಪಿಸಿಕೊಂಡು ಈಗ ಅರೆಹುಚ್ಚನಂತಾಗಿರುವನು.

ಇವರ ಕತೆ ಕೇಳುತ ಕೇಳುತ ನಮಗೆ ನಾನಾ ನಮೂನೆಯ ಅನುಮಾನಗಳು ಕಾಡತೊಡಗಿದವು. ಮೂರ್ನಾಲ್ಕು ವರ್ಷದ ಹಿಂದೆ ಬೆಳಗಾಂವಿಯಿಂದ ಗೆಳತಿ ಸ್ವರ್ಣ ಅಲ್ಲಿನ ಗುಜ್ಜರ್ ಕಿ ಶಾದಿ ಯ ಹಾವಳಿ ಕುರಿತು ಹೇಳಿದ್ದು ನೆನಪಾಯಿತು. ಗುಜರಾತಿನಲ್ಲಿ ಹೆಣ್ಣುಮಕ್ಕಳ ಸಂಖ್ಯೆ ಕಡಿಮೆ ಮತ್ತು ಅಲ್ಲಿ ಕತ್ತೆಯಂತೆ ದುಡಿಯಲು ಹೆಣ್ಣಾಳು ಬೇಕೆಂದು ಬೆಳಗಾಂವಿಯ ಸುತ್ತ ಮುತ್ತಲಿನ ಬಡ ಮತ್ತು ಹಿಂದುಳಿದ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಂಡು ಹೋಗುವರು. ಮದುವೆಯ ಎಲ್ಲ ಖರ್ಚು ಅವರದೇ. ಮತ್ತು ಹೆಣ್ಣು ಹೆತ್ತವರಿಗೆ ಹಣ ಕೊಟ್ಟು ಮಗಳನ್ನು ಮದುವೆಯಾಗಿ ಹೋಗುವರು. ಈ ಇಡೀ ಪ್ರಕ್ರಿಯೆ ಎರಡು ಅಥವ ಮೂರು ದಿನದಲ್ಲಿ ಮುಗಿಯುವುದು. ಮತ್ತು ಇಂಥ ಅಧ್ಭುತ ಮದುವೆಗೆ ಗುಜರಾತಿನಿಂದ ಮೂರು ಅಥವ ನಾಲ್ಕು ಜನ ಗಂಡಸರು ಬರುವರು. ಹೆಣ್ಣು ಹೆತ್ತವರು ಮಗಳ ಮದುವೆ ಮಾಡಿ ಒಂದಿಷ್ಟು ಹಣವೂ ಕೈಗೆ ಸೇರಿ ನಿರುಮ್ಮಳಾಗುವರು. ಇದೊಂದು ಮದುವೆ ಹೆಸರಿನಲ್ಲಿ ನಡೆಯುವ ಹೆಣ್ಣುಗಳ ಮಾರಾಟ. ಇದನ್ನು ಹೇಗಾದರೂ ತಡೆಗಟ್ಟಬೇಕು ಎಂದು ಎಷ್ಟೇ ಸಂಘರ್ಷ ಮಾಡಿದರೂ ಸ್ಥಳೀಯ ಪೊಲೀಸರು ಸಹ ಸಹಕರಿಸುವುದಿಲ್ಲ. ಒಬ್ಬ ಬಡ ಹೆಣ್ಣುಮಗಳ ಮದುವೆ ವರದಕ್ಷಿಣೆ ಇಲ್ಲದೆ ಆಗುವಾಗ ಅದಕ್ಕೆ ನೀವ್ಯಾಕೆ ಅಡ್ಡಿ ಬರುವುದು? ಎಂದು ಪ್ರಶ್ನಿಸುವರು. ಮತ್ತು ಹೆತ್ತವರು ಸಹ ಇದು ತಮ್ಮ ಕುಟುಂಬಕ್ಕೆ ಸಂಬಂಧಪಟ್ಟ ಖಾಸಗಿ ವಿಷಯ. ತಮ್ಮ ಮಗಳಿಗೆ ತಾವು



ಹೇಗಾದರೂ ಎಲ್ಲಾದರೂ ಯಾರಿಗಾದರೂ ಮದುವೆ ಮಾಡಿಕೊಡುವ ಹಕ್ಕು ತಮಗೆ. ನಿಮ್ಯಾಕೆ ಉಸಾಬರಿ ಎನ್ನುವಂತಿರುವರು. ಇದು ಆಗ ಸ್ವರ್ಣ ನನಗೆ ಹೇಳಿದ ಕತೆ. ಈಗಲೂ ಅಲ್ಲಿನ ಗುಜ್ಜರಿ ಕೀ ಶ್ಯಾದಿ ನಿಂತಿಲ್ಲ. ಬದಲಿಗೆ ಧಾರವಾಡ, ಹುಬ್ಬಳ್ಳಿವರೆಗೂ ವ್ಯಾಪಿಸಿದೆ. ಮಾತ್ರವಲ್ಲ ಈಗ ಗುಲಬರ್ಗಾ ದಾಟಿ ಬೀದರಿಗೂ ಕಾಲಿಟ್ಟಿದೆ.

ನಿನ್ನೆ ಸಾಯಂಕಾಲ ಮುಸ್ಲಿಂ ಕಾಲೋನಿಯೊಂದರಿಂದ ಫೋನು ಬಂದಿತು. ಹೋಗಿ ನೋಡಿದರೆ ಗುಜರಾತಿನ ಜಾಮನಗರಿಗೆ ಎರಡು ವರ್ಷದ ಹಿಂದೆ ಮದುವೆಯಾಗಿ ಹೋದ ಮುಸ್ಲಿಂ ಹೆಣ್ಣುಮಗಳೊಬ್ಬಳು ಆರು ತಿಂಗಳ ಕೂಸನ್ನು ಉಡಿಯಲ್ಲಿಟ್ಟುಕೊಂಡು ವಾಪಾಸ್ಸಾಗಿರುವಳು. ಇಂಥ ಅನೇಕ ಪ್ರಕರಣಗಳು ಇಂದು ಮುಂಜಾನೆವರೆಗೂ ವರದಿಯಾಗತೊಡಗಿವೆ.

ಇಲ್ಲಿಯವರೆಗೆ ಸಾವಿರಾರು ಹೆಣ್ಣುಮಕ್ಕಳು ಹೀಗೆ ಗುಜರಾತಿಗೆ ಮದುವೆಯಾಗಿ ಹೋಗಿರುವರು. ಮದುವೆಯಾಗಿ? ಇಲ್ಲ ಅದೊಂದು ಅಪ್ಪಟ ವ್ಯವಹಾರ ಎನ್ನುವುದು ಪ್ರಕರಣಗಳನ್ನು ಅರಿಯುತ ಹೋದಂತೆ ಖಂಡಿತ ಅರಿವಿಗೆ ಬರುತ್ತದೆ. ಕಾಣೆಯಾಗುತ್ತಿರುವವರ ಪಟ್ಟಿಯಲ್ಲಿ ಇರುವ ಹೆಸರುಗಳಿವು. ಮದುವೆಗಳು ನೋಂದಣಿಯಾಗುವುದಿಲ್ಲ. ಅಲ್ಲಿ ಹೆಣ್ಣುಮಕ್ಕಳು ಹೇಗಿರುವರು ಗೊತ್ತಿಲ್ಲ. ಇದೆಂಥ ಪರಿಸ್ಥಿತಿ ಒದಗಿ ಬಂದಿದೆ ನೋಡಿ. ಕಾರ್ಲ್ ಮಾರ್ಕ್ಸ ಹೇಳಿದ ಮಾತೊಂದು ಥಟ್ಟನೆ ನೆನಪಾಯಿತು. 'ಬಂಡವಾಳ ಅಸಮಾನತೆ ಒಂದೇ ಕಡೆ ಶೇಖರಣೆಯು ಸಮಾಜದಲ್ಲಿ ಎಲ್ಲ ರೀತಿಯ ಮಾನವೀಯ ಮೌಲ್ಯಗಳನ್ನು ನಾಶ ಮಾಡುತ್ತದೆ. ಮತ್ತು ಎಲ್ಲ ಸಂಬಂಧಗಳೂ ಸರಕಾಗುತ್ತವೆ.' ಈ ಪ್ರಕರಣಗಳು ಏನನ್ನು ಧ್ವನಿಸುತ್ತವೆ? ಹೆಣ್ಣುಮಕ್ಕಳನ್ನು ಸರಕಾಗಿಸಿದವು. ವಸ್ತುಗಳಂತೆ ಸ್ವತ ಹೆತ್ತವರೇ ಮಾರಿಕೊಳ್ಳಲು ಸಿದ್ಧರಾಗಿರುವರು. ಕೊಳ್ಳುವವರು ಹಣದ ಥೈಲಿ ಹಿಡಿದು ಎಲ್ಲೆಡೆ ಸಂಚರಿಸುತ್ತಿರುವರು. ಹೊಟ್ಟೆಯಲ್ಲಿ ಭ್ರೂಣವಾಗಿದ್ದಾಗಲೂ ಹೆಣ್ಣೆಂದು ಕೊಂದರು. ಹುಟ್ಟಿ ಬೆಳೆದ ಮೇಲೆಯೂ ಹಣಕ್ಕೆ ಖರಿದಿಸುವರು. ಮತ್ತು ವಸ್ತುವಿನಂತೆ ಬಳಸುವರು. ಹಳತಾದಾಗ ಸವೆದಾಗ ಬಿಸಾಡುವರು. ಗುಜರಾತಿನಲ್ಲಿ ಹೆಣ್ಣುಮಕ್ಕಳ ಸಂಖ್ಯೆಯ ಕಡಿಮೆಯೇ ಇಂಥ ಮದುವೆಗಳಿಗೆ ಕಾರಣ ಎಂದು ಮಹಿಳಾ ಮಕ್ಕಳ ಕಲ್ಯಾಣ ಇಲಾಖೆಯ ನಿರ್ದೇಶಕರಾದ ರತ್ನಾ ಹೇಳುವರು. ಲಿಂಗ ಅಸಮಾನತೆಯ ನಾಡಿನ ಅಭಿವೃದ್ಧಿಯು ನೈಜ ಅಭಿವೃದ್ಧಿಯಾಗಿರುವುದೇ?

ಇದೇ ಜಾಗತೀಕರಣದ ಕಾರಣವಾಗಿ ಕೊಳ್ಳುಬಾಕತನ ಮತ್ತು ಬೇಕೆಂಬ ಲಾಲಸೆ

ಪುಟ 15 ಕ್ಕೆ

ಪೆಟ್ರೋಲ್ ದರ : ಏರಿಕೆಯಲ್ಲಿ ಕಾಲು ಭಾಗ ಇಳಿಕೆ

ಇಬ್ಬರು ಮಂತ್ರಿಗಳ 'ತರಾಟೆ', ತೈಲ ಕಂಪನಿಗಳ 'ಅಸಮಾಧಾನ'ದ ನಾಟಕ



ವೇದರಾಜ ಎನ್.ಕೆ.

ಪೆಟ್ರೋಲ್ ದರಗಳಲ್ಲಿ ತೀವ್ರ ಏರಿಕೆಯ ವಿರುದ್ಧ ದೇಶಾದ್ಯಂತ ಭಾರೀ ಪ್ರತಿಭಟನೆ ಕಂಡು ಬಂದ ಹಿನ್ನೆಲೆಯಲ್ಲಿ 8ರೂ.ಗಳ ಏರಿಕೆಯಲ್ಲಿ 2 ರೂ.ಇಳಿಕೆ ಮಾಡಲಾಗಿದೆ. ಆದರೆ ಈಗಲೂ 6ರೂ.ಗಳ ಏರಿಕೆ ಉಳಿದಿದೆ. ಆದರೆ, ಈ ಏರಿಕೆಯೆಂಬುದೇ ಮಹಾಮೋಸವಾದ್ದರಿಂದ ಇದನ್ನು ಸಂಪೂರ್ಣವಾಗಿ ಹಿಂತೆಗೆದು ಕೊಳ್ಳಬೇಕು, ಇದಕ್ಕಾಗಿ ಹೋರಾಟ ಮುಂದುವರಿಯುತ್ತದೆ ಎಂದು ಸಿಪಿಐ(ಎಂ) ಹಾಗೂ ಇತರ ಎಡಪಕ್ಷಗಳು ಮತ್ತು ಇತರರೂ ಹೇಳಿದ್ದಾರೆ.

ಈ ಬಾರಿ ಇಂತಹ ಏರಿಕೆಗಳಿಗೆ 'ಪ್ರತಿಭಟನೆ'ಯ ನಾಟಕವಾಡುವ ಯುಪಿಎ ಮಿತ್ರಪಕ್ಷಗಳಲ್ಲದೆ, ಸ್ವತಃ ಕಾಂಗ್ರೆಸಿನ ಎರಡು ಮಂತ್ರಿಗಳೂ ವಿರೋಧ ವ್ಯಕ್ತಪಡಿಸಿದ್ದು ಒಂದು ವಿಶೇಷ. ಪೆಟ್ರೋಲಿಯಂ ಮಂತ್ರಿಗಳು ಈ ದರ ಏರಿಕೆಯನ್ನು 'ಬಲವಾಗಿ' ಸಮರ್ಥಿಸಿಕೊಳ್ಳುತ್ತಿರುವಾಗಲೇ ಅವರ ಸಹಯೋಗಿ, ಕೇಂದ್ರ ರಕ್ಷಣಾ ಮಂತ್ರಿಗಳು, ಇದು ಸರಿಯಾದ ಕ್ರಮ ಅಲ್ಲ, ತೈಲ ಕಂಪನಿಗಳು ಇಂತಹ ನಿರ್ಧಾರ ಕೈಗೊಳ್ಳುವ ಮೊದಲು ಅದರ ಔಚಿತ್ಯತೆಯ ಬಗ್ಗೆ ಯೋಚಿಸಬೇಕಾಗಿತ್ತು ಎಂದು ಟೀಕಿಸಿದರು.

ಮರುದಿನ ಅವರ ಇನ್ನೊಬ್ಬ ಸಹಯೋಗಿ, ಸಾಗರೋತ್ತರ ಭಾರತೀಯ ವ್ಯವಹಾರಗಳ ಮಂತ್ರಿಗಳು ಪೆಟ್ರೋಲಿಯಂ ಮಂತ್ರಿಗಳಿಗೆ ಪತ್ರ ಬರೆದು ಇನ್ನು ಮುಂದೆ ಯಾವುದೇ ಏರಿಕೆ ಮಾಡುವ ಮೊದಲು ಈ ಪ್ರಶ್ನೆಯ 'ನಿಕಟ ಪರಿಶೀಲನೆ' ಮಾಡುವಂತೆ ಸಲಹೆ ಮಾಡಿದ್ದಾರೆ. ಅವರು ರಕ್ಷಣಾ ಮಂತ್ರಿಗಳಿಗಿಂತಲೂ ಸ್ವಲ್ಪ ನೇರವಾಗಿಯೇ ಮಾತನಾಡುತ್ತಾ ತೈಲ ಕಂಪನಿಗಳು ನಷ್ಟದಲ್ಲಿವೆ ಎಂಬ ದಾವೆಯ ಬಗ್ಗೆಯೇ ಸಂದೇಹ ವ್ಯಕ್ತಪಡಿಸಿದ್ದಾರೆ. ಈ ತೈಲಕಂಪನಿಗಳು ಮಾಡುವ ಖರ್ಚುಗಳು ಮತ್ತು ತೆರುವ ಸಂಬಳಗಳು ದೇಶದಲ್ಲಿಯೇ ಅತೀ ಹೆಚ್ಚು, ಅಲ್ಲಿ ನಿಧಿಗಳನ್ನು ಪೋಲು ಮಾಡಲಾಗುತ್ತಿದೆ ಎಂಬ ಭಾವನೆಯಿದೆ ಎಂದು ತಮ್ಮ ಪತ್ರದಲ್ಲಿ ಹೇಳಿರುವ ಈ ಮಂತ್ರಿಗಳು ಇತ್ತೀಚಿನ ಏರಿಕೆಯನ್ನು ತಗ್ಗಿಸುವ ಒಂದು ಧೈರ್ಯದ ಯೋಚನೆ ಮಾಡಬೇಕು ಎಂದಿದ್ದರು.

ಪೆಟ್ರೋಲಿಯಂ ಮಂತ್ರಿಗಳು ಮುಕ್ಕಾಲು ಭಾಗ ಏರಿಕೆಯನ್ನು ಉಳಿಸಿಕೊಂಡು ಕಾಲು ಭಾಗವನ್ನು ಇಳಿಸುವ 'ಧೈರ್ಯ' ತೋರಿದಂತೆ ಕಾಣುತ್ತಿದೆ. ಆದರೆ ಈ 'ಧೈರ್ಯ'ದಲ್ಲಿ ಭಾಗಿಯಾದ ತೈಲ ಕಂಪನಿಗಳ ಮುಖ್ಯಸ್ಥರುಗಳು ಒಂದು ಜಂಟಿ ಹೇಳಿಕೆಯನ್ನು ನೀಡುವ ಮೂಲಕ ಸ್ವತಃ ಮಂತ್ರಿಗಳ ಸಂದೇಹದ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು, ಮತ್ತೆ 'ನಷ್ಟ'ದ ರಾಗ ಜಪಿಸಿದರು. ತಮ್ಮ ಕಂಪನಿಗಳು ಲಾಭ ತೋರಿಸಲು ಸಾಧ್ಯವಾಗಿದ್ದರೆ ಅದು ಕೇಂದ್ರ ಸರಕಾರದಿಂದ 83,500 ಕೋಟಿ ರೂ.ಗಳ 'ಸಬ್ಸಿಡಿ' ಮತ್ತು ಒಎನ್‌ಜಿಸಿ ಮುಂತಾದ ಇಂಧನ ಉತ್ಪಾದನಾ ಕಂಪನಿಗಳ 55,000 ಕೋಟಿ ರೂ.ಗಳ ಅನುದಾನಗಳಿಂದ ಮಾತ್ರ ಎಂದಿದ್ದಾರೆ. 'ತೈಲ ಕಂಪನಿಗಳು ಒಂದು ದೀರ್ಘ ಸಮಯದವರೆಗೆ ಪೆಟ್ರೋಲ್ ಬೆಲೆ ಏರಿಸಲು ಅಸಮರ್ಥ(?)ವಾಗಿದ್ದರಿಂದ ಪೆಟ್ರೋಲಿನ ಬೆಲೆಯಲ್ಲಿ ಸರಿಪಡಿಕೆ ಅತ್ಯಂತ ಅನಿವಾರ್ಯವಾಗಿತ್ತು' ಎಂದು 8 ರೂ.ಗಳಷ್ಟು



ಏರಿಕೆಯನ್ನು ಮತ್ತೊಮ್ಮೆ ಸಮರ್ಥಿಸಿಕೊಂಡ ಈ ತೈಲ ಕಂಪನಿಗಳ ಮುಖ್ಯಸ್ಥರು, ಬಳಕೆದಾರರು ಮತ್ತು ಟೀಕಾಕಾರರು(ಯುಪಿಎ ಮಂತ್ರಿಗಳೂ ಸೇರಿದಂತೆ?) ದೇಶ ಎದುರಿಸುತ್ತಿರುವ ಸನ್ನಿವೇಶವನ್ನು ಅರ್ಥಮಾಡಿಕೊಳ್ಳಬೇಕು ಎಂದು 'ವಿನಂತಿಸಿ'ಕೊಂಡಿದ್ದಾರೆ. ಆದರೆ ಯುಪಿಎ-2 ಸರಕಾರ ಈ 'ಸಬ್ಸಿಡಿ'ಯನ್ನು ಎಲ್ಲಿಂದ ಕೊಟ್ಟಿತು ಎಂದು ಈ ಮುಖ್ಯಸ್ಥರುಗಳು ಹೇಳಿಲ್ಲ. ನಮ್ಮ ಕಳೆದ ಸಂಚಿಕೆಯಲ್ಲಿ ('ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯದ ಅನುವಾದ)ಗಮನಿಸಿರುವಂತೆ, ಪೆಟ್ರೋಲಿಯಂ ಉತ್ಪನ್ನಗಳ ಮೇಲೆ ತೆರಿಗೆಗಳು ಮತ್ತು ಸುಂಕಗಳು ಕೇಂದ್ರ ಸರಕಾರಕ್ಕೆ 2010-11ರಲ್ಲಿ ರೂ.1,36,497 ಕೋಟಿ ರೂ.ಗಳ ಆದಾಯವನ್ನು ತಂದಿವೆ ಎಂದು ಸಂಸದೀಯ ಸ್ಥಾಯೀ ಸಮಿತಿಯ ವರದಿ ತೋರಿಸುತ್ತಿದೆ.

ಆದರೆ ಈ ಮುಖ್ಯಸ್ಥರ ಹೇಳಿಕೆಯಂತೆಯೇ ಅದು ತೈಲ ಕಂಪನಿಗಳಿಗೆ ನೀಡಿದ 'ಸಬ್ಸಿಡಿ' 83,500 ಕೋಟಿ ಮಾತ್ರ. ಹಾಗಿದ್ದರೆ ನಿಜವಾಗಿಯೂ 'ಸಬ್ಸಿಡಿ'ಗಿಂತಲೂ 50,000 ಕೋಟಿ ರೂ.ಗಳಷ್ಟು ಹೆಚ್ಚು ತೆತ್ತವರೇ ಮತ್ತೆ ಬೆಲೆಯೇರಿಕೆಗಳ ಮೂಲಕ ತೆರಬೇಕೇ? ಬಹುಶಃ ಇದನ್ನೇ ಯುಪಿಎ ರಕ್ಷಣಾ ಮಂತ್ರಿಗಳು 'ಔಚಿತ್ಯತೆ' ಎನ್ನುವ ಧೈರ್ಯ ತೋರಿರಬಹುದೇ?

ಹಾಗಿರಲಿಕ್ಕಿಲ್ಲ, ಏಕೆಂದರೆ ಈ ಇಬ್ಬರೂ ಮಂತ್ರಿಗಳು ತೈಲ ಕಂಪನಿಗಳ ಮುಖ್ಯಸ್ಥರ ಅಸಮಾಧಾನದ ಹೇಳಿಕೆಗೆ ಪ್ರತಿಕ್ರಿಯಿಸಿಲ್ಲ. ವಾಸ್ತವವಾಗಿ, ಈ ತೈಲ ಕಂಪನಿಗಳು ಮಾತಾಡುವುದು ನಿಜವಾದ 'ನಷ್ಟ'ದ ಬಗ್ಗೆಯೇ ಅಲ್ಲ, ಬದಲಿಗೆ 'ಅಂಡರ್ ರಿಕವರಿ' ಅಂದರೆ 'ನಷ್ಟ ಪರಿಹಾರದ ಕೊರತೆ'ಯ ಬಗ್ಗೆಯೇ, ಅಂದರೆ ಪೆಟ್ರೋಲಿಯಂ ಉತ್ಪನ್ನಗಳ ಚಿಲ್ಲರೆ ಬೆಲೆಗಳು ಮತ್ತು ತಾವು ತೆರದ ಅವುಗಳ ಆಮದು ಬೆಲೆಗಳ ನಡುವಿನ ಕಾಲ್ಪನಿಕ ವ್ಯತ್ಯಾಸದ ಬಗ್ಗೆಯೇ ಅವುಗಳ ಕೊರಗು.

ಸಹಜವಾಗಿಯೇ ಈ ಇಬ್ಬರೂ ಯುಪಿಎ-2 ಮಂತ್ರಿಗಳು ಈ ಅಂಶವನ್ನು ಪ್ರಸ್ತಾಪಿಸಿಲ್ಲ. ಅಲ್ಲದೆ ರಕ್ಷಣಾ ಮಂತ್ರಿಗಳು ತೈಲಕಂಪನಿಗಳ ನಿರ್ಧಾರದ ಔಚಿತ್ಯತೆಯನ್ನು ಪ್ರಶ್ನಿಸಿದ್ದು ತಮ್ಮ ರಾಜ್ಯ ಕೇರಳದಲ್ಲಿ ಒಂದು ಉಪಚುನಾವಣೆಯ ಪ್ರಚಾರದ ವೇಳೆ ಎಂಬುದನ್ನು ಗಮನಿಸಬೇಕು. 'ಪ್ರತಿಭಟಿಸಿದ' ಇನ್ನೊಬ್ಬ ಮಂತ್ರಿಯೂ ಇದೇ ರಾಜ್ಯದವರು. ಇದೀಗ ಜನಸಾಮಾನ್ಯರ ಬಗ್ಗೆ ಕಾಳಜಿಯ ಯುಪಿಎ-2 ಮಾದರಿ!

ವಿದೇಶಿ ಶಿಕ್ಷಣದ ಅಂಗಡಿಗಳಿಗೆ ಹಿಂಬಾಗಿಲ ಸ್ವಾಗತದ ಪ್ರಯತ್ನ

ಅಮೆರಿಕನ್ ದೊರೆಗಳನ್ನು ಸಂತುಷ್ಟಗೊಳಿಸಲು ಯುಪಿಎ-2 ಪ್ರಭೃತಿಗಳು ಸಂಸತ್ತನ್ನು ಬದಿಗೊತ್ತಲೂ ಹಿಂಜರಿಯುವುದಿಲ್ಲ ಎಂಬುದು ಈ ವಾರ ಮತ್ತೊಮ್ಮೆ ಸಾಬೀತಾಗಿದೆ. ಉನ್ನತ ಶಿಕ್ಷಣದ ಮೇಲೆ ನವ-ಉದಾರವಾದೀ ದಾಳಿಯ ಭಾಗವಾಗಿ ವಿದೇಶಿ ಶೈಕ್ಷಣಿಕ ಸಂಸ್ಥೆಗಳಿಗೆ, ಅದರಲ್ಲೂ ಅಮೆರಿಕನ್ ಶೈಕ್ಷಣಿಕ ಸಂಸ್ಥೆಗಳಿಗೆ ಭಾರತದಲ್ಲಿ ಪ್ರವೇಶ ಕೊಡಲು ತುದಿಗಾಲ ಮೇಲೆ ನಿಂತಿರುವ ಯುಪಿಎ-2 ಸರಕಾರದ ಆಸೆಗೆ ಭಾರತದ ಸಂಸತ್ತು ಸದ್ಯಕ್ಕೆ ತಣ್ಣೀರೆರಚಿದೆ. ಸರಕಾರ ಸಂಸತ್ತಿನಲ್ಲಿ ಮಂಡಿಸಿದ ಈ ಕುರಿತ ಮಸೂದೆಗೆ ಬಹಳ ವಿರೋಧ ಬಂದಿದ್ದು ಅದನ್ನು ಈಗ ಸಂಸದೀಯ ಸ್ಥಾಯೀ ಸಮಿತಿಗೆ ಒಪ್ಪಿಸಲಾಗಿದೆ. ಸ್ಥಾಯೀ ಸಮಿತಿ ಈ ಮಸೂದೆ ಕುರಿತಂತೆ ಹಲವು ಶಿಫಾರಸುಗಳನ್ನು ಮಾಡಿದೆ. ಅದು ಸರಕಾರದ ಪರಿಶೀಲನೆಯಲ್ಲಿ ಇದೆಯಂತೆ.

ಈ ನಡುವೆ ಅಮೆರಿಕನ್ ಆಳರಸರಿಗೆ 'ಉತ್ತರ ಕೊಡಬೇಕಾದ' ಪರಿಸ್ಥಿತಿಯನ್ನು ತಂದು ಕೊಂಡಿರುವ ಯುಪಿಎ-2 ಸರಕಾರ ಪೇಚಿಗೊಳಗಾಗಿದೆ. ಈ ತಿಂಗಳಲ್ಲಿ ಯುಪಿಎ-2 ಸರಕಾರದ ಮಾನವ ಸಂಪನ್ಮೂಲ ಮಂತ್ರಿಗಳು ವಾಶಿಂಗ್ಟನ್‌ಗೆ ಭೇಟಿ ನೀಡಲಿದ್ದಾರೆ. ಭಾರತ-ಅಮೆರಿಕಾ ಸಿಇಒ ಗಳ ವೇದಿಕೆಯಲ್ಲಿ ಭಾಗವಹಿಸಲು; ಆ ಸಂದರ್ಭದಲ್ಲಿ 'ಭಾರತ-ಅಮೆರಿಕ ಆಯಕಟ್ಟಿನ ಸಂವಾದ'ದಲ್ಲಿ ಭಾಗವಹಿಸಿ ವಿದೇಶಿ ಶಿಕ್ಷಣ ಸಂಸ್ಥೆಗಳಿಗೆ ಭಾರತದಲ್ಲಿ ಅವಕಾಶ ನೀಡುವ ಜಂಟಿ ಕಾರ್ಯಕ್ರಮಗಳ ಬಗ್ಗೆ ಕೆಲವು ಪ್ರಕಟಣೆಗಳನ್ನು ಮಾಡಿ ಅಮೆರಿಕನ್ ದೊರೆಗಳಿಂದ ಶಹಬ್ಬಾಸ್‌ಗಿರಿ ಪಡೆಯುವ ಆಸೆ ಅವರದ್ದಾಗಿತ್ತು. ಆದರೆ ವಿದೇಶಿ ಶೈಕ್ಷಣಿಕ ಸಂಸ್ಥೆಗಳಿಗೆ ಅವಕಾಶ ನೀಡುವ ಕಾನೂನು ಪಾಸು ಮಾಡಿಸಿಕೊಳ್ಳಲು ಇನ್ನೂ ಆಗಿಲ್ಲ, ಮುಂದೆಯೂ ತಾವು ಬಯಸುವ ರೀತಿಯಲ್ಲಿ ಅದು ಸಾಧ್ಯವಾಗಲಿಕ್ಕಿಲ್ಲ ಎಂಬ ಭಯ ಅವರಿಗೆ. ಅದಕ್ಕಾಗಿ ಸಂಸತ್ತನ್ನೇ ಬದಿಗೊತ್ತುವ ಹಂಚಿಕೆ ಹೊಳೆಯಿತು. ವಿಶ್ವವಿದ್ಯಾಲಯ ಧನಸಹಾಯ ಆಯೋಗ ಅಂದರೆ 'ಯುಜಿಸಿ' ಈಗಿರುವ ಕಾನೂನಿನ ಚೌಕಟ್ಟಿನೊಳಗೇ ವಿದೇಶಿ ಶಿಕ್ಷಣ ಸಂಸ್ಥೆಗಳ ಪ್ರವೇಶಕ್ಕೆ ಅವಕಾಶ ಮಾಡಿಕೊಡುವಂತಹ ನಿಯಮಗಳನ್ನು 'ನಿಯಂತ್ರಣ'ದ ಹೆಸರಿನಲ್ಲಿ ರೂಪಿಸಬಾರದೇಕೇ? ಆಗ ಸಂಸತ್ತನ್ನು ಕೇಳುವ ಆವಶ್ಯಕತೆಯೇ ಇರುವುದಿಲ್ಲ!

ಈ ಕಾರಣಕ್ಕಾಗಿ ಜುಲೈ 21 ರಂದು ನಡೆಯಬೇಕಾಗಿದ್ದ ಯುಜಿಸಿ ಸಭೆಯನ್ನು ಜೂನ್ 2ಕ್ಕೇ, ಅದೂ ಯಾವುದೇ ಅಜೆಂಡಾ ಸೂಚಿಸದೆ ಕರೆಯಲಾಯಿತು. ಸಾಮಾನ್ಯವಾಗಿ ಒಂದು ವಾರದ ಮೊದಲು ಸಭೆಯ ಅಜೆಂಡಾವನ್ನು ಕಳಿಸಲಾಗುತ್ತದೆ. ಆದರೆ ಈ ಬಾರಿ ಮೌಖಿಕವಾಗಿ ಮಾತ್ರವೇ 'ಭಾರತದೊಳಕ್ಕೆ ವಿದೇಶಿ ಸಂಸ್ಥೆಗಳ ಪ್ರವೇಶದ ಬಗ್ಗೆ ತುರ್ತಾಗಿ ಚರ್ಚಿಸಬೇಕಾಗಿದೆ' ಎಂದು ಹೇಳಲಾಯಿತು.

ಜೂನ್ 2ರಂದು ಸಭೆ ಸೇರಿದ ಯುಜಿಸಿಯ ಮುಂದೆ ಇದ್ದದ್ದು ಎರಡೇ ಅಜೆಂಡಾ. ಮೊದಲಿನದ್ದೇ, ವಿದೇಶಿ ಶೈಕ್ಷಣಿಕ ಸಂಸ್ಥೆಗಳಿಗೆ

ಪುಟ 14 ಕ್ಕೆ

ಯುಪಿಎ ದರ್ಬಾರ್

ಪುಟ 13 ರಿಂದ

ಯುಜಿಸಿ ಕಾನೂನಿನ ಅಡಿಯಲ್ಲಿ 'ಡೀಮ್ಡ್ ಯೂನಿವರ್ಸಿಟಿ'ಯಾಗಿಯೋ ಅಥವ ರಾಜ್ಯಗಳ ಕಾನೂನುಗಳ ಅಡಿಯಲ್ಲಿ ಖಾಸಗಿ ವಿಶ್ವವಿದ್ಯಾಲಯವಾಗಿಯೋ ಪ್ರವೇಶ ಕೊಡಲು ಸಾಧ್ಯವೇ ಎಂದು ಪರಿಶೀಲಿಸುವುದು. ಇದಕ್ಕೆ ಯುಜಿಸಿಯ ಕೆಲವು ಸದಸ್ಯರಿಂದ ಬಲವಾದ ವಿರೋಧ ಬಂದಿದೆ ಎಂದು ವರದಿಯಾಗಿದೆ. ಈ ಸಭೆಯ ಹಿಂದಿನ ದಿನ ಪತ್ರಿಕೆಯೊಂದರಲ್ಲಿ ವಿದೇಶಿ ಶೈಕ್ಷಣಿಕ ಸಂಸ್ಥೆಗಳಿಗೆ 'ಹಿಂಬಾಗಿಲಿ'ನಿಂದ ಪ್ರವೇಶ ಕೊಡುವ ಪ್ರಯತ್ನ ಇದು ಎಂದು ಬಯಲಿಗೆ ಬಂದುದ್ದರಿಂದಲೋ ಏನೋ; ಕೊನೆಗೆ. ಈ ಬಗ್ಗೆ ನಿರ್ಧಾರವನ್ನು ಮುಂದೂಡುವ ನಿರ್ಧಾರ ಕೈಗೊಳ್ಳಲಾಯಿತಂತೆ. ಯುಪಿಎ-2 ಮಂತ್ರಿಗಳ ಆಸೆ ನೆರವೇರಲಿಲ್ಲ.

ಈ ವಿಷಯಕ್ಕೆ ಸಂಬಂಧಪಟ್ಟ ಮಸೂದೆಯೊಂದು ಸಂಸತ್ತಿನ ಮುಂದೆ ಇರುವಾಗ ಯುಜಿಸಿಯ ನಿಯಮಗಳನ್ನು ಉದಾರಗೊಳಿಸಿ ಭಾರತದೊಳಕ್ಕೆ ಅಮೆರಿಕನ್ ಶೈಕ್ಷಣಿಕ ಸಂಸ್ಥೆಗಳು ಸುಲಭವಾಗಿ ಪ್ರವೇಶಿಸಲು ಅವಕಾಶ ಕಲ್ಪಿಸುವ ಈ ಪ್ರಯತ್ನ ಸಂಸತ್ತನ್ನು ಬದಿಗೆ ತಳ್ಳುವ ಒಂದು ಪ್ರಯತ್ನ, ಆ ಮೂಲಕ ಸಂಸತ್ತಿನ ನಿಂದನೆಯೂ ಆಗುತ್ತದೆ ಎಂದು ಸಿಪಿಐ(ಎಂ) ಟೀಕಿಸಿ ಯುಪಿಎ-2 ಸರಕಾರದ ಈ ಪ್ರಯತ್ನವನ್ನು ಖಂಡಿಸಿದೆ. ಇಂತಹ ಪ್ರಯತ್ನಕ್ಕಿಳಿಯುವ ಬದಲು ಮಾನವ ಸಂಪನ್ಮೂಲ ಮಂತ್ರಿಗಳು ಭಾರತದಲ್ಲಿ ಕಾನೂನನ್ನು ಉಲ್ಲಂಘಿಸಿ ಕೆಲಸ ಮಾಡುತ್ತಿರುವ ವಿದೇಶಿ ಶೈಕ್ಷಣಿಕ ಸಂಸ್ಥೆಗಳ ವಿರುದ್ಧ ಕಾನೂನಿನ ಕ್ರಮ ಜರುಗಿಸಬೇಕು ಹಾಗೂ ಮುಂದೆ ಇಂತಹ ಉಲ್ಲಂಘನೆಗಳಾಗದಂತೆ ಕ್ರಮ ವಹಿಸಬೇಕು ಎಂದು ಸಿಪಿಐ(ಎಂ) ಆಗ್ರಹಿಸಿದೆ.

'ಜನಶಕ್ತಿ' ಸಂಪರ್ಕ ವಿಳಾಸ ಬದಲಾಗಿದೆ. ದಯಮಾಡಿ ಗಮನಿಸಿ

ದುಡಿಯುವ ಜನರ ಪ್ರಾಣ ಮಿತ್ರ 'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಸಂಪರ್ಕ ವಿಳಾಸ ಬದಲಾಗಿ ಬಹಳಷ್ಟು ದಿನಗಳಾಗಿವೆ. ಆದರೆ ಈಗಲೂ ಕೆಲವೊಂದು ಲೇಖನ, ಪತ್ರ ಇತ್ಯಾದಿಗಳನ್ನು ಹಳೆಯ ವಿಳಾಸಕ್ಕೆ ಕಳಿಸಲಾಗುತ್ತಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ದಯಮಾಡಿ ಈ ಕೆಳಗಿನ ವಿಳಾಸವನ್ನು ಗಮನಿಸಿ ತಮ್ಮ ಪತ್ರಗಳನ್ನು ಅಲ್ಲಿಗೆ ಕಳಿಸಬೇಕಾಗಿ ವಿನಂತಿ.

'ಜನಶಕ್ತಿ' ಕಾರ್ಯಾಲಯ
ಇ.ಎಂ.ಎಸ್. ಭವನ, ನಂ.37/ಎ, 8 ನೇ ಅಡ್ಡರಸ್ತೆ,
ಅಂಚೆ ಕಛೇರಿ ಎದುರು, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು- 560086

'ಜನಶಕ್ತಿ' ಸರಿಯಾಗಿ ತಲುಪುತ್ತಿಲ್ಲವೇ ?

'ಜನಶಕ್ತಿ' ಪತ್ರಿಕೆಯ ಪ್ರಸಾರ, ವಿತರಣೆಗೆ ಸಂಬಂಧಿಸಿ ಸಮಯಕ್ಕೆ ಸರಿಯಾಗಿ ತಲುಪುತ್ತಿಲ್ಲ, ಅಥವಾ ತಲುಪುತ್ತಲೇ ಇಲ್ಲವೆಂಬ ಬಗೆಗೆ ಹಾಗೂ ಇನ್ನು ಕೆಲವು ಸ್ವರೂಪದ ದೂರುಗಳು ಕೆಲವೊಮ್ಮೆ ಕೇಳಿ ಬರುತ್ತಿವೆ. ದೂರುಗಳನ್ನು ದಾಖಲಿಸಿಕೊಂಡು ಸರಿಪಡಿಸಲು ಪ್ರಯತ್ನಿಸಲಾಗುವುದು.

'ಜನಶಕ್ತಿ' ಕಾರ್ಯಾಲಯದಿಂದಾದ ದೋಷವಾದಲ್ಲಿ ಇಲ್ಲಿಯೇ ಸರಿಪಡಿಸಲಾಗುವುದು. ಅಂಚೆ ಮೂಲಕ ತಲುಪುವುದರಲ್ಲಿ ಸಮಸ್ಯೆ ಇದ್ದಲ್ಲಿ ಇಲಾಖೆಗೆ ದೂರು ನೀಡಿ ಸರಿಪಡಿಸಲು ಕೋರಲಾಗುವುದು. ದೂರುಗಳನ್ನು ಜನಶಕ್ತಿ ಕಾರ್ಯಾಲಯದಲ್ಲಿ ದಾಖಲಿಸಲು ಕೋರುತ್ತೇವೆ.

ಕಾರ್ಯಾಲಯದ ದೂರವಾಣಿ: 080-23491114
ಮೊಬೈಲು :. ಎಚ್. ಎಂ. ನಾಗರಾಜ್, 9482220931

ಜನಶಕ್ತಿಯ ಪ್ರಸಾರ, ಲೆಕ್ಕಪತ್ರ, ವಿಳಾಸ ಬದಲಾವಣೆ ಇತ್ಯಾದಿಗಳ ಸಂಬಂಧವಾಗಿ ಈ ಮೇಲಿನ ವಿಳಾಸ ಮತ್ತು ದೂರವಾಣಿಗಳಲ್ಲಿಯೇ ಸಂಪರ್ಕಿಸಲು ವಿನಂತಿ. ಈ ವಿಷಯಗಳ ಸಂಬಂಧ ತೀರಾ ಅಗತ್ಯವಾದಲ್ಲಿ ಮಾತ್ರ ಸಂಪಾದಕರು ಅಥವಾ ಸಂಪದಕೀಯ ವಿಭಾಗದ ಸಂಗಾತಿಗಳನ್ನು ಸಂಪರ್ಕಿಸಲು ಕೋರಿಕೆ;

ಪತ್ರಿಕೆಗೆ ಲೇಖನ, ವರದಿ ಇತ್ಯಾದಿ ಕಳಿಸುವವರು ದಯಮಾಡಿ ನುಡಿ ತಂತ್ರಾಂಶದಲ್ಲಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಬೇಕೆಂದು ಹಾಗೂ ತಪ್ಪದೇ ಜನಶಕ್ತಿಗಾಗಿ ಲೇಖನ, ಅಥವಾ ವರದಿ ಎಂದು ನಮೂದಿಸಬೇಕಾಗಿ ವಿನಂತಿ. ವರದಿ, ಲೇಖನಗಳಿಗೆ ಸಂಬಂಧಿಸಿದ ಅರ್ಥಪೂರ್ಣ ಫೋಟೋಗಳನ್ನು ಕಳುಹಿಸುವುದು ಒಳ್ಳೆಯದು. ಈ ವಿಷಯಕ್ಕೆ ಸಂಬಂಧಿಸಿ ಸಂಪರ್ಕಕ್ಕಾಗಿ ವಿವರ.

ಆರ್. ರಾಮಕೃಷ್ಣ - 9448505789
ಎಸ್.ವೈ. ಗುರುಶಾಂತ್ - 9448230114 E mail: js_weekly@yahoo.com

ಏಜೆನ್ಸಿ ಬಾಕಿ ಪಾವತಿಸಿ-
ಜನಶಕ್ತಿ ನಿರಂತರವಾಗಿ ಹೊರ ಬರಲು ಸಹಕರಿಸಿ

ದುಡಿಯುವ ಜನರ ದನಿಯಾಗಿ ಕಾರ್ಯನಿರ್ವಹಿಸುತ್ತಿರುವ ಜನಶಕ್ತಿ ಪತ್ರಿಕೆಯು ತಡೆಯಿಲ್ಲದೇ ನಿರಂತರವಾಗಿ ಹೊರಬರುವುದು ಅಗತ್ಯವಾಗಿದೆ. ಜನಶಕ್ತಿಯ ಓದುಗರು ಮತ್ತು ಏಜೆನ್ಸಿದಾರರಿಗೆ ಈ ಬಗೆಗೆ ಹೆಚ್ಚು ವಿವರಿಸಬೇಕಾದ ಅಗತ್ಯವಿಲ್ಲ. ಆದರೆ ಏಜೆನ್ಸಿದಾರರ ಬಾಕಿ ಮೊತ್ತವು ಏರಿ ಪತ್ರಿಕೆಯನ್ನು ಹೊರ ತರುವುದು ದಿನೇ ದಿನೇ ಒಂದು ಸಾಹಸದಂತಾಗುತ್ತಿದೆ. ಆದ್ದರಿಂದ ದಯಮಾಡಿ ಏಜೆನ್ಸಿದಾರರು ತಮ್ಮ ಬಾಕಿಗಳನ್ನು ತುರ್ತು ಆದ್ಯತೆಯ ಮೇರೆಗೆ ತೀರಿಸಲು ಕ್ರಮ ವಹಿಸಬೇಕೆಂದು ವಿನಂತಿಸುತ್ತೇವೆ. ಕೂಡಲೇ ಬಾಕಿ ಪಾವತಿಸಿ ಸಹಕರಿಸುವಿರೆಂದು ಆಶಿಸುತ್ತೇವೆ.

- ಸಂ. ಮಂ.

ಮತ್ತೊಂದು ರೈಲು ಅಪಘಾತ : ಬೇಜವಾಬ್ದಾರಿತನಕ್ಕೆ ಇನ್ನೂ ಐದು ಬಲಿ

ಮೇ 31, 2012 ರಂದು ಮತ್ತೊಂದು ರೈಲ್ವೆ ಅಪಘಾತ ಸಂಭವಿಸಿದೆ, ಹಾವ್ಡಾ-ದೆಹರಾಡೂನ್ ಎಕ್ಸ್‌ಪ್ರೆಸ್ ಉತ್ತರಪ್ರದೇಶದ ಜೌನ್ಪುರ್ ಜಿಲ್ಲೆಯಲ್ಲಿ ಹಳಿತಪ್ಪಿ ಐದು ಜನರು ಬಲಿ ತೆಗೆದುಕೊಂಡಿದೆ. ಇದು ಮೇ ತಿಂಗಳಲ್ಲಿ ನಡೆದಿರುವ ಮೂರನೇ ರೈಲು ಅಪಘಾತ. ಮೇ 6ರಂದು ಫಿರೋಝ್‌ಪುರ-ಪಂಜಾಬ್ ಮೇಲ್‌ನ ಆರು ಬೋಗಿಗಳು ರೊಹ್ತಕ್ ಬಳಿ ಹಳಿ ತಪ್ಪಿ 29 ಪ್ರಯಾಣಿಕರು ಗಾಯಗೊಂಡರು. ಮೇ 22ರಂದು ಹಂಪಿ ಎಕ್ಸ್‌ಪ್ರೆಸ್ ಪೆನುಕೊಂಡ ಬಳಿ ಗೂಡ್ಸ್ ರೈಲಿಗೆ ಢಿಕ್ಕಿ ಹೊಡೆದು 25 ಮಂದಿ ಪ್ರಾಣ ಕಳಕೊಂಡರು, 55 ಮಂದಿ ಗಾಯಗೊಂಡರು. ಅದಾದ ಒಂಭತ್ತು ದಿನಗಳಲ್ಲೇ ಈ ಅಪಘಾತ ಸಂಭವಿಸಿದೆ.

ಎಂದಿನಂತೆ ಪ್ರಸಕ್ತ ರೈಲು ಮಂತ್ರಿ, ಅವರ ಪಕ್ಷದ ಮುಖ್ಯಸ್ಥೆ ಮತ್ತು ಮಾಜೀ ರೈಲು ಮಂತ್ರಿಗಳಂತೆ ಬುಡಮೇಲು ಕೃತ್ಯದ ಮಾತಾಡಿದ್ದಾರೆ. ಆದರೆ ಇದು ರೈಲ್ವೆ ಇಲಾಖೆ ಅತ್ಯಂತ ದುಸ್ಥಿತಿಯಲ್ಲಿದೆ ಎಂಬುದನ್ನು ತೋರಿಸುತ್ತದೆ ಎಂಬುದಂತೂ ಸ್ಪಷ್ಟ, ಅದೇ ರೀತಿ ಹಿಂದಿನ ರೈಲು ಮಂತ್ರಿಯಂತೆ, ಅದೇ ಪಕ್ಷಕ್ಕೇ ಸೇರಿದ ಈಗಿನ ರೈಲು ಮಂತ್ರಿಯೂ ತನಗೆ ವಹಿಸಿದ ಇಲಾಖೆಯ ಕೆಲಸದ ಮೇಲೆ ಗಮನ ಹರಿಸುವ ಬದಲು, ತನ್ನ ರಾಜ್ಯದ ಅಧಿಕಾರ ರಾಜಕೀಯದಲ್ಲಿಯೇ ಮುಳುಗಿರುವುದೇ ಕಾರಣ ಎಂಬುದೂ ಸ್ಪಷ್ಟ. ಇದೇ ಒಂದು ವಾರದಲ್ಲಿಯೇ ಟಿಎಂಸಿ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಈತ ತನ್ನ ಪಕ್ಷ ಈಗ ಪಶ್ಚಿಮ ಬಂಗಾಲವನ್ನು ಏಕಾಂಗಿಯಾಗಿ ಆಳಬಲ್ಲುದು ಎಂದು ಕೊಲ್ಕತಾದಲ್ಲಿ ಬೆನ್ನು ತಟ್ಟಿಕೊಂಡಿದ್ದಾರೆ, ತಾನು ಮಂತ್ರಿಯಾಗಿರುವ ಸರಕಾರದ ನೇತೃತ್ವದಲ್ಲಿರುವ ಪಕ್ಷಕ್ಕೆ ಸವಾಲು ಹಾಕಿದ್ದಾರೆ.

ಈ ನಡುವೆ ಜೂನ್ 7ರಂದು ದಕ್ಷಿಣ ರೈಲ್ವೆ, ದಕ್ಷಿಣ ಮಧ್ಯ ರೈಲ್ವೆ ಮತ್ತು ನೈಋತ್ಯ ರೈಲ್ವೆಯ ಲೋಕೋ ಪೈಲಟ್‌ಗಳು ಬೆಂಗಳೂರಿನಲ್ಲಿ ರೈಲ್ವೆ ಸುರಕ್ಷತಾ ಆಯುಕ್ತರ ಕಚೇರಿಗೆ ಮೆರವಣಿಗೆ ನಡೆಸಿ ರೈಲ್ವೆ ಇಲಾಖೆಯಲ್ಲಿನ ಅಸುರಕ್ಷಿತ ಕೆಲಸದ ಸಂಸ್ಕೃತಿಯತ್ತ ಗಮನ ಸೆಳೆದರು. ಪೆನುಕೊಂಡದಲ್ಲಿ ನಡೆದ ಅಪಘಾತಕ್ಕೆ ಮಾನವ ವೈಫಲ್ಯ ಕಾರಣ ಎಂದಿರುವ ರೈಲ್ವೆ ಇಲಾಖೆ ಈ ವೈಫಲ್ಯಕ್ಕೆ ಕಾರಣಗಳನ್ನೂ ತನಿಖೆ ಮಾಡಿ ಅದನ್ನು ನಿವಾರಿಸುವ ಜವಾಬ್ದಾರಿಯನ್ನು ಹೊಂದಿದೆ ಎಂದು ಲೋಕೋ ಪೈಲಟ್‌ಗಳು ನೆನಪಿಸಿದ್ದಾರೆ. ಪೆನುಕೊಂಡದಲ್ಲಿ ಅಪಘಾತಕ್ಕೊಳಗಾದ ರೈಲಿನ ಚಾಲಕ(ಲೋಕೋ ಪೈಲಟ್) ಮೇ 14 ರಿಂದ ಮೇ 19 ರ ವರೆಗೆ ಸತತ ಆರು ದಿನ ರಾತ್ರಿ ಪಾಳಿಯಲ್ಲಿ ಕೆಲಸ ಮಾಡಿದ್ದ, ಮೇ 20ರಂದು ಒಂದು ರಾತ್ರಿಯ ವಿಶ್ರಾಂತಿಯ ನಂತರ ಮತ್ತೆ ಮೇ 21ರಂದು ಆತನಿಗೆ ರಾತ್ರಿ ಪಾಳಿಯಲ್ಲಿ ಕೆಲಸ ಮಾಡುವಂತೆ ಹೇಳಲಾಗಿದ್ದುದೇ ಈ 'ಮಾನವ ವೈಫಲ್ಯ'ಕ್ಕೆ ಕಾರಣ. ವಾಸ್ತವವಾಗಿ ಎರಡು ದಿನಗಳಿಗಿಂತ ಹೆಚ್ಚು ಸತತ ರಾತ್ರಿಪಾಳಿ ಸುರಕ್ಷಿತವಲ್ಲ ಎಂಬ ಆರ್‌ಡಿಎಸ್‌ಒ ಶಿಫಾರಸನ್ನು ಪಾಲಿಸಿದ್ದರೆ ಈ ಅಪಘಾತ ಸಂಭವಿಸುತ್ತಿರಲಿಲ್ಲ ಎಂದು ಹೇಳಲಾಗುತ್ತಿದೆ.

ರೈಲ್ವೆ ಆಧುನೀಕರಣ ಕುರಿತ ವರದಿಯಲ್ಲಿ **'ರೈಲ್ವೆ ಇಲಾಖೆ 19ನೇ ಶತಮಾನದ ನಿಯಮಗಳು ಮತ್ತು ಕಾನೂನುಗಳು ಹಾಗೂ 20ನೇ ಶತಮಾನದ ಮಾನಸಿಕತೆಯಲ್ಲಿಯೇ ಇರುವ ಅಧಿಕಾರಶಾಹಿಯೊಂದಿಗೆ 21ನೇ ಶತಮಾನದ ಅಗತ್ಯಗಳನ್ನು ಸಾಧಿಸುವ ಕನಸು ಕಾಣುತ್ತಿದೆ'** ಎಂದು ಸಾಮ್ ಪಿತ್ರೋಡಾರವರು ಹೇಳಿರುವುದನ್ನು ಉದ್ಧರಿಸುತ್ತಾ 19ನೇ ಶತಮಾನದ ಅಮಾನವೀಯ ನಿಯಮಗಳೇ ಅಪಘಾತಗಳಿಗೆ ಕಾರಣ, ಇವನ್ನು ಬದಲಿಸುವ ಬಗ್ಗೆ ರೈಲ್ವೆ ಮಂತ್ರಿಗಳು ಮೌನವಾಗಿದ್ದಾರೆ ಎಂದು ಅಖಿಲ ಭಾರತ ಲೋಕೋ ಚಾಲಕ ಸಿಬ್ಬಂದಿ ಸಂಘ(ಎಐಎಲ್‌ಆರ್‌ಎಸ್‌ಎ) ಹೇಳಿದೆ.

ಪಶ್ಚಿಮ ಬಂಗಾಲದ ಅಧಿಕಾರ ರಾಜಕೀಯವೇ ಮುಖ್ಯವಾಗಿರುವ, ಅದಕ್ಕಾಗಿಯಷ್ಟೇ ರೈಲು ಇಲಾಖೆಗೆ ಅಂಟಿಕೊಂಡಿರುವ ಮಂತ್ರಿಗಳಿಂದ ಇನ್ನೇನು ತಾನೇ ನಿರೀಕ್ಷಿಸಲು ಸಾಧ್ಯ?

ಆದರೆ ಯುಪಿಎ ಪ್ರಧಾನ ಮಂತ್ರಿಗಳಿಂದಲೂ ಅದನ್ನೇ ನಿರೀಕ್ಷಿಸಬೇಕೇ? ಅವರು ತನ್ನ ಕರ್ತವ್ಯದ ಬಗ್ಗೆ ರೈಲ್ವೆ ಮಂತ್ರಿಯ ನಿರ್ಲಕ್ಷ್ಯವನ್ನು ಉಪೇಕ್ಷಿಸಬಾರದು, ಒಬ್ಬ ಮೂಕಪ್ರೇಕ್ಷಕನಂತೆ ನಿಲ್ಲಬಾರದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಆಗ್ರಹಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಶತಮಾನದ ಕೊನೆಯ ಶುಕ್ರಸಂಕ್ರಮ – ಸಂಭ್ರಮದ ವೀಕ್ಷಣೆ

ಭಾರತ ಜ್ಞಾನ ವಿಜ್ಞಾನ ಸಮಿತಿ ಮತ್ತು ಸ್ವತಂತ್ರ ತಂತ್ರಾಂಶ ಆಂದೋಲನ ಕರ್ನಾಟಕ ಇವರು ಮಲ್ಲೇಶ್ವರಂ 18ನೇ ಕ್ರಾಸ್‌ನ ಆಟದ ಮೈದಾನದಲ್ಲಿ ಆಯೋಜಿಸಿದ್ದ ಈ ಶತಮಾನದ ಕೊನೆಯ ಶುಕ್ರಸಂಕ್ರಮವನ್ನು ನಾಗರೀಕರು ಮತ್ತು ಕಾಲೇಜು ವಿದ್ಯಾರ್ಥಿಗಳು ವೀಕ್ಷಿಸಿ ಸಂಭ್ರಮಿಸಿದರು. ಬೆಳಿಗ್ಗೆ 6.30 ಗಂಟೆಗೆ ಭಾರತ ಜ್ಞಾನ ವಿಜ್ಞಾನ ಸಮಿತಿಯ ಕಾರ್ಯಕರ್ತರು ಮೈದಾನದಲ್ಲಿ ಅಗತ್ಯ ಸಲಕರಣೆಗಳೊಂದಿಗೆ ಶುಕ್ರಸಂಕ್ರಮದ ವೀಕ್ಷಣೆಗೆ ಸಜ್ಜಾಗಿದ್ದರು. ಮೋಡ ಕವಿದ ವಾತಾವರಣದಿಂದ 7.30ರವರೆಗೆ ಸರಿಯಾಗಿ ವೀಕ್ಷಣೆ ಮಾಡಲು ಸಾಧ್ಯವಾಗಲಿಲ್ಲ. ನಂತರದಲ್ಲಿ ಮೋಡ ಚದುರಿ ಕೆಲಕಾಲ ವೀಕ್ಷಣೆಗೆ ಅನುಕೂಲವಾಯಿತು. ವೀಕ್ಷಣೆಯುದ್ದಕ್ಕೂ



ವೀಕ್ಷಕರೂ ಮತ್ತು ಮೋಡದ ಹಿಂಡು ಜಿದ್ದಿಗೆ ಬಿದ್ದಂತೆ ಕಂಡುಬರುತ್ತಿದ್ದರು ಸ್ಥಳದಲ್ಲೇ ಹಾಜರಿದ್ದ ಭಾರತ ಜ್ಞಾನ ವಿಜ್ಞಾನ ಸಮಿತಿಯ ವಿಷಯ ತಜ್ಞರು ನೆರೆದಿದ್ದವರಿಗೆ ಶುಕ್ರ ಸಂಕ್ರಮದ ಬಗ್ಗೆ ವಿವರಣೆಗೆ ನೀಡಿದರು. ಭಾರತ ಜ್ಞಾನ ವಿಜ್ಞಾನ ಸಮಿತಿಯ ರಾಜ್ಯ ಕಾರ್ಯದರ್ಶಿ ಎಸ್.ವಜ್ರಮುನಿ, ಸಹ ಕಾರ್ಯದರ್ಶಿ ಜಿ.ವಿನುತ, ಸದಸ್ಯರಾದ ಎನ್.ಪ್ರಭಾ, ಸ್ಥಳೀಯ ಘಟಕದ ಮಹಮದ್, ಜಗದೀಶ್, ಗುರುಶಾಂತಪ್ಪ, ಶ್ರೀಕಂಠಸ್ವಾಮಿ ಮುಂತಾದವರು ನೆರದಿದ್ದವರಿಗೆ ವೀಕ್ಷಣೆಗೆ ಸಹಾಯ ಮಾಡಿದರು.

ನಗರದ ಲಾಲ್‌ಬಾಗ್‌ನಲ್ಲಿ ಸಹ ಭಾರತ ಜ್ಞಾನ ವಿಜ್ಞಾನ ಸಮಿತಿ ಮತ್ತು ಸ್ವತಂತ್ರ ತಂತ್ರಾಂಶ ಆಂದೋಲನ ಕರ್ನಾಟಕ ವೀಕ್ಷಣೆಗೆ ಸಿದ್ಧತೆ ಮಾಡಿದ್ದರು. ಬೆಂಗಳೂರು ನಗರದಲ್ಲಿ ಮಾತ್ರವಲ್ಲದೆ ವಿವಿಧ ಜಿಲ್ಲೆಗಳ ಭಾರತ ಜ್ಞಾನ ವಿಜ್ಞಾನ ಸಮಿತಿಯ ಘಟಕಗಳು ಶುಕ್ರಸಂಕ್ರಮದ ವೀಕ್ಷಣೆಗೆ ಸಾರ್ವಜನಿಕರಿಗೆ ಅಗತ್ಯವಿರುವ ಮಾಹಿತಿ ಮತ್ತು ಸಲಕರಣೆಗಳನ್ನು ನೀಡಿ ವೀಕ್ಷಣೆಗೆ ಅವಕಾಶ ಮಾಡಿಕೊಡಲಾಯಿತು.

– ಕಾರ್ಯದರ್ಶಿ

ಭಾರತ ಜ್ಞಾನ ವಿಜ್ಞಾನ ಸಮಿತಿ,
ಬೆಂಗಳೂರು ಜಿಲ್ಲಾ ಘಟಕ

ಖಗೋಳ ವಿಸ್ಮಯ : ಉತ್ಸಾಹದ ವೀಕ್ಷಣೆ

ಹಾಸನ ಜೂನ್ 6। ಇಂದು ಜಗದ ನಭೋಮಂಡಲದಲ್ಲಿ ಶತಮಾನದ ಕಟ್ಟಕಡೆಯ ಹಾಗೂ ಅಪರೂಪದ ಶುಕ್ರ ಸಂಕ್ರಮಣ ಜರುಗತು ದೇಶ–ವಿದೇಶಗಳಲ್ಲಿ ಕೋಟ್ಯಾಂತರ ಜನ, ವಿದ್ಯಾರ್ಥಿಗಳು ಹಾಗೂ ವಿಜ್ಞಾನಿಗಳು ಈ ಸೌಂಧರ್ಯವನ್ನು ವೀಕ್ಷಿಸಿದರು, ಅಧಯಯನ ಮಾಡಿದರು ಮತ್ತು ಸೌರ ವಿಷತೆಗಳನ್ನು ಅಳೆದರು.

ಹಾಸನ ನಗರದ ಜಿಲ್ಲಾ ಕ್ರೀಡಾಂಗಣದಲ್ಲಿ ಶತಮಾನದ ಕಟ್ಟಕಡೆಯ ಹಾಗೂ ಅಪರೂಪದ ಶುಕ್ರ ಸಂಕ್ರಮಣವನ್ನು ಸಾರ್ವಜನಿಕರಿಗಾಗಿ ವೀಕ್ಷಿಸುವ ಸಲುವಾಗಿ ವಿಶೇಷ ಕನ್ನಡಕದ ವ್ಯವಸ್ಥೆಯನ್ನು ಹಾಸನ ಜಿಲ್ಲಾ ಭಾರತ ಜ್ಞಾನ ವಿಜ್ಞಾನ ಸಮಿತಿಯು ಮಾಡಿತ್ತು ಹಾಸನ ನಗರದ ನೂರಾರು ಸಂಖ್ಯೆಯಲ್ಲಿ ಜಿಲ್ಲಾ ಕ್ರೀಡಾಂಗಣದಲ್ಲಿ ಜನ ಶುಕ್ರ ಸಂಕ್ರಮವನ್ನು ನೋಡಿ ಆನಂದಿಸಿದರು. ಹಾಸನ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಸಂಘದ ಜಿಲ್ಲಾಧ್ಯಕ್ಷೆ ಶ್ರೀಮತಿ ಲೀಲಾವತಿ ಮೊದಲಿಗೆ ಸಂಕ್ರಮ ವೀಕ್ಷಿಸುವ ಮೂಲಕ ವೀಕ್ಷಣಾ ಕಾರ್ಯಕ್ರಮದ ಉದ್ಘಾಟನೆ ನಡೆಸಿದರು, ಸಮಾಜ ಸೇವಾ ಕಾರ್ಯಕರ್ತ ಸುರೇಶ್ ಗುರೂಜಿ; ವಿಜ್ಞಾನ ಸಂವಹನ ಸಂಚಾಲಕ ಬಿ.ಜಿ.ಗೋಪಾಲಕೃಷ್ಣ ಹಾಗೂ ಬಿಜಿವಿಎಸ್ ಜಿಲ್ಲಾ ಕಾರ್ಯದರ್ಶಿ ಹೆಚ್.ಎ.ಅಹಮದ್ ವೀಕ್ಷಕ ವಿವರಣೆ ನೀಡಿದರು.

2012ರ ಶುಕ್ರ ಸಂಕ್ರಮ ಆಸ್ಟ್ರೇಲಿಯದ ಮೆಲ್ಬೊರ್ನ್ ಅಡಿನೇಡಿನಲ್ಲಿ ಬೆಳಗಿನ 3.39 ಗಂಟೆಗೆ ಗಡಿಯಾರದ 6ರ ಬಾಗದಲ್ಲಿ ಸೂರ್ಯಸ್ಪರ್ಶ ಮಾಡಿತು ಭಾರತಕ್ಕೆ ಸೂರ್ಯೋದಯದ ಜೊತೆಯಲ್ಲಿ ಕಾಣಿಸಲಾರಂಬಿಸಿತು. ಹಾಸನದ ಜಿಲ್ಲಾ ಕ್ರೀಡಾಂಗಣದಲ್ಲಿ ಸೂರ್ಯೋದಯ 6 ಗಂಟೆ 12 ನಿಮಿಷಕ್ಕೇ ಪ್ರಾರಂಭವಾಗಬೇಕಾಗಿತ್ತು ಮಳೆಯ ಮೋಡದ ಕಾರಣ ಕ್ರಿಡಾಂಗಣದಲ್ಲಿ ಸೌರ ಶೂಧಕ ಹಾಗೂ ಕ್ಯಾಮೆರಾ ಕಣ್ಣಗಳಿದೆ 6 ಗಂಟೆ 50 ನಿಮಿಷಕ್ಕೆ ಮೊದಲ ದರ್ಶನ ನೀಡಿತು ಪುನಃ ಸೂರ್ಯನನ್ನು ಮೋಡ ಆವರಿಸಿ ಮತ್ತೆ 7.15 ರಿಂದ 7.35 ರವರೆಗೆ ಬಹಳ ಸುಂದರ ಶೂಕ್ರ ಸಂಕ್ರಮವನ್ನು ಹಾಸನ ನಗರದ ಜನತೆ ವೀಕ್ಷಿಸಿ ಆನಂದಿಸಿದರು ಆ ವೇಳೆಯಲ್ಲಿ ಶುಕ್ರ ಒಂದು ಕಪ್ಪು ಬಿಂದಿಯಂತೆ ಸೂರ್ಯನ ಮೂಡುವೆಡೆಯಿಂದ ಅಂದರೆ ಗಡಿಯಾರದ 6ಗಂಟೆಸ್ಥಳದಿಂದ 10 ಗಂಟೆಯ ಸ್ಥಳದ ಮಾರ್ಗವಾಗಿ 9ಗಂಟೆಯ ನೇರದಲ್ಲಿದ್ದ ನಂತರ ಪುನಃ ಮೋಡಕವಿದು ಸೂರ್ಯ ಮರೆಯಾಗಿ 10.10ಕ್ಕೆ ಸ್ವಲ್ಪ ದರ್ಶನ ತೋರಿಸಿ 10.21ಕ್ಕೆ ಸಂಕ್ರಮ ಮುಗಿಸಿ ಹೊರನಡೆದ.

ಬೆಳಗಿನ ಹವಾವಿಹಾರ, ಕ್ರೀಡಾಭ್ಯಾಸ, ಹಾಗೂ ಜಾಗಿಂಗ್‌ಗೆ ಬಂದಿದ್ದ ಜನ ಬೆಳಗಿನ 6.30ರಿಂದ 7.30ರವರೆಗೂ ನಂತರ ಅವರುಗಳು ತಮ್ಮ ಮಕ್ಕಳು ಹಾಗು ಮನೆಯವರನ್ನು ಕರೆತಂದು ವೀಕ್ಷಸಿ ಸಂಬ್ರಮಿಸಿದರು ನಂತರ ಶಾಲಾ ವಿಧ್ಯಾರ್ಥಿಗಳು ಹಾಗೂ ಕ್ರೀಡಾಂಗಣ ಮತ್ತು ಪೋದಾರ್ ಶಾಲಾ ಮೈದಾನದಲ್ಲಿ ವೀಕ್ಷಿಸಿ ಆನಂದಿಸಿದರು.

ಎಚ್.ಎ.ಅಹಮದ್

ಕಾರ್ಯದರ್ಶಿ



ವಿಶ್ವ ಬಂಡವಾಳ ಹೂಡಿಕೆರಾರ ಸಮಾವೇಶ ವಿರೋಧಿಸಿ ಹಾಸನದಲ್ಲಿ ಕೆಪಿಆರ್‌ಎಸ್ ಪ್ರತಿಭಟನೆ

ನರಕ ನೋಡಿ ಬಂದಾಕೆ ಬಿಕ್ಕುತ್ತಾಳೆ

ಪುಟ 12 ರಿಂದ

ಹೆಚ್ಚುತ್ತಿದ್ದು ವರದಕ್ಷಿಣೆ ವಿಕಾರವಾಗಿ ಬೆಳೆಯುತ್ತಿದೆ. ಈಗ ಹಣದ ಪಾತ್ರ ಪಗಡೆಯ ಮಾತಾಡುವುದಿಲ್ಲ. ಬದಲಿಗೆ ಇಂತಿಷ್ಟು ತೊಲೆ ಬಂಗಾರ ಮತ್ತು ಸೈಟು ಬೇಕು. ವಿದೇಶಕ್ಕೆ ಹೋಗಿ ವ್ಯಾಸಾಂಗ ಮಾಡುವ ಖರ್ಚು ಕೊಡಬೇಕು ಇತ್ಯಾದಿ. ಉಳ್ಳವರ ಪ್ರತಿಷ್ಠೆಯ ಮತ್ತು ಮೂರ್ಖತನದ ವ್ಯಾಪಾರಕ್ಕೆ ಬಲಿಯಾಗುವುದು ಗಿರಿಜಾಳಂಥ ಬಡ ಹೆಣ್ಣುಮಕ್ಕಳು. ಗುಜರಾತಿಗೆ ಮಗಳನ್ನು ಕೊಟ್ಟು ಕೈತೊಳೆದುಕೊಂಡು ಒಬ್ಬಳು ಹೇಳುತ್ತಿದ್ದಳು, 'ಅಲ್ಲಿ ವರದಕ್ಷಿಣೆ ಇಲ್ಲ. ಮದುವೆ ಖರ್ಚು ಕೊಡಬೇಕಿಲ್ಲ. ಅದಕ್ಕೇ ನನ್ನ ಮಗಳಿಗೆ ಅಲ್ಲಿ ಕೊಟ್ಟನ್ರಿ' ಎಂದು. ಅಳಿಯನ ವಯಸು ಕೇವಲ 50! 20ರ ಮಗಳಿಗೆ ಮದುವಣಗಿತ್ತಿಯಾದ ಸಂಭ್ರಮ ಇರಲು ಸಾಧ್ಯವೇ? ನಮ್ಮ ಬದುಕನ್ನು ನಮ್ಮ ಕನಸನ್ನು ನಮ್ಮ ಭವಿಷ್ಯವನ್ನು ಕದಿಯುವ ಕಳ್ಳರನ್ನು ಹುಡುಕಬೇಕಲ್ಲವೇ? ಜಾಲಾಡಿಸಬೇಕಿದೆ ಜಾಗತೀಕ ಮಾರುಕಟ್ಟೆ, ಜಗತ್ತನ್ನೇ ತಕ್ಕಡಿಯಲ್ಲಿ ಖರಿದಿ ಮಾಡಲು ಹೊರಟ ದೊಡ್ಡಣ್ಣ ಅಲ್ಲೆ ಅಮೇರಿಕಾದಲ್ಲಿಯೇ ಕುಳಿತು ಗಿರಿಜಾಳಂಥವರ ಬದುಕಿಗೆ ಕೊಳ್ಳಿ ಇಡುವುದು ಕಾಣದಷ್ಟು ಕುರುಡಾಗುವುದೇ ನಮ್ಮ ಸರಕಾರ? ಇಲ್ಲ. ಸರಕಾರವೂ ತನ್ನ ಕೈಯಲ್ಲಿ ಸಣ್ಣ ತಕ್ಕಡಿ ಹಿಡಿದು ನಮ್ಮ ಬದುಕನ್ನು ಹರಾಜಿಗೆ ಹಾಕಲು ಸಜ್ಜಾಗಿದೆ. ಅದಕ್ಕೆಂದೇ ಸರಕಾರ ಮತ್ತು ಸರಕಾರದ ಯಂತ್ರ ಜಾಣ ಮೌನ ವ್ಯಕ್ತಿಸುತ್ತಿವೆ. ಇದಕ್ಕಿಂತ ಅಮಾನವೀಯತೆ ಬೇರುಂಟೆ?

JANASHAKTHI KANNADA VARA PATRIKE JUN 17, 2012 Price : Rs. 5/- RNI No. KARKAN /2006/17926 Posted on every Satuarday
Postal Reg. No. RNP/KA/BGS/2078/2010-12 Posted at MBC Bangalore GPO

ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ – 2012

ಬಿಜೆಪಿಯ ಒಳಜಗಳ ಮತ್ತು ಲೂಟಿಕೋರತನ, ಸಂಘಪರಿವಾರದ ಅನೈತಿಕತೆ ಮರೆಮಾಚುವ ವೇದಿಕೆ

ಹರ್ಷ


ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶದ ವಿವರಗಳತ್ತ ತೆರಳುವ ಮುನ್ನ ಜಿಂದಾಲ್ ಅಲ್ಯುಮಿನಿಯಂ ಲಿ. ಕಂಪನಿಯ ಮುಖ್ಯಸ್ಥ ಶ್ರೀ ಎಸ್.ಆರ್ ಜಿಂದಾಲ್ ರವರು ಸಮಾವೇಶದ ಉದ್ಘಾಟನಾ ಭಾಷಣದಲ್ಲಿ ಹೇಳಿದ ಅಂಶ ಗಮನಾರ್ಹ. ಬಿರ್ಲಾ ಕಂಪನಿಯ ಮುಖ್ಯಸ್ಥ ಕುಮಾರ ಮಂಗಳಂ ಬಿರ್ಲಾ, ಇನ್ಫೋಸಿಸ್ ನಾರಾಯಣ ಮೂರ್ತಿ,



ಟಾಟಾ ಕಂಪನಿಗಳಾದಿಯಾಗಿ ವೇದಿಕೆ ಮೇಲಿದ್ದ ಎಲ್ಲ ಬಂಡವಾಳಿಗರು ಸರ್ಕಾರದ ನೀತಿ ನಿರೂಪಣೆ ಮತ್ತು ಕಾರ್ಯವೈಖರಿಯನ್ನು ಹಾಡಿ ಹೊಗಳುತ್ತಿರುವಾಗಲೇ ಜಿಂದಾಲ್ "ರಾಜ್ಯ ಸರ್ಕಾರ ದೊಡ್ಡ ಪ್ರಮಾಣದಲ್ಲಿ ಬಂಡವಾಳ ಹೂಡಿಕೆಗೆ ಅವಕಾಶ ಮಾಡಿಕೊಡುತ್ತಿದೆಯೆಂದು ದೊಡ್ಡ ಪ್ರಚಾರ ನಡೆಯುತ್ತಿದೆ. ಈ ಪ್ರಚಾರ ಒಂದು ರೀತಿಯಲ್ಲಿ ಉತ್ಪ್ರೇಕ್ಷೆಯಿಂದ ಕೂಡಿದೆ ಎಂಬುದನ್ನು ತಿಳಿದುಕೊಳ್ಳಬೇಕು. ಏಕೆಂದರೆ ಕಳೆದ ಜಿಮ್ – 2010ರಲ್ಲಿ ಸರ್ಕಾರವೇ ಘೋಷಿಸಿದಂತೆ 390ಕ್ಕೂ ಹೆಚ್ಚು ಕೈಗಾರಿಕಾ ಯೋಜನೆಗಳಿಗೆ ರೂ. 4.0 ಲಕ್ಷ ಕೋಟಿ ಮೊತ್ತ ಬಂಡವಾಳ ಹೂಡಿಕೆ ಒಡಂಬಡಿಕೆಗಳನ್ನು (ಎಂ.ಓ.ಯು) ಮಾಡಿಕೊಳ್ಳಲಾಗಿತ್ತು. ಆದರೆ ಅನುಷ್ಠಾನವಾಗಿರುವುದು ಶೇ. 4.0ರಷ್ಟೂ ಇಲ್ಲ. ದೇಶದಲ್ಲಿ 35 ಕೋಟಿಗೂ ಹೆಚ್ಚು ಜನತೆ ಬಡತನದಿಂದ ನರಳುತ್ತಿದ್ದಾರೆ. ಕ್ಷಿಪ್ರಗತಿಯಲ್ಲಿ ಕೆಲಸ ಮಾಡದೆ ಸರ್ಕಾರ ಹಲವಾರು ಅಡಚಣೆಗಳಿಂದ ಕೈಗಾರಿಕಾಭಿವೃದ್ಧಿಗೆ ತಡೆಗೋಡೆಯಾಗಿದೆ. ಏಕಗವಾಕ್ಷಿ ವ್ಯವಸ್ಥೆ ಮೂಲಕ ಕ್ಷಿಪ್ರವಾಗಿ ಯೋಜನೆಗಳಿಗೆ ಅನುಮೋದನೆ ನೀಡಲಾಗುತ್ತದೆಂದು ಹೇಳಿಕೊಂಡರೂ ಅದೇ ಕಿಟಕಿಯ ಮೂಲಕ ಪ್ರವೇಶಿಸಿದಾಗ ಹಲವು ಬಾಗಿಲುಗಳು ಮತ್ತು ಕಿಟಕಿಗಳು ಕಾಣುತ್ತವೆ" ಎಂದು ಸರ್ಕಾರವನ್ನು ಟೀಕಿಸಿದರು. ಅವರು ತಮ್ಮ ಸ್ವಂತ ಉದ್ದೇಶದಿಂದ ಹೇಳಿದ್ದರೂ ಈ ಮಾತುಗಳು ಹಗಲು ದರೋಡೆಕೋರರು ಮತ್ತು ಸಂತೆಕಳ್ಳರಂತೆ ಸರ್ಕಾರ ನಡೆಸುತ್ತಿರುವ ಬಿಜೆಪಿ ಮತ್ತು ಸಂಘಪರಿವಾರದ ವೈಖರಿಯನ್ನು ಬಿಂಬಿಸುತ್ತವಷ್ಟೆ.

ರಾಜ್ಯದಲ್ಲಿ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ ಯೋಜನೆಗಳಲ್ಲಿ ಬಂಡವಾಳ ಹೂಡಲು ವಿಶ್ವದಾದ್ಯಂತ ಬಂಡವಾಳಿಗರನ್ನು ಆಹ್ವಾನಿಸಿ ಆಯೋಜಿಸಲಾಗಿರುವ ವಿಶ್ವ ಬಂಡವಾಳ ಹೂಡಿಕೆದಾರರ ಸಮಾವೇಶ 2012 ಭರ್ಜರಿ ಪ್ರಚಾರದೊಂದಿಗೆ ನಡೆಯುತ್ತಿದೆ. ಕಳೆದ ಬಾರಿ ಜಿಮ್‌ಗೆ ಹೋಲಿಸಿದರೆ ಈ ಬಾರಿಯ ಜಿಮ್ ಸಪ್ಪೆಯೆನಿಸಿದರೆ ಬಿಜೆಪಿಯ ಒಳಜಗಳ ಮಾತ್ರವೇ ಕಾರಣವಾಗಿರದೆ ವಿಶ್ವದ ಆರ್ಥಿಕ ಹಿಂಜರಿತದ ಹಿನ್ನೆಲೆಯಲ್ಲಿ ನೈಜ ಕೈಗಾರಿಕೆಗಳಲ್ಲಿ ಬಂಡವಾಳ ಹೂಡಲು ಹಿನ್ನಡೆಯಾಗಿರುವುದೂ ಹೌದು. ಆದರೂ, ಮೊದಲ ದಿನದ ಅಂತ್ಯದಲ್ಲಿ ಕೈಗಾರಿಕಾ ಮಂತ್ರಿ ಮುರುಗೇಶ್ ನಿರಾಣಿಯವರು ಪತ್ರಿಕಾಗೋಷ್ಠಿ ಕರೆದು ಮೊದಲ ದಿನವೇ ತಮ್ಮ ನಿಗಧಿತ ಬಂಡವಾಳ ಗುರಿ ರೂ. 5.0ಲಕ್ಷ ಕೋಟಿ ದಾಟಿದೆಯೆಂದು ಹೇಳಿಕೆ ನೀಡಿ ದಂಗು ಬಡಿಸಿದರು! ಜೊತೆಗೆ ಸಾರ್ವಜನಿಕ ಬ್ಯಾಂಕುಗಳೂ ಸೇರಿದಂತೆ ಎಲ್ಲ ಬ್ಯಾಂಕುಗಳಿಂದ ಈ ಯೋಜನೆಗಳಿಗೆ ರೂ. 3.0 ಲಕ್ಷ ಕೋಟಿ ಸಾಲ ಸಾಲಭ್ಯ ಒದಗಿಸುವ ಭರವಸೆಯೂ ದೊರೆತಿದೆ ಎಂದರು. ಕಳೆದ ಬಾರಿಯ ಜಿಮ್ ಅನುಷ್ಠಾನ ಸಾಕಷ್ಟು ಟೀಕೆಗೆ ಒಳಗಾಗಿರುವ ಹಿನ್ನೆಲೆಯಲ್ಲಿ ಈ ಬಾರಿಯ ಜಿಮ್‌ನಲ್ಲಿ ಅನುಮೋದನೆಯಾಗುವ ಯೋಜನೆಗಳ ಪೈಕಿ ಕನಿಷ್ಠ ಶೇ. 60ರಷ್ಟು ಮುಂದಿನ 5 ವರ್ಷದೊಳಗೆ ಅನುಷ್ಠಾನವಾಗುವ ಭರವಸೆ ತಮಗಿದೆ ಎಂದರು.






ಮೈ.ಚ ಜಯದೇವ ಸೇರಿದಂತೆ ಹಲವು ಆರ್ ಎಸ್ ಎಸ್ ಮುಖಂಡರು ವೇದಿಕೆಯ ಬಲಭಾಗದಲ್ಲಿ ಆಸೀನರಾಗಿದ್ದು ವಿಶ್ವ ಬಂಡವಾಳಿಗರ ಜೊತೆ ದೇಶೀ ಬಂಡವಾಳಿಗರ ಸಖ್ಯತೆಯನ್ನು ವೀಕ್ಷಿಸಿದರು.

2010ರ ಜಿಮ್‌ನಲ್ಲಿ ಸುಮಾರು 390ಕ್ಕೂ ಹೆಚ್ಚು ಕೈಗಾರಿಕಾ ಯೋಜನೆಗಳಿಗೆ ರೂ. 4.0 ಲಕ್ಷ ಕೋಟಿ ಮೊತ್ತ ಬಂಡವಾಳ ಹೂಡಿಕೆ ಒಡಂಬಡಿಕೆಗಳನ್ನು (ಎಂ.ಒ.ಯು) ಸರ್ಕಾರ ಮಾಡಿಕೊಂಡಿತ್ತು. ಇದರಲ್ಲಿ ಅನುಷ್ಠಾನವಾಗಿರುವ ಯೋಜನೆಗಳತ್ತ ಕಣ್ಣು ಹಾಯಿಸಿದರೆ ಎರಡು ವರ್ಷಗಳ ನಂತರ ಕಾರ್ಯರೂಪಕ್ಕೆ ಬಂದಿರುವ ಯೋಜನೆಗಳು ಕೇವಲ 5,000 ಕೋಟಿ ಬಂಡವಾಳ ಹೂಡಿಕೆ ಮಾಡಿವೆಯಷ್ಟೆ ಇನ್ನು ಹಲವು ಯೋಜನೆಗಳು ವಿವಿಧ ಅನುಮೋದನಾ ಪ್ರಕ್ರಿಯೆಯಲ್ಲಿಯೇ ಇವೆಯೆಂದು ಕೈಗಾರಿಕಾ ಮಂತ್ರಿಗಳು ಹೇಳಿಕೊಳ್ಳುತ್ತಿದ್ದಾರೆ.

ಈ ಬಾರಿಯ ಜಿಮ್‌ನಲ್ಲಿ 6500 ಆಸನಗಳಿದ್ದು ಉದ್ಘಾಟನಾ ಸಮಾರಂಭದಲ್ಲಿ ಅವು ಅರ್ಧದಷ್ಟೂ ಭರ್ತಿಯಾಗಿರದೇ ಅಧಿಕಾರಿಗಳನ್ನು ಪೇಚಿಗೆ ಸಿಲುಕಿಸಿತ್ತು. ಕಾಲೇಜು ಈಗಷ್ಟೆ ಮುಗಿಸಿರುವ ನೂರಾರು ಇಂಜಿನೀಯರಿಂಗ್ ಪದವೀಧರರನ್ನು ಎಂ.ಎಂ ಆಕ್ಟೀವ್ ಎಂಬ ಖಾಸಗಿ ಸಂಸ್ಥೆಯು ಪಾರ್ಟ್ ಟೈಂ ಕೆಲಸಕ್ಕೆ ಕರೆತಂದಿತ್ತು.



ಜಿಮ್ ವಿರುದ್ಧ ಪ್ರತಿಭಟನೆ:

ಮುಖ್ಯ ಮಂತ್ರಿ ಸದಾನಂದಗೌಡರು ಅಧ್ಯಕ್ಷತೆಯ ಭಾಷಣ ಮಾಡಲು ಆರಂಭಿಸುತ್ತಿದ್ದಂತೆಯೇ ಮೂರ್‍ನಾಲ್ಕು ರೈತರು ಹಸಿರು ಟವೆಲ್ ಹಾರಾಡಿಸಿ ಜಿಮ್ ವಿರುದ್ಧ ಘೋಷಣೆ ಕೂಗಿದರು. ಸಿವಿಲ್ ಸಮವಸ್ತ್ರದಲ್ಲಿದ್ದ ಪೋಲೀಸರು ಅವರ ಬಾಯಿ ಮೂಗು ಎಲ್ಲವನ್ನು ಬಿಗಿಯಾಗಿ ಹಿಡಿದು ಹೊರಗೆ ಹಾಕಿದರು.

ಹೊರಗಡೆ ಕರ್ನಾಟಕ ಪ್ರಾಂತ ರೈತ ಸಂಘ ಮತ್ತು ಕರ್ನಾಟಕ ರಾಜ್ಯ ಕೃಷಿ ಕೂಲಿಕಾರರ ಸಂಘದ ವತಿಯಿಂದ ಪ್ರತಿಭಟನೆ ನಡೆಸಿ ರಸ್ತೆ ತಡೆ ನಡೆಸಲು ಯತ್ನಿಸಿದ್ದರಿಂದ ಪ್ರವೇಶ ದ್ವಾರ ಪೂರ್ತಿ ಜಾಮ್ ಆಗಿ ಸಮಾವೇಶದ ಪ್ರತಿನಿಧಿಗಳು ಸುಲಭವಾಗಿ ಒಳಬರಲಾಗದೇ ಉದ್ಘಾಟನಾ ಸಮಾರಂಭದ ಅರ್ಧದಷ್ಟು ಆಸನಗಳು ಖಾಲಿ ಹೊಡೆಯುತ್ತಿದ್ದವು.

ರಾಜ್ಯದ ದುಡಿಯುವ ಕೈಗಳಿಗೆ ಉದ್ಯೋಗ ಒದಗಿಸಲು ಮತ್ತು ಸರ್ವಾಂಗೀಣ ಅಭಿವೃದ್ಧಿಗಾಗಿ ಕೈಗಾರಿಕೆಗಳು ಅತ್ಯವಶ್ಯ. ಆದರೆ ಎಂತಹ ಕೈಗಾರಿಕೆಗಳು ಬೇಕು? ಖಂಡಿತ ಕೈಗಾರಿಕೆ ಮತ್ತು ಮೂಲಭೂತ ಸೌಕರ್ಯ ಯೋಜನೆಗಳ ಹೆಸರಿನಲ್ಲಿ ಖೇಣಿಯಂತಹ ರಿಯಲ್ ಎಸ್ಟೇಟ್ ಮತ್ತು ಇತರೆ ಭೂಮಿ ನುಂಗುವ ಯೋಜನೆಗಳು ಬೇಡವೇ ಬೇಡ. ಈ ನಿಟ್ಟಿನಲ್ಲಿ ರಾಜ್ಯದ ಜನತೆ ಹೋರಾಟಗಳ ಮೂಲಕ ಜನಪರ ಕೈಗಾರಿಕಾ ನೀತಿಗಾಗಿ ಒತ್ತಾಯಿಸಬೇಕಿದೆ.

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027
Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560 027 Karnataka (State) and Published at BANGALORE No 12, 18th Cross, S.R.Nagar, BANGALORE-560027 Editor S.Y.GURURSHANTH, No12: 18th Cross, S.R.Nagar, BANGALORE - 560027
Editor S.Y.GURUSHANTH